ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ - 3 : ಸಂಚಿಕೆ - 2 ಆಗಸ್ಟ್ 2021 ಪುಟ - 36 ₹ 28/-



ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022

ಡಾ. ದೊರೆ ಅವರು ಹೀಗಿದ್ದರು ಸ್ವಾಮಿ

(10.04.1918 – 26.05.2021)

– ಇಂದಿರಾ ಕೃಷ್ಣಪ್ಪ



ಹಿಂದಿನ ಸಂಚಿಕೆಯಿಂದ ಮುಂದುವರಿದಿದ್ದೆ....

ದೊರೆಸ್ವಾಮಿ ಅವರು ಏಪ್ರಿಲ್ 10, 1918ರಲ್ಲಿ ಹಾರೋಹಳ್ಳಿಯಲ್ಲಿ ಜನಿಸಿದವರಾಗಿದ್ದಾರೆ. ಮಹಾತ್ಮ ಗಾಂಧಿ ಅವರ "ಮೈ ಅರ್ಲಿ ಲೈಫ್" ಕೃತಿಯಿಂದ ಪ್ರೇರಿತರಾಗಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅವರ ಪ್ರೌಢ ಶಿಕ್ಷಣದ ಸಮಯದಲ್ಲಿ, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಜಾಗೃತಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಎಲ್ಲ ನಾಯಕರ ಜೊತೆ ಇವರನ್ನೂ ಬಂಧಿಸಲಾಗಿತ್ತು. ಅನಂತರ ವಿದ್ಯಾರ್ಥಿಗಳನ್ನು ಸಂಘಟಿಸಿ ಅನೇಕ ಹೋರಾಟಗಳನ್ನು ನಡೆಸಿದರು. ಇದರಿಂದಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದ ಅನೇಕ ನಾಯಕರುಗಳ ಒಡನಾಟ ಹೆಚ್ಚಾಯಿತು. ಇವರು ಬಿ.ಎಸ್ಸಿ. ಪದವಿ ಪೂರ್ಣಗೊಳಿಸಿ, ಉಪನ್ಯಾಸಕರಾಗಿ ವೃತ್ತಿಯನ್ನು ಆರಂಭಿಸಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಪಾಲ್ಗೊಂಡರು. ಅವರ ಸಹೋದರ ಹೆಚ್.ಎಸ್. ಸೀತಾರಾಮ್, ಸರ್ದಾರ್ ವೆಂಕಟರಾಮಯ್ಯ ಮತ್ತು ಎ.ಜಿ. ರಾಮಚಂದ್ರರಾವ್ ಬ್ರಿಟಿಷರ ವಿರುದ್ಧ ಪ್ರತಿಭಟನೆಯನ್ನು ಆಯೋಜಿಸಿದ್ದರು. ಎಚ್.ಎಸ್. ಸೀತಾರಾಮ್ ನಂತರ ಬೆಂಗಳೂರಿನ ಮೇಯರ್ ಆಗಿಯೂ ಸೇವೆ ಸಲ್ಲಿಸಿದ್ದರು. ಸರ್ಕಾರಿ ದಾಖಲೆಗಳನ್ನು ಹಾನಿ ಮಾಡಲು ಬಳಸಲು ಟೈಮ್ ಬಾಂಬ್‌ನ್ನು ತಯಾರಿಸಿದ ಆರೋಪದಲ್ಲಿ ಹೆಚ್.ಎಸ್.ಡಿ. ಅವರು 14 ತಿಂಗಳ ಕಾಲ ಸೆರೆವಾಸ ಅನುಭವಿಸಬೇಕಾಯಿತು. ಅನಂತರ ಗಾಂಧಿ ಅವರ ತತ್ವ ಸಿದ್ಧಾಂತಗಳಿಂದ ಪ್ರೇರಿತರಾಗಿ ಅಹಿಂಸೆ ಮತ್ತು ಸತ್ಯಾಗ್ರಹದ ಆದರ್ಶಗಳನ್ನು ಅನುಸರಿಸಲು ನಿರ್ಧರಿಸಿದರು. ಇವರು ಸಾಹಿತ್ಯ ಮಂದಿರವೆಂಬ ಪುಸ್ತಕ ಮಳಿಗೆ ಮತ್ತು ಪ್ರಕಾಶನ ಡಿಪೋವನ್ನು ಸ್ಥಾಪಿಸಿದರು. ಅಲ್ಲಿ ಆರ್.ಕೆ. ನಾರಾಯಣ್ ಮತ್ತು ಕೆ.ಎಸ್. ನರಸಿಂಹಸ್ವಾಮಿ ಇನ್ನೂ ಮುಂತಾದವರು ಇವರ ಆತ್ಮೀಯ ಬಳಗದಲ್ಲಿದ್ದರು.

ಪತ್ರಕರ್ತರಾಗಿ ಹೆಚ್.ಎಸ್.ಡಿ. : "ಪೌರವಾಣಿ" ಪತ್ರಿಕಾ ಸಂಪಾದಕತ್ವವನ್ನು 1947ರ ಜನವರಿಯಲ್ಲಿ ಹಿಂದಿನ ಸಂಪಾದಕರಾಗಿದ್ದ ಭದ್ರಣ್ಣ ಅವರಿಂದ ಪಡೆದ ನಂತರ ಮೈಸೂರಿನಲ್ಲಿದ್ದ ಸಾಹಿತ್ಯ ಮಂದಿರ ಪ್ರಕಾಶನ ಮತ್ತು ಪುಸ್ತಕ ಮಳಿಗೆಯನ್ನು ಖಾಲಿ ಮಾಡಿ ಬೆಂಗಳೂರಿಗೆ ಬಂದು ನೆಲಸಿದರು. ಈ ಪತ್ರಿಕೆಯಲ್ಲಿ 'ಮೈಸೂರು ಚಲೋ' ಕುರಿತಾಗಿ ತಿ.ತಾ. ಶರ್ಮ ಅವರ ಲೇಖನಗಳನ್ನು ಪ್ರಕಟಿಸಿದ್ದಕ್ಕಾಗಿ ಅಂದಿನ ಆರ್ಕಾಟ ಸರ್ಕಾರ, ಪೌರವಾಣಿ ಪತ್ರಿಕಾ ಕಚೇರಿಗೆ 1947ರ ಆಗಸ್ಟ್ 30ರಂದು ಬೀಗಮುದ್ರೆ ಹಾಕಿತ್ತು. ಆದಾಗ್ಯೂ, ದೊರೆಸ್ವಾಮಿ ಅವರು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಹಿಂದೂಪುರಕ್ಕೆ ಉಟ್ಟಬಟ್ಟೆಯಲ್ಲಿ ಹೊರಟು ಕೇವಲ 8 ದಿನದೊಳಗೆ 1947ರ ಸೆಪ್ಟಂಬರ್ 7 ರಂದು ಪೌರವಾಣಿ ಪತ್ರಿಕೆ ಪ್ರಕಟಿಸಿದರು. ಮತ್ತು ನಂತರದ ಸಂಚಿಕೆಗಳನ್ನು ಅಂದಿನ ಸ್ವಾತಂತ್ರ್ಯ ಚಳುವಳಿಗಾರರು ಬೆಂಗಳೂರಿಗೆ ತಂದು ವಿತರಣೆ ಮಾಡುತ್ತಿದ್ದರು. ಆದಾಗ್ಯೂ ಆಗಿನ ಸರ್ಕಾರ ಆ ಪತ್ರಿಕೆ, ಮೈಸೂರು ಸಂಸ್ಥಾನಕ್ಕೆ ಬರಬಾರದೆಂದು ಆದೇಶ ಹೊರಡಿಸಿತ್ತು. ಛಲ ಬಿಡದೆ, ಅದೇ ಪತ್ರಿಕೆಯನ್ನು 'ಪೌರವೀರ' ಎಂಬ ನಾಮಾಂಕಿತದಿಂದ ಪ್ರಕಟಿಸಲಾಯಿತು. ಭಾರತ ಸ್ವಾತಂತ್ರ್ಯವಾದ ನಂತರ ಬೆಂಗಳೂರಿಗೆ ಬಂದು, ಇಲ್ಲಿಂದಲೇ ಪತ್ರಿಕೆ ಹೊರತಂದರು. 1953ರಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಕಾರ್ಯ ನಿರ್ವಹಿಸಿದರು ಮತ್ತು ಪತ್ರಕರ್ತರ ಸಹಕಾರ ಸಂಘದ ಸ್ಥಾಪನೆಗೆ ಕಾರಣಕರ್ತರಾದರು.

ಏಕೀಕರಣ ಚಳುವಳಿ : ಏಕೀಕರಣ ಚಳವಳಿಯಲ್ಲಿ ಬಳ್ಳಾರಿ ಸಿದ್ದಮ್ಮ, ಬಿ.ಎನ್. ಬೋರೇಗೌಡ ನರಸಿಂಹಯ್ಯನವರೊಡಗೂಡಿ, ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿ, ಜನಜಾಗೃತಿಗೊಳಿಸಿದ್ದರು. ನಂತರ ಏಕೀಕರಣವನ್ನು ಒತ್ತಾಯಿಸಲು, ದೆಹಲಿಗೆ ಹೊರಟ ನಿಯೋಗದೊಂದಿಗೆ ತೆರಳಿ, ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರು, ವಲ್ಲಭಭಾಯ್ ಪಟೇಲ್ ಅವರನ್ನು ಭೇಟಿ ಮಾಡಿ, ನಿವೇದನೆ ಸಲ್ಲಿಸಿದ್ದರು. ಅಲ್ಲಿಂದ ಸಂದೇಶ ತಂದು, "ಮಹಾರಾಜರಿಗೆ ಸಿಂಹಾಸನ ತೆರವು ಮಾಡಬೇಕೆಂಬ" ನಿವೇದನೆಯನ್ನು ಪತ್ರಿಕೆಗಳ ಮೂಲಕ ಪ್ರಕಟಿಸಿದರು. ಅರಸೀಕೆರೆಯಲ್ಲಿ ಬಳ್ಳಾರಿ ಸಿದ್ದಮ್ಮ ಅವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಮ್ಮೇಳನ, ಫಜಲ್‌ಅಲಿ ಆಯೋಗದ ಮುಂದೆ ಪ್ರಸ್ತಾವನೆ ಮಂಡನೆ, 'Welcome Bellary' ಸ್ಮರಣ ಸಂಚಿಕೆ ಪ್ರಕಟಣೆ ಮಾಡಿದ್ದರು.

ವಿವಾಹ : ಶ್ರೀಮತಿ ಲಲಿತಮ್ಮ ಅವರನ್ನು 1950ರಲ್ಲಿ ವಾಸವಿ ಧರ್ಮಶಾಲೆಯಲ್ಲಿ ವಿವಾಹವಾದರು. ಇವರಿಗೆ ಒಬ್ಬಳು ಹೆಣ್ಣು ಮಗಳು ಮತ್ತು ಒಬ್ಬ ಮಗನಿದ್ದಾನೆ.

ಸಾರ್ವಜನಿಕ ಕಾರ್ಯಗಳು : ರಾಷ್ಟ್ರಮಟ್ಟದ ಭಾರತ ಸೇವಕ ಸಮಾಜದ ಮೈಸೂರು ಪ್ರಾಂತ್ಯದ ಸಂಚಾಲಕರಾಗಿ ದೊರೆಸ್ವಾಮಿ ಅವರು ಕಾರ್ಯನಿರ್ವಹಿಸಿದರು. ದಾಸರ ಕಾಲೋನಿ, ವಾಲ್ಮೀಕಿನಗರ ಸುಧಾರಣೆ, ಚರ್ಮೋದ್ಯೋಗ ಸಹಕಾರ ಸಂಘ ಸ್ಥಾಪನೆ, ಭಾರತ ಸಾಧು ಸಮಾಜ ಆರಂಭ, ಶಾಲಾ ಶಿಕ್ಷಕರಿಗೆ ತರಬೇತಿ, ನರ್ಸರಿ ಸ್ಕೂಲ್ ಟೀಚರ್ ಅಸೋಸಿಯೇಷನ್ ಮತ್ತು ನರ್ಸರಿ ಟೀಚರ್ಸ್ ಟ್ರೈನಿಂಗ್ ಕಾಲೇಜು ಸ್ಥಾಪನೆ ಮಾಡಿದ್ದರು. ಅಂದಿನ ಕೆಂಗಲ್ ಹನುಮಂತಯ್ಯ ಸರ್ಕಾರದಿಂದ ಬಂದ ವಿಧಾನ ಪರಿಷತ್ ಸದಸ್ಯತ್ವದ ಪ್ರಸ್ತಾವನೆ ನಿರಾಕರಣೆ ಮಾಡಿದ್ದರು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿ, 14 ತಿಂಗಳ ಸೆರೆಮನೆ ವಾಸ. ಕರ್ನಾಟಕ ಸರ್ವೋದಯ ಮಂಡಳಿಯಲ್ಲಿ ಭಾಗಿ ಭೂದಾನ ಚಳುವಳಿಯಲ್ಲಿ ಭಾಗಿ ಮತ್ತು ಹನುಮಂತನಗರ ಸಹಕಾರ ಬ್ಯಾಂಕ್ ಸ್ಥಾಪನೆ ಮತ್ತು ಭಾರತ ಮಾತಾ ವಿದ್ಯಾ ಮಂದಿರ ಸ್ಥಾಪನೆಗೆ ಅಪಾರವಾಗಿ ಶ್ರಮಿಸಿದರು.

ಮುಂದುವರಿಯುವುದು...



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ

Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com



ಈ ಸಂಚಿಕೆಯಲ್ಲಿ

ಸಂಪಾದಕೀಯ



– ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳು,

ವರ್ತಮಾನದ ಭಾರತದಲ್ಲಿ, ಆರೋಗ್ಯ ಮತ್ತು ಶಿಕ್ಷಣದ ಸಮಸ್ಯೆಗಳು ಚಿಂತಾಜನಕವಾಗಿದ್ದು, ಕರೋನಾ ವೈರಸ್ ರೂಪಾಂತರಗಳಿಂದ ಡೆಲ್ಟಾ ವೈರಸ್, ಬ್ಲಾಕ್ ಫಂಗಸ್ ಇತ್ಯಾದಿಗಳು ಆಗಸ್ಟ್ ತಿಂಗಳ ಅಂತ್ಯದಲ್ಲಿ ಮತ್ತು ಸೆಪ್ಟಂಬರ್‌ನಲ್ಲಿ 1:2, 1:4 ರಂತೆ ಹಬ್ಬುವ ಆತಂಕ, ಭಯ ದೇಶಾದ್ಯಂತ ಮಡುಗಟ್ಟಿದೆ. ಕರೋನಾದಿಂದ ಪಾರಾಗುವ ಹಲವು ಮಾರ್ಗಗಳು ಕಳೆದೆರಡು ವರ್ಷಗಳಿಂದ ಸರ್ಕಾರ ಮತ್ತು ಸಮಾಜ ಭಾಂದವರು ನಿರಂತರವಾಗಿ ಮಾಡುತ್ತಲೇ ಇದ್ದಾರೆ. ಕೋವಿಡ್ ಆಸ್ಪತ್ರೆಗಳು, ಕ್ವಾರಂಟೇನ್ ಕೇಂದ್ರಗಳು, ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಗಳು, ಆಕ್ಸಿಜನ್, ವೆಂಟಿಲೇಟರ್ ಬೆಡ್‌ಗಳು ಸಾಮಾನ್ಯ ಲಕ್ಷಣಗಳ ತಪಾಸಣಾ ಕೇಂದ್ರಗಳು, ಇತ್ಯಾದಿಗಳನ್ನು ಮಾಡಲಾಗುತ್ತಿದೆ. ಆದರೆ ಇವೆಲ್ಲವನ್ನು ವ್ಯವಸ್ಥಿತವಾಗಿ ಜನರಲ್ಲಿ ತೆಗೆದುಕೊಂಡೊಯ್ಯುವ ಕ್ರಮಗಳಿಲ್ಲದೆ, ದೂರದರ್ಶಿತ್ವದ ಚಿಂತನೆಯಿಲ್ಲದೆ, ಭ್ರಷ್ಟಾಚಾರ, ಅವ್ಯವಹಾರದ ಜಾಲದೊಳಗೆ ಸಿಲುಕಿ, ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿರುವಂತೆ ದೃಗೋಚರವಾಗುತ್ತಿದೆ. ಭಾರತ ಆರೋಗ್ಯದ ಸ್ಥಿತಿಗತಿಗಳು ವಿಶ್ವಮಟ್ಟದಲ್ಲಿ ಸುದ್ದಿಯಾಗುತ್ತಿದೆ. ಉತ್ತರ ಪ್ರದೇಶ, ಬಿಹಾರ ಮುಂತಾದ ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ, ಮಕ್ಕಳು ಮೆದುಳು ರೋಗಕ್ಕೆ ಬಲಿಯಾಗುತ್ತಿದ್ದಾರೆ. ಈ ಸಾವು ನ್ಯಾಯವೇ? ಎಂದು ಸುಪ್ರಿಂಕೋರ್ಟ್ ಮತ್ತು ಹೈಕೋರ್ಟ್‌ಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಕೇಳಲಾರಂಭಿಸಿವೆ. ಬಹುತೇಕ ಬಡಮಕ್ಕಳೇ ಬಲಿಯಾಗುತ್ತಿರುವುದೇಕೆ? ಎಂಬ ಪ್ರಶ್ನೆ ಮೇಲೇಳುತ್ತಿದೆ. ಬಡತನ, ಹಸಿವು, ಅಪೌಷ್ಠಿಕತೆ, ನಿರುದ್ಯೋಗ, ವ್ಯಾಕ್ಸಿನ್‌ಗಳು ದೊರಕದಿರುವುದು ಕಾರಣವಾಗಿದೆಯೆಂಬುದು ಸಾಮಾನ್ಯ ಪ್ರಜೆಗೂ ಅರ್ಥವಾಗುತ್ತಿದ್ದರೂ ಪ್ರಜಾಪ್ರತಿನಿಧಿಗಳು, ಚುನಾವಣೆ, ಅಧಿಕಾರ ಹಂಚಿಕೆ, ಮುಖ್ಯಮಂತ್ರಿ ಬದಲಾವಣೆ, ಪ್ರತಿಪಕ್ಷಗಳ ಮೇಲೆ ಕೆಸರೆರಚಾಟದಲ್ಲಿ ತಲ್ಲೀನವಾಗುತ್ತಿರುವುದು ಜನರ ಅರಿವಿಗೆ ನಿಚ್ಚಳವಾಗಿ ಕಂಡಿವೆ.

ಭಾರತ ಕೃಷಿಪ್ರಧಾನ ದೇಶ ಮತ್ತು ಮಳೆಯನ್ನೇ ಆಧರಿಸಿದ ಕೃಷಿ ಕ್ಷೇತ್ರ ನಮ್ಮದು. ಸಕಾಲಕ್ಕೆ ಅಗತ್ಯ ಪ್ರಮಾಣದ ಮಳೆ ಬಾರದಿದ್ದಲ್ಲಿ, ರೈತರು ಬಿತ್ತನೆ, ಗೊಬ್ಬರ ಮತ್ತು ಇತರೆ ಕೃಷಿ ಕೆಲಸಗಳು, ಬಂಡವಾಳವೂ ಮಣ್ಣು ಪಾಲಾಗುತ್ತದೆ. ಮಳೆಬಾರದ ಬರಗಾಲ, ಅತಿವೃಷ್ಠಿಯ ಪ್ರವಾಹ, ಪ್ರಾಕೃತಿಕ ವಿಕೋಪ ಎರಡರಿಂದಲೂ ಉತ್ತರ ಕರ್ನಾಟಕದ ರೈತರೂ ಹೈರಾಣಾಗಿದ್ದಾರೆ. ಕೋವಿಡ್‌ನಿಂದಾಗಿಯೂ ಬಳಲಿ ಬೆಂಡಾಗಿದ್ದರೂ, ರೈತರು ಛಲಬಿಡದೆ ತ್ರಿವಿಕ್ರಮನಂತೆ, ದೇಶಕ್ಕೆ ಅನ್ನವನ್ನು ನೀಡಿ ಜನರ ಹಸಿವನ್ನು ನೀಗಿಸಿದ್ದಾರೆ. ಆದರೆ ಸರ್ಕಾರಗಳು ಅವರಿಗೆ ಬೆಳೆದ ಬೆಳೆಗೆ ಸೂಕ್ತ ಬೆಲೆ, ಕೋಲ್ಡ್‌ಸ್ಟೋರೇಜ್, ರೀಟೇಲ್ ಮಾರುಕಟ್ಟೆ ಸೌಲಭ್ಯ, ಹಣಕಾಸಿನ ಸೌಲಭ್ಯ, ಗೊಬ್ಬರ ಸಬ್ಸಿಡಿ, ಕ್ರಿಮಿನಾಶಕ, ಯಂತ್ರೋಪಕರಣಗಳ ಸೌಲಭ್ಯ ಮತ್ತು ಸಾರಿಗೆ ವ್ಯವಸ್ಥೆಯನ್ನೂ ಕರೋನಾ ಸಂದರ್ಭದಲ್ಲಿ ಸರ್ಕಾರಗಳು ನಿರ್ವಂಚನೆಯಿಂದ ಸಕಾಲದಲ್ಲಿ ರೈತರಿಗೆ ಒದಗಿಸಬೇಕಾದ ತುರ್ತು ಸಂದರ್ಭ ನಮ್ಮೆದುರಿಗಿದೆ. ಕರೋನ ವಿಷಮ ಪರಿಸ್ಥಿತಿಯೊಂದಿಗೆ ರೈತರ ಕೃಷಿ ಕೆಲಸ ಸ್ಥಗಿತವಾದರೆ ಎದುರಾಗುವ ಆಹಾರದ ಕೊರತೆಯನ್ನು ಜಗತ್ತಿನ ಯಾವ ದೇಶವೂ ಪೂರೈಸಲು ಸಾಧ್ಯವಾಗದು. ಆರ್ಥಿಕ ಕ್ಷೇತ್ರದ ಬಗ್ಗೆ ಚರ್ಚೆಯಾದಷ್ಟು, ಶಿಕ್ಷಣದ ಬಗ್ಗೆ ಆಲೋಚಿಸಿದ್ದು ತೀರಾ ಕಡಿಮೆ ಎನ್ನಬಹುದು. ಶಿಕ್ಷಣರಂಗದ ಸ್ಥಗಿತತೆಯಿಂದಾಗುವ ದುಷ್ಪರಿಣಾಮಗಳು ತತ್‌ಕ್ಷಣವೇ ಬೆಳಕಿಗೆ ಬಾರದೆಯಿರುವುದರಿಂದ ಕಳೆದ ಒಂದು ವರ್ಷದಿಂದ ಸರ್ಕಾರ ಮತ್ತು ಜನಗಳು, ಶೈಕ್ಷಣಿಕ ಕ್ಷೇತ್ರ ಅವನತಿಯೆಡೆಗೆ ಸಾಗಿರುವುದನ್ನು ಈಗ ಗಂಭೀರವಾಗಿ ಪರಿಗಣಿಸಿದ್ದಾರೆ. ಆನ್‌ಲೈನ್ ಶಿಕ್ಷಣಕ್ಕೆ ಪೂರ್ವತಯಾರಿಗಳೇ ಇಲ್ಲದೆ, ಶಾಲೆಗಳನ್ನೆಲ್ಲಾ ಮುಚ್ಚಿ, ವಿದ್ಯಾರ್ಥಿಗಳನ್ನು ಶಿಕ್ಷಕರ ಮೂಲಕ ಮೊಬೈಲ್ ಶಾಲೆಗಳಿಗೆ ಕರೆಯಲಾಗಿದೆ. ಕೇಂದ್ರ ಸರ್ಕಾರದ ಅಧಿಕೃತ ಅಂಕಿಅಂಶದ ಪ್ರಕಾರ ಕರ್ನಾಟಕದಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ, 30 ಲಕ್ಷಕ್ಕೂ ಅಧಿಕ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸಲಾಗಿದೆ. ಎಲ್ಲಾ ರಾಜ್ಯಗಳ ಅಂಕಿ ಅಂಶಗಳನ್ನು ತುಲನೆ ಮಾಡಿದಲ್ಲಿ, ದೇಶದಲ್ಲಿ ಶೇ. 50ರಷ್ಟು ಮಕ್ಕಳು ಶಿಕ್ಷಣದಿಂದ ನಿರ್ಗಮಿಸಲು ಕಾರಣವಾಗಿದೆ. ಇದು ಮೊಬೈಲ್ ಮಕ್ಕಳಲ್ಲಿ ಇದೆಯೋ ಇಲ್ಲವೋ, ಎನ್ನುವ ಒಂದೇ ಕಾರಣದಿಂದ ಆಧರಿಸಿದ ಮಾಹಿತಿಯಾಗಿದೆ. ಮೊಬೈಲ್ ಲಭ್ಯತೆ, ಕರೆನ್ಸಿ ಹಾಕಿಸುವ ಶಕ್ಯತೆ, ಇಂಟರ್‌ನೆಟ್ ಸೌಲಭ್ಯ, ಖಾಸಗಿ ಶಾಲೆಗಳ ಶುಲ್ಕ ವಸೂಲಿ ಕ್ರಿಯೆ, ಶಾಲೆಗಳಿಂದ ವಿಮುಖರಾದ ಶಿಕ್ಷಕವೃಂದ, ಸಿಬ್ಬಂದಿವೇತನ, ಅನುದಾನದ ಕೊರತೆ, ರೈತರು, ಕಾರ್ಮಿಕರ ಮಕ್ಕಳು ಬಿಸಿಯೂಟದಿಂದ ವಂಚಿತರಾಗಿರುವುದು ಮಕ್ಕಳ ಮಾನಸಿಕ ಒತ್ತಡ, ಮರಳಿ ಜೀತ, ಬಾಲ್ಯವಿವಾಹ ಇನ್ನೂ ಮುಂತಾದ ಸಮಸ್ಯೆಗಳ ಮಹಾಪೂರದಿಂದ ಆನ್‌ಲೈನ್ ಶೈಕ್ಷಣಿಕ ವ್ಯವಸ್ಥೆ ದೊಡ್ಡ ಸೋಲನ್ನು ಅನುಭವಿಸಿದೆ. ಪರಿಶಿಷ್ಠ ಸಮುದಾಯದವರ 2019ರ ಶಿಕ್ಷಣದ ಅಂಕಿ ಅಂಶವನ್ನು ವೀಕ್ಷಿಸಿದಾಗ ಈ ಅಂಶಗಳು ಸ್ಪಷ್ಟವಾಗುತ್ತವೆ. ಪ್ರಾಥಮಿಕ ಶಿಕ್ಷಣಕ್ಕಿಂತಲೂ ಕಡಿಮೆ ವಿದ್ಯಾಭ್ಯಾಸ ಹೊಂದಿರುವವರು – 31.3%, ಪ್ರಾಥಮಿಕ ಶಿಕ್ಷಣ – 28.6%, ಮಾಧ್ಯಮಿಕ–13.9%, ಮೆಟ್ರಿಕ್, ಪಿ.ಯು.ಸಿ.–18.8%, ಟೆಕ್ನಿಕಲ್ ಮತ್ತು ಡಿಪ್ಲೊಮ–0.9%, ಪದವಿ ಮತ್ತು ಉನ್ನತ ಶಿಕ್ಷಣ–4.1% ಹೀಗಿರುವ ಅಂಕಿಅಂಶವು ಬಡತನ, ಜಾತೀಯತೆ, ಲಿಂಗತಾರತಮ್ಯದ ಕಾರಣದಿಂದ ಮಕ್ಕಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಕೇಂದ್ರ ಸರ್ಕಾರ ಜಾರಿಮಾಡಲು ಸಿದ್ಧವಾಗಿರುವ ಹೊಸ ಶಿಕ್ಷಣ ನೀತಿ–2020, ಕಳೆದ ಮೂರು ದಶಕಗಳಿಂದ ಪಾಲಿಸಿದ, ಜಾಗತೀಕರಣ ಭಾಗವೇ ಆಗಿದೆ. ಗಂಭಿರವಾಗಿ ಈ ನೀತಿಯನ್ನು ಅವಲೋಕಿಸಿದಾಗ ಉದ್ಯೋಗ ಖಾತ್ರಿಯ ಪ್ರಸ್ತಾಪವೇ ಇಲ್ಲದಿರುವುದು, ಹಿಂದಿ–ಸಂಸ್ಕೃತ ಭಾಷೆಗಳ ಪ್ರಾಶಸ್ತ್ಯ, ಬಾಲವಾಡಿ ಪೂರ್ವದಿಂದ ಉನ್ನತ ಶಿಕ್ಷಣದವರೆಗೆ ಪಠ್ಯರಚನೆ, ಕಲಿಕಾವಿಧಾನ, ಬೋಧನಾಕ್ರಮ, ಶಿಕ್ಷಕ ತರಬೇತಿ, ನೇಮಕಾತಿ, ಶುಲ್ಕ ನಿರ್ಣಯ ಇತ್ಯಾದಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ಕೇಂದ್ರೀಕರಿಸುವ ನಿಲುವುಗಳು ಇದರಲ್ಲಿವೆ. ಹಾಗೂ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನೇ ಖಾಸಗೀಕರಣ ಮಾಡುವ ಭಾರಿ ಕಾರ್ಪೋರೇಟ್‌ಗಳ ಕೈಗೆ ಹಸ್ತಾಂತರಿಸುವ ಬಹುದೊಡ್ಡ ಹುನ್ನಾರವೇ ಅಡಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಇದರಿಂದಾಗಿ ದೇಶದ ಬಹುಸಂಖ್ಯಾತ ದಲಿತ, ದಮನಿತ, ಆದಿವಾಸಿ, ಬಡ ಹಿಂದುಳಿದ ಸಮುದಾಯ, ಅಲ್ಪಸಂಖ್ಯಾತರು ಮತ್ತು ಮಹಿಳೆಯರನ್ನು ಸಾರಾಸಗಟಾಗಿ ದೂಗವಿಡುವ ಪ್ರಕ್ರಿಯೆಯಾಗಿ ಕಂಡು ಬರುತ್ತಿದೆ. ಶಿಕ್ಷಣದ ಮಾರುಕಟ್ಟೆಯಲ್ಲಿ ವಿದ್ಯೆಯನ್ನು ಕೊಂಡುಕೊಳ್ಳಲು ಶಕ್ತರಾಗಿರುವ ಮಂದಿಗೆ ಮಾತ್ರ ಶಿಕ್ಷಣ ಎಂಬಂತಾಗಿದೆ. ಇದನ್ನು ಅನೇಕ ಶಿಕ್ಷಣ ತಜ್ಞರು, ವಿದ್ವಾಂಸರು, ಚಿಂತಕರು, ನೇತಾರರು ಮೊದಲಿನಿಂದಲೂ ವಿರೋಧಿಸುತ್ತಲೇ ಇದ್ದಾರೆ. ಮತ್ತು 2020ರ ಈ ಶಿಕ್ಷಣ ನೀತಿಯ ಕರಡನ್ನು ಸಾರ್ವಜನಿಕ ಚರ್ಚೆಗೆ, ಸಂಸತ್ತಿನ ಚರ್ಚೆಗೆ, ಮಂತ್ರಿ ಮಂಡಲದ ಚರ್ಚೆಗೆ ಒಳಪಡಿಸಿ, ಬರುವ ತಿದ್ದುಪಡಿಗಳೊಂದಿಗೆ ಗುಣಾತ್ಮಕ, ಉಚಿತ, ಕಡ್ಡಾಯ ಶಿಕ್ಷಣ ಜಾರಿಗೊಳಿಸಬೇಕೆಂಬ ಸಾರ್ವಜನಿಕ ಒತ್ತಡ ತೀವ್ರಗೊಳಿಸಬೇಕಾಗಿದೆ.

ಕರೋನಾದ ಸಂಕಷ್ಟದ ವೇಳೆಯಲ್ಲಿ ನಡೆದಂತಹ, ಅತ್ಯಾಚಾರ ಪ್ರಕರಣಗಳು, ಮಕ್ಕಳ ಮೇಲಿನ ಅತ್ಯಾಚಾರ, ನಿರಂತರ ದೌರ್ಜನ್ಯ, ಕೊಲೆಯಂತಹ ಕ್ರೂರಾತಿಕ್ರೂರ ಘಟನೆಗಳು, ಮಾತಾ ಪಿತೃಗಳನ್ನು ದಿಕ್ಕೆಡಿಸಿದೆ. ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರದ ಕುರಿತು, ಎನ್.ಸಿ.ಆರ್.ಬಿಯ 2020ರ ವರದಿಯಲ್ಲಿ, ಅಸ್ಸಾಂ–166 ಮಂದಿ, ದೆಹಲಿ–149, ಹರಿಯಾಣ–107.5 ಹಾಗೂ ಭಾರತದಲ್ಲಿ – 58.8% ಇರುವುದನ್ನು ಚಿಂತೆಗೀಡು ಮಾಡಿರುವುದಲ್ಲದೆ, ಪುರುಷರ ನೈತಿಕತೆಗೆ ಕನ್ನಡಿ ಹಿಡಿದಂತಾಗಿದೆ. ಇದರ ಬಗ್ಗೆ ಜನಾಂದೋಲನಗಳ ಪ್ರಶ್ನೆಗಳಿಗೆ ಸರ್ಕಾರದ ನೀತಿ ನಿರೂಪಕರು ಸಂರಕ್ಷಣಾ ಕಾನೂನುಗಳ ಕಠಿಣ ಜಾರಿಗೆ ಟೊಂಕಕಟ್ಟಿ ನಿಲ್ಲಬೇಕಾಗಿದೆ. ತಲೆತಲಾಂತರದಿಂದ ಪರಿಸರ ನಾಶದಲ್ಲಿ ತೊಡಗಿರುವ ಮಾನವರಿಂದ, ಪರಿಸರ ಅಸಮತೋಲನ, ಜೀವ ಸಂಕುಲಗಳ ನಷ್ಟ, ಪ್ರಕೃತಿ ಶೋಷಣೆಯ ಭಾಗವಾಗಿಯೇ ಕರೋನಾ–19 ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ಸೃಷ್ಟಿಯಾಗಿರುವುದನ್ನು ಜನರು, ಸರ್ಕಾರಗಳು ಈಗ ಅರಿತಿವೆ. ಪರಿಸರದ ಯಥಾಸ್ಥಾಪನೆ, ತ್ಯಾಜ್ಯಗಳ ಸಮರ್ಪಕ ನಿರ್ವಹಣೆ, ಗಾಂಧಿ ಮಾರ್ಗದ ಸರಳ ಜೀವನಶೈಲಿಯನ್ನು ರೂಢಿಸಿಕೊಳ್ಳಲು ನಾವೆಲ್ಲರೂ ತೊಡಗಬೇಕಿದೆ. ಹೀಗೆ ಪ್ರಕೃತಿಯೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದೊಂದೇ 21ನೇ ಶತಮಾನಕ್ಕೆ ಇರುವ ಮಾರ್ಗವಾಗಿದೆ..



ನೆಟಾಲನ್ನು ತಲುಪಿದುದು : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಬ್ದುಲ್ಲಾ ಸೇಠರಿಗೆ ಇದು ಅಭ್ಯಾಸವಾಗಿಬಿಟ್ಟಿತ್ತು. ನನ್ನನ್ನು ನೋಡಿದವರಿಗೆ ನನ್ನಲ್ಲಿ ಕೊಂಚ ಕುತೂಹಲವುಂಟಾಯಿತು. ನನ್ನ ಉಡುಪು, ಉಳಿದ ಭಾರತೀಯರಿಂದ ನನ್ನನ್ನು ಎತ್ತಿ ತೋರಿಸುತ್ತಿತ್ತು. ನಾನು ಒಂದು ಫ್ರಾಕ್ ಕೋಟನ್ನೂ (ಮೋಟು ಅಂಗಿ) ಬಂಗಾಳದವರ ಪಗಡಿಯಂತಿರುವ ರುಮಾಲನ್ನೂ ಧರಿಸಿದ್ದ, ಅಬ್ದುಲ್ಲಾ ಸೇಠರು ನನ್ನನ್ನು ಕಂಪನಿಯ ವಸತಿಗೆ ಕರೆದುಕೊಂಡು ಹೋಗಿ ತಮ್ಮ ಕೊಠಡಿಯ ಮಗ್ಗುಲ ಕೋಣೆಯಲ್ಲಿ ಇಳಿಸಿದರು. ನನ್ನ ಮಾತು ಅವರಿಗೆ ಅರ್ಥವಾಗುತ್ತಿರಲಿಲ್ಲ, ಅವರು ಹೇಳುವುದು ನನಗೆ ತಿಳಿಯುತ್ತಿರಲಿಲ್ಲ. ಅವರ ಸಹೋದರರಿಂದ ನಾನು ತಂದಿದ್ದ ಕಾಗದವನ್ನು ಅವರು ಪೂರ್ಣವಾಗಿ ಮೇಲಿನಿಂದ ಕೆಳಕ್ಕೆ ಓದಿದರು. ಅದರಿಂದ ಅವರು ಮತ್ತಷ್ಟು ಗೊಂದಲದಲ್ಲಿ ಬಿದ್ದರು, ತಮ್ಮ ಸಹೋದರ ತಮಗೆ ಒಂದು ಬಿಳಿಯ ಆನೆಯನ್ನು ಕಳುಹಿಸಿದ್ದಾನೆಂದೇ ಅವರು ಭಾವಿಸಿದರು. ನನ್ನ ಉಡುಪಿನ ಮಾದರಿ, ಜೀವನಕ್ರಮ ಇವೆಲ್ಲ ಯೂರೋಪಿನವರ ಪದ್ಧತಿಯಾಗಿ ಬಹಳ ವೆಚ್ಚ ತಗಲುವುದೆಂದು ಅವರು ಯೋಚಿಸಿದರು. ನನಗೆ ವಹಿಸಬಹುದಾದಂಥ, ವಿಶಿಷ್ಟವಾದ ಯಾವ ಕಾರ್ಯವೂ ಆಗ ಅವರಲ್ಲಿ ಇರಲಿಲ್ಲ. ಅವರ ಮೊಕದ್ದಮೆ ನಡೆಯುತ್ತಿದ್ದುದು ಟ್ರಾನ್ಸ್‌ವಾಲ್‌ನಲ್ಲಿ, ತತ್‌ಕ್ಷಣ ನನ್ನನ್ನು ಅಲ್ಲಿಗೆ ಕಳುಹಿಸುವುದರಲ್ಲಿ ಅರ್ಥವಿರಲಿಲ್ಲ. ಎಷ್ಟರ ಮಟ್ಟಿಗೆ ನನ್ನಲ್ಲಿ ಯೋಗ್ಯತೆಯೂ, ಪ್ರಾಮಾಣಿಕತೆಯೂ ಇದೆಯೆಂದು, ಅವರು ಪರೀಕ್ಷಿಸಬೇಕಾಗಿತ್ತು. ನನ್ನ ಮೇಲೆ ಕಣ್ಣಿಟ್ಟಿರಲು ಪ್ರಿಟೋರಿಯಾದಲ್ಲಿರುವುದು (ಟ್ರಾನ್ಸ್‌ವಾಲಿನ ರಾಜಧಾನಿ) ಸಾಧ್ಯವಿರಲಿಲ್ಲ. ಪ್ರತಿವಾದಿಗಳು ಇದ್ದುದು ಪ್ರಿಟೋರಿಯಾದಲ್ಲಿ. ಅವರು ನನ್ನ ಮೇಲೆ ಆಯುಕ್ತವಾದ ಪ್ರಭಾವವನ್ನು ತಂದು ನನ್ನನ್ನು ಒಳಗೊಳಗೆ ತಮ್ಮ ಪರವಾಗಿ ಮಾಡಿಕೊಂಡರೆ ಹೇಗೆ? ಮೊಕದ್ದಮೆಗೆ ಸಂಬಂಧಪಟ್ಟ ಕಾರ್ಯವನ್ನು ನನಗೆ ವಹಿಸಲು ಸಾಧ್ಯವಾಗದಿದ್ದಲ್ಲಿ, ನನಗೆ ಕೊಡಬಹುದಾದಂತಹ ಕಾರ್ಯವಾವುದು, ಮೊಕದ್ದಮೆಯ ಕಾರ್ಯದ ಹೊರತು ಉಳಿದ ಕಾರ್ಯವನ್ನೆಲ್ಲ ಗುಮಾಸ್ತರೇ ನನಗಿಂತ ಉತ್ತಮವಾಗಿ ಮಾಡಬಲ್ಲವರಾಗಿದ್ದರು. ತಪ್ಪು ಮಾಡಿದರೆ ಗುಮಾಸ್ತರಿಗೆ ಶಿಕ್ಷೆ ಮಾಡಲು ಸಾಧ್ಯವಿದ್ದಿತ್ತು. ನಾನು ತಪ್ಪು ಮಾಡಿದರೆ ನನ್ನನ್ನು ಶಿಕ್ಷಿಸಲು ಸಾಧ್ಯವಿದ್ದಿತೇ, ಆದುದರಿಂದ ಮೊಕದ್ದಮೆಗೆ ಸಂಬಂಧಪಟ್ಟ ಯಾವ ಕಾರ್ಯವನ್ನೂ ನನಗೆ ವಹಿಸಲು ಸಾಧ್ಯವಿಲ್ಲವಾಗುವುದಾದರೆ, ಯಾವ ಕೆಲಸವೂ ಇಲ್ಲದೆ ನನ್ನನ್ನು ಸುಮ್ಮನೆ ಮೊಕದ್ದಮೆಗಾಗಿ ಕಾಯುತ್ತಾ ಇಟ್ಟುಕೊಳ್ಳಬೇಕು. ಈ ಯೋಚನೆಗಳೆಲ್ಲ ಅವರಿಗೆ ಹೊಳೆದವು.

ಸೇಠ್ ಅಬ್ದುಲ್ಲಾರವರಿಗೆ ಅಕ್ಷರಜ್ಞಾನ ಇರಲೇ ಇಲ್ಲವೆಂದು ಹೇಳಬಹುದು. ಆದರೆ ಅವರ ಅನುಭವ ಆಳವಾಗಿತ್ತು. ಅವರ ಬುದ್ಧಿ ಬಹಳ ಚುರುಕಾಗಿತ್ತು. ಅದು ಅವರಿಗೂ ಗೊತ್ತಿತ್ತು. ಅಭ್ಯಾಸದಿಂದ ಅವರು ಮಾತುಕತೆಗೆ ಸಾಕಾದಷ್ಟು ಇಂಗ್ಲಿಷ್ ಭಾಷೆಯ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಬ್ಯಾಂಕ್ ಮ್ಯಾನೇಜರೊಂದಿಗೆ ವ್ಯವಹರಿಸುವುದಕ್ಕೆ, ಐರೋಪ್ಯ ವ್ಯಾಪಾರಿಗಳೊಂದಿಗೆ ಸಂಭಾಷಣೆ ನಡೆಸುವುದಕ್ಕೆ, ತಮ್ಮ ವಕೀಲರಲ್ಲಿ ತಮ್ಮ ಮೊಕದ್ದಮೆಯ ವಿವರಗಳನ್ನು ಚರ್ಚಿಸುವುದಕ್ಕೆ, ಇವೇ ಮುಂತಾದ ತಮ್ಮ ವ್ಯಾಪಾರ ಕೆಲಸಗಳಿಗೆಲ್ಲ ಅವರಿಗೆ ಗೊತ್ತಿದ್ದ ಇಂಗ್ಲಿಷ್ ಸಾಕಾಗಿತ್ತು. ಭಾರತೀಯರು ಅವರನ್ನು ಬಹಳ ಮರ್ಯಾದೆಯಿಂದ ಕಾಣುತ್ತಿದ್ದರು. ಅವರ ಕಂಪನಿಯೇ ಆಗಿನ ಕಾಲಕ್ಕೆ ಅತ್ಯಂತ ದೊಡ್ಡ ಭಾರತೀಯ ಕಂಪೆನಿ ಎಂದು ಹೇಳಬಹುದಾಗಿತ್ತು. ಅಥವಾ ಅತಿ ದೊಡ್ಡ ಭಾರತೀಯ ಕಂಪೆನಿಗಳ ಪೈಕಿ ಅದೊಂದು. ಇಷ್ಟೆಲ್ಲ ಅನುಕೂಲಗಳಿದ್ದರೂ ಸೇಠರಲ್ಲಿ ಒಂದು ಕುಂದು ಇದ್ದಿತು. ಅದು ಅವರ ಸಂಶಯ ಸ್ವಭಾವ ಇಸ್ಲಾಂ ಮತವೆಂದರೆ ಅವರಿಗೆ ಹೆಮ್ಮೆ, ಅಭಿಮಾನ, ಆ ಧರ್ಮ ತತ್ವಗಳನ್ನು ಕುರಿತು ಚರ್ಚಿಸಲು ಇಷ್ಟ. ಅವರಿಗೆ ಅರಬ್ಬಿ ಭಾಷೆ ಬರದಿದ್ದರೂ, ಪವಿತ್ರ ಕುರಾನ್ ಮತ್ತು ಇತರ ಇಸ್ಲಾಂ ಸಾಹಿತ್ಯ ಪರಿಚಯ ಅವರಿಗೆ ತಕ್ಕಮಟ್ಟಿಗೆ ಚೆನ್ನಾಗಿಯೇ ಇತ್ತು. ಅಸಂಖ್ಯಾತ ದೃಷ್ಟಾಂತಗಳು, ಅವರ ನಾಲಿಗೆಯ ತುದಿಯಲ್ಲಿಯೇ ಇರುತ್ತಿದ್ದವು. ಅವರ ಸಂಪರ್ಕದಿಂದ ನನಗೆ ಇಸ್ಲಾಂ ಮತದ ವ್ಯಾವಹಾರಿಕ ಜ್ಞಾನ ತಕ್ಕಮಟ್ಟಿಗೆ ಚೆನ್ನಾಗಿಯೇ ಆಯಿತು. ಮುಂದೆ ನಮಗೆ ನಿಕಟ ಪರಿಚಯವಾದಾಗ ನಾವು ಧಾರ್ಮಿಕ ವಿಷಯಗಳನ್ನು ಕುರಿತು ವಿಸ್ತಾರವಾದ ಚರ್ಚೆಗಳನ್ನು ಮಾಡುತ್ತಿದ್ದವು.

ನಾನು ಅಲ್ಲಿಗೆ ಹೋದ ಎರಡು ಮೂರು ದಿನಗಳೊಳಗೆ, ಸೇಠರು ನನ್ನನ್ನು ಡರ್ಬಾನ್ ನ್ಯಾಯಸ್ಥಾನಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರು ನನ್ನನ್ನು ಅನೇಕರಿಗೆ ಪರಿಚಯ ಮಾಡಿಸಿ ತಮ್ಮ ಅಟಾರ್ನಿಯವರ ಮಗ್ಗುಲಲ್ಲಿ ನನ್ನನ್ನು ಕೂರಿಸಿದರು. ಮ್ಯಾಜಿಸ್ಟ್ರೇಟರು ನನ್ನನ್ನೇ ದುರುಗುಟ್ಟಿಕೊಂಡು ನೋಡಿದರು. ಕೊನೆಗೆ "ನಿಮ್ಮ ರುಮಾಲನ್ನು ತೆಗೆಯಿರಿ' ಎಂದು ನನಗೆ ಹೇಳಿದರು. ರುಮಾಲನ್ನು ತೆಗೆಯಲು ನಾನು ತಿರಸ್ಕರಿಸಿ ನ್ಯಾಯಸ್ಥಾನವನ್ನು ಬಿಟ್ಟು ಹೊರಕ್ಕೆ ಬಂದೆ. ಕೆಲವು ಭಾರತೀಯರು ಮಾತ್ರ ಏಕೆ ರುಮಾಲನ್ನು ತೆಗೆಯಬೇಕೆಂಬ ವಿಷಯವನ್ನು ಸೇಠ್ ಅಬ್ದುಲ್ಲಾ ನನಗೆ ವಿವರಿಸಿದರು.

ಹೀಗೆ ಇಲ್ಲಿಯೂ ನನಗೆ ಹೋರಾಟ ಕಾದಿತ್ತು. ಮುಸಲ್ಮಾನರ ಉಡುಪನ್ನು ಧರಿಸಿರುವವರು ಬೇಕಾದರೆ ರುಮಾಲನ್ನು ಧರಿಸಿರಬಹುದು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.
(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಪರಿವರ್ತನವಾದಿಗಳಿಗೆ ಹೇಳುತ್ತೇನೆ: ನಿಮಗೆ ರಾಟೆಯ ನಂಬಿಕೆ ಇಲ್ಲದೆ ಇದ್ದರೆ ನಿಮಗೆ ಬೇರೆ ಯಾವ ದಾರಿಯೂ ಇಲ್ಲ. ಹಿಂಸೆಯಲ್ಲಿ ತೊಡಗಬೇಕು ಅಷ್ಟೇ. ನಿಮ್ಮ ದೇಶಭಕ್ತಿಗೆ ರಾಟೆ ತೃಪ್ತಿ ಕೊಡದು ಎನಿಸಿದರೆ ಶಾಸನ ಸಭೆಗಾದರೂ ಹೋಗಿ. ಅಲ್ಲಿ ಒಂದು ಮಿಂಚು ಹರಿಯಿಸಿ, ಕೆಲವರು ಕೈದಿಗಳನ್ನಾದರೂ ಬಿಡಿಸಬಹುದು. ಇವತ್ತು ಸ್ವರಾಜ್ಯ ಪಕ್ಷದವರೂ ತಮ್ಮ ಆದರ್ಶಗಳನ್ನೆಲ್ಲ ಗಾಳಿಗೆ ತೂರಿ, ಅಂಡಮಾನ ದ್ವೀಪದಲ್ಲಿರುವ ಕೆಲವರು ಕೈದಿಗಳನ್ನು ಬಿಡುಗಡೆ ಮಾಡಬಯಸಿದರೆ ಅದು ನಡೆಯಬಹುದು. ಆದರೆ ತಾವೇ ಕೈಕೊಂಡ ಹೊಣೆಗೆ ಅವರು ನಿಷ್ಠರು. ದೇಶಕ್ಕಾಗಿ ಇಂಥ ಹಾನಿಕರ ವ್ಯವಹಾರವನ್ನು ಮಾಡರು. ಅವರು ಶಾಸನಸಭೆಗೆ ಹೋದದ್ದು ಅಂಡಮಾನ ಸೆರೆಯಾಳುಗಳನ್ನು ಬಿಡಿಸಲಿಕ್ಕೆ ಅಲ್ಲ ಅಥವಾ ಯರವಡಾ ಜೇಲಿನಲ್ಲಿ ಬೇನೆಯಿಂದ ಬಳಲುತ್ತಿರುವ ಒಬ್ಬ ಬಡಪಾಯಿಯನ್ನು ಬಿಡಿಸಲೂ ಅಲ್ಲ. ಎಷ್ಟೋ ಸಲ ನಾನು ಹೇಳಿದ್ದೇನೆ, ನಿಮಗೆ ರಾಟೆಯಲ್ಲಿ ನಂಬಿಕೆ ಇಲ್ಲದಿದ್ದರೆ ನಿಮಗೆ ಇರುವ ಇನ್ನೊಂದು ದಾರಿ ಶಾಸನಸಭಾ ಪ್ರವೇಶ ಒಂದೇ. ಎಷ್ಟೋ ಜನ ಶಾಸನ ಸಭೆಗೆ ಹೋಗುತ್ತಾರಲ್ಲ. ಅಲ್ಲಿ ಏನಾದರೂ ಮಾಡಬಹುದೆಂಬ ಆಶೆಯೇ ಶಾಸನಸಭೆಗೆ ಹೋಗುವವರ ರಹಸ್ಯ. ಶಾಸನಸಭೆಗೆ ಹೋಗುವವರು ನಮ್ಮಲ್ಲಿ ವಿಶೇಷ ಬುದ್ಧಿವಂತ ಪ್ರತಿನಿಧಿಗಳು. ಚೆನ್ನಾಗಿ ತರಬೇತಾದ ಸಿಪಾಯಿಗಳು. ಉದಾಹರಣೆಗೆ ಪಂಡಿತ್ ಮಾಲವೀಯರ ಹಾಗೆ ತ್ಯಾಗ ಮಾಡಿದ ಮನುಷ್ಯ ಸಿಕ್ಕುತ್ತಾನೆಯೇ? 1901ರಲ್ಲಿ ಸರ್ ದಿವಾನ್ ಷಾ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸಿನಲ್ಲಿ ಮಾಲವೀಯಾಜಿ ಭಾಷಣ ಮಾಡಿದಾಗಿನಿಂದಲೂ ನಾನು ಅವರನ್ನು ಬಲ್ಲೆ. ಅವರು ಎಷ್ಟೋ ಕೆಲಸ ಮಾಡಿದ್ದಾರೆ. ಶಾಸನ ಸಭೆಯಲ್ಲೂ ಇದ್ದಾರೆ. ಈಗಲೂ ಶಾಸನಸಭೆಗೆ ಅಂಟಿಕೊಂಡಿರುತ್ತಾರೆ. ಅವರೇನೂ ಮೂರ್ಖರಲ್ಲ. ಅವರನ್ನು ನೋಡಿದಾಗಲೆಲ್ಲ ನನ್ನ ತಲೆ ಬಾಗುತ್ತದೆ. ಸಿ. ಆರ್. ದಾಸ್ ಯಾರು? ಪಂಡಿತ್ ಮೋತಿಲಾಲ್ ನೆಹರು ಯಾರು? ಇವತ್ತು ಅವರು ಹೀಗೇಕೆ ಬಟ್ಟೆ ಉಡುತ್ತಾರೆ? ಪಂಡಿತ್ ಮೋತಿಲಾಲ ನೆಹರು ಹಿಂದೆ ರಾಜಮಹಾರಾಜನಂತೆ ಬದುಕುತ್ತಿದ್ದರು. ಅವರು ಲಾಹೋರಿಗೆ ಮೋಟಾರಿನಲ್ಲಿ ಬಂದಾಗ ಅವರ ಬೆಂಬತ್ತಿ ಸೇವಕರ ದಂಡಿಗೆ ದಂಡೆ ಬಂದಿತ್ತು. ರಾಜಮಹಾರಾಜರು ಸಹ ಅವರ ಹಾಗೆ ಬಾಳಲಿಲ್ಲ. ಹಿಂದೆ ಗುಲಾಬಿ ಹೂಗಳಿಂದ, ಇತರ ಹೂಗಳಿಂದ ಅಂದವಾಗಿದ್ದ ಅವರ ತೋಟದಲ್ಲಿ ಇವತ್ತು ಕಸ ಬೆಳೆಯುತ್ತಿದೆ. ಅವರು ದೇಶದ್ರೋಹಿಯೇ? ಇವರನ್ನು ನೋಡಿದಾಗಲೆಲ್ಲ ನನ್ನ ತಲೆ ಬಾಗುತ್ತದೆ. ಇವರ ದೃಷ್ಟಿಯಂತೆ ನನ್ನ ದೃಷ್ಟಿ ಇಲ್ಲದೆ ಹೋದುದಕ್ಕೆ. ಅವರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲಾರದುದಕ್ಕೆ ನನ್ನಲ್ಲಿಯೇ ಏನೋ ಅಪೂರ್ಣತೆ ಇದೆ ಎಂದುಕೊಳ್ಳುತ್ತೇನೆ. ಈ ಕೇಳಕರರು ತಾನೇ ಯಾರು? ಭವಿಷ್ಯಕಾಲಕ್ಕೆ ಕೀರ್ತಿಕಾಯರಾಗಿ ಉಳಿಯುವ ಭಾರತೀಯ ಶ್ರೇಷ್ಠನೊಬ್ಬನ ಪ್ರತಿನಿಧಿ. ಆತನನ್ನು ಮುಂದಿನ ಪೀಳಿಗೆಯವರು ದೇವರು ಎಂದು ಪೂಜಿಸುವರು. ಈ ದೇಶದಲ್ಲಿ ದೇವರು ಒಬ್ಬ ನಾಮ ಹಲವು. ಆದ್ದರಿಂದ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನಿಮ್ಮ ಹೃದಯ ಶುದ್ಧಿ ಮಾಡಿಕೊಳ್ಳಿರಿ. ಔದಾರ್ಯ ಇರಲಿ. ನಿಮ್ಮ ಹೃದಯಗಳು ಸಮುದ್ರದಷ್ಟು ವಿಶಾಲ ಆಗಲಿ. ಕೊರಾನ್ ಹೇಳುವದೂ ಇದೇ. ಭಗವದ್ಗೀತೆ ಹೇಳುವದೂ ಇದೇ. ಇನ್ನೊಬ್ಬರನ್ನು ಹೀಗೆ ಹಾಗೆ ಎಂದು ಎನ್ನಬೇಡಿ, ನಿಮ್ಮನ್ನೂ ಹೀಗೆ ಎಂದಾರು. ಎಲ್ಲವನ್ನೂ ನಿರ್ಧರಿಸುವ ಪರಮೋಚ್ಚ ನ್ಯಾಯಾಧಿಪತಿ ದೇವರು. ಆತ ನಿಮ್ಮನ್ನು ಗಲ್ಲಿಗೆ ಹಾಕಬಹುದು. ಆದರೂ ಆತ ನಿಮ್ಮನ್ನು ಬದುಕಗೊಟ್ಟಿದ್ದಾನೆ. ನಿಮ್ಮ ಸುತ್ತಲೂ ಅನೇಕ ವೈರಿಗಳಿದ್ದಾರೆ. ನಿಮ್ಮ ಒಳಗೂ ಇದ್ದಾರೆ. ಆದರೆ ಆತನ ಕಾಯುವ ಕೈ ಸದಾ ಕಾಯುತ್ತದೆ. ಆತನ ಕರುಣೆಯ ಕಣ್ಣು ಸದಾ ನಿಮ್ಮ ಮೇಲೆ ಇರುತ್ತದೆ.

ಅವರ ಧೋರಣೆ ಭ್ರಷ್ಟ, ಅವರೆಲ್ಲರೂ ವಂಚಕರು ಅಥವಾ ಅಪ್ರಮಾಣಿಕರು, ದೂರದೃಷ್ಟಿ ಇಲ್ಲದ ರಾಜಕಾರಣಿಗಳು ಎಂದೇಕೆ ನಾವು ಹೇಳಬೇಕು? ಮಾನವ ಸ್ವಭಾವವನ್ನು ಹೀಗೆ ತೆಗಳುವ ಬುದ್ಧಿ ಬರದಂತೆ ದೇವರು ನಮ್ಮನ್ನು ರಕ್ಷಿಸಲಿ. ಈ ಜಗತ್ತು ಇರುವವರೆಗೆ ಮತಭೇದ ಇದ್ದೇ ಇರುತ್ತದೆ. ಅಪರಿವರ್ತನವಾದಿಗಳ ಮಹತ್ತರ ಸಾಧನೆಯೆಂದರೆ ನಮ್ಮ ಇದಿರಾಳುಗಳು ಎಂದು ತಿಳಿದವರನ್ನು ನಿಜವಾದ ಗೆಳೆಯರನ್ನಾಗಿ ಮಾಡಿಕೊಂಡು ರಾಟೆಯ ಪಂಥಕ್ಕೆ ಅವರ ಮನ ಒಲಿಸುವುದು. ನನ್ನಲ್ಲಿ ವಿಶ್ವಾಸವಿಡಿರಿ. ಅಪರಿವರ್ತನವಾದಿಗಳು ನಿಂದೆ ಮಾಡುವುದನ್ನು ನಿಲ್ಲಿಸಿ ತಮ್ಮ ಕರ್ತವ್ಯವನ್ನು ತಾವು ಮಾಡಿದರೆ ಮತ್ತು ರಾಟೆಗೆ ಅಂಟಿಕೊಂಡು ಅದಕ್ಕಾಗಿ ಪ್ರಾಣತೆತ್ತರೆ, ಪರಿವರ್ತನಾವಾದಿಗಳನ್ನು ಚರಖಾ ಪಂಥಕ್ಕೆ ಪರಿವರ್ತಿಸಿಕೊಳ್ಳಬಹುದು. ಜನರು ರಾಟೆಯನ್ನು ಒಪ್ಪದಿದ್ದರೆ ಅದರ ಕಾರಣ ಅದರ ಪ್ರಯೋಜನ ಅವರಿಗೆ ಗೊತ್ತಿಲ್ಲ. ನೀವು ಅದನ್ನು ಅವರಿಗೆ ತೋರಿಸಿಕೊಡಬೇಕು. ನಾನು ರಾಟೆಯ ಹಾಡನ್ನು ಹೇಳುತ್ತಿದ್ದೇನೆ. ಏಕೆಂದರೆ ಅದರಿಂದಲೇ ದೇಶಕ್ಕೆ ಮೋಕ್ಷ ಎಂದು ನನ್ನ ಅಚಲ ಶ್ರದ್ಧೆ. ಶ್ರದ್ಧೆ ಇಲ್ಲದೆ ಹೋದರೆ ಹಿಂದೂ ಧರ್ಮದ ಸಂದೇಶ ಏನಿದೆ? ಒಂದು ವೇಳೆ ನೀವು ನಂಬಿದ ರಾಟೆ ಇತರರಿಗೆ ಒಳ್ಳೆಯದು ಅಲ್ಲದೇ ಇದ್ದರೂ ನಮಗೆ ಮಾತ್ರ ಅದೇ ಸರ್ವಸ್ವ, ಕಾಶೀ ವಿಶ್ವನಾಥನ ದೇವಾಲಯದ ಲಿಂಗ ಮೌಲನಾ ಹಜರತ್ ಮೋಹಾನಿಗೆ ಬರಿ ಕಲ್ಲೇ ಆಗಬಹುದು.

ಮುಂದುವರಿಯುವುದು...

ಡಾ. ಬಾಬು ಜಗಜೀವನರಾಮ್

(05.04.1908 – 06.07.1986)


ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬಾಬುಜಿ ಅವರ ಜೀವನದಲ್ಲಿ ಮಹತ್ತರ ರಾಜಕೀಯ ಪರಿವರ್ತನೆಗೆ ಕಾರಣವಾದ ಘಟ್ಟವೇ ಭಾರತದ ಚರಿತ್ರೆಯಲ್ಲಿಯೂ ಬದಲಾವಣೆ ತಂದಿತ್ತು. ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿ ಅವರು ಜೂನ್ 25, 1975ರಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸಿ, ದೇಶದ ಚುನಾವಣೆಗೆ ಜನವರಿ 23, 1977ರಲ್ಲಿ ಕರೆ ನೀಡಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ದೇಶಾದ್ಯಂತ ನಡೆದ ಅನೇಕ ಅಸಂವಿಧಾನಿಕ ನಡೆಗಳು ಡಾ. ಜಗಜೀವನರನ್ನು ವ್ಯಾಕುಲಗೊಳಿಸಿತ್ತು. ಬ್ಯಾಂಕ್‌ಗಳ ರಾಷ್ಟ್ರೀಕರಣ, ರಾಜರು, ಸಂಸ್ಥಾನಿಕರ ರಾಜಧನ ರದ್ಧತಿ, ಭೂಸುಧಾರಣೆ, 20 ಅಂಶದ ಕಾರ್ಯಕ್ರಮಗಳು ಮುಂತಾದ ಪ್ರಗತಿಪರ ಕಾನೂನುಗಳು ತಕ್ಷಣ ಜಾರಿಗೆ ಬಂದರೂ, ಜನರ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ, ಪತ್ರಿಕೆಗಳ ಮೇಲೆ ಹೇರಿದ ನಿರ್ಬಂಧಗಳು, ಸಾಮಾಜಿಕ ಚಳುವಳಿಗಾರರ ಬಂಧನ, ಇನ್ನೂ ಮುಂತಾದ ಪ್ರಜಾಪ್ರಭುತ್ವ ವಿರೋಧಿ ನೀತಿ ನಡಾವಳಿಗಳು ಬಾಬೂಜಿ ಅವರನ್ನು ಕಂಗೆಡಿಸಿತ್ತು. ಇದರೊಂದಿಗೆ, ಇಂದಿರಾ ಗಾಂಧಿ ಅವರ ಪುತ್ರ ಸಂಜಯ್ ಗಾಂಧಿ ಅವರು ಸರ್ಕಾರದ ಯೋಜನೆ–ಕಾನೂನುಗಳಲ್ಲಿ ಹಸ್ತಕ್ಷೇಪ ಮತ್ತು ಜನನ ನಿಯಂತ್ರಣ ಶಸ್ತ್ರಚಿಕಿತ್ಸೆ ಕಾನೂನು ತುರ್ತಾಗಿ ಜಾರಿ ಇವುಗಳು ಭಾರತೀಯರನ್ನು ರೊಚ್ಚಿಗೆಬ್ಬಿಸಿತ್ತು. ಇವುಗಳ ಪರಿಣಾಮಗಳನ್ನು ಚಿಂತಿಸಿದ ಬಾಬುಜಿ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷ, ಪ್ರಜಾಪ್ರಭುತ್ವ ಸರ್ಕಾರ ರಚಿಸಿದ ಪಕ್ಷ ಅಂದಿನ ಇಪ್ಪತ್ತೈದು ವರ್ಷಗಳ ಸುಭದ್ರ ಆಡಳಿತ ನೀಡಿದ ಪಕ್ಷವನ್ನು, ಅವನತಿಯ ಹಾದಿಯ ಕಡೆ ಕೊಂಡೊಯ್ಯುತ್ತಿರುವ ದುರ್ದೆಸೆಯ ಚಿತ್ರಣದಿಂದ ಅಪಾರವಾಗಿ ನೊಂದರು. ಅವರ ರಾಜಕೀಯ ಪ್ರವೇಶದ ಆರಂಭದಿಂದಲೂ ಕಾಂಗ್ರೆಸ್ ಪಕ್ಷವನ್ನೇ ಅಪ್ಪಿಕೊಂಡು, ಅದರ ಬೆಳವಣಿಗೆ ವಿಕಾಸಕ್ಕೆ ಶ್ರಮಿಸಿದವರಾಗಿದ್ದರು. ರಾಜಕೀಯದಲ್ಲಿ ಸುಮಾರು ಐದು ದಶಕಗಳ ಅನುಭವ, ಸರ್ಕಾರದಲ್ಲಿ ಹತ್ತಾರು ಇಲಾಖೆಗಳ ಯಶಸ್ವಿ ಸಚಿವರಾಗಿದ್ದ ಮಹಾನ್ ಯಶೋಗಾಥೆಗಳು, ಸುಭದ್ರ ಸರ್ಕಾರಕ್ಕಾಗಿ ಆಯೋಜಿಸಿದ ಹೊಸಹೊಸ ಯೋಜನೆಗಳು, ಜಗನೀವನರಾಂ ಅವರಿಗೆ ದೇಶದಲ್ಲಿ ಘನತೆಯ ವ್ಯಕ್ತಿತ್ವವನ್ನು ರೂಪಿಸಿತ್ತು. ಒಂದು



ಬಾಬು ಜಗಜೀವನ್ ರಾಂ, ಡಾ. ಬಾಬಾಸಾಹೇಬ್ ಅಂಬೇಡ್ಕರ್, ವಿ.ವಿ.ಗಿರಿ ಮತ್ತಿತರರು.



ಹಂತದಲ್ಲಿ ಇಂದಿರಾಗಾಂಧಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನದಲ್ಲಿ ಜಗಜೀವನರಾಂ ಅವರೇ ಸ್ಥಾಪಿತರು ಎಂಬ ಸುದ್ದಿಗಳು ಪ್ರಚಾರವಾದವು. ಆದರೆ ಆದದ್ದೇ ಬೇರೆ. ತುರ್ತು ಪರಿಸ್ಥಿತಿ ಹೇರಿಕೆಯಿಂದ ಭಾರತದ ಪ್ರಜಾಪ್ರಭುತ್ವ ಅವನತಿ ಎಡೆಗೆ ಸಾಗಿದೆ ಎಂಬ ಸಮಾಚಾರಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾಗಿ ಹಬ್ಬಿತ್ತು. ದೇಶದ ಆಂತರಿಕ ವ್ಯವಸ್ಥೆಯಲ್ಲಿ ಜಯಪ್ರಕಾಶ್ ನಾರಾಯಣ್, ಜಾರ್ಜ್ ಫರ್ನಾಂಡೀಸ್, ಕಿಷನ್ ಪಟ್ನಾಯಕ್, ರಾಜನಾರಾಯಣ್, ಮೊರಾರ್ಜಿ ದೇಸಾಯಿ, ಕೃಪಲಾನಿ, ಚರಣ್ ಸಿಂಗ್, ಚಂದ್ರಶೇಖರ್ ಇನ್ನೂ ಮುಂತಾದ ಜನ ಚಳುವಳಿಯ ಮುಖಂಡರು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ದೇಶಾದ್ಯಂತ ಜನರ ಧ್ವನಿಯನ್ನು ಮೊಳಗಿಸಿದರು. ದೇಶಾದ್ಯಂತ ಜೆ.ಪಿ. ಚಳುವಳಿಯ ಅಲೆ, ಸ್ವಾತಂತ್ರ್ಯ ಹೋರಾಟದಂತೆ ವ್ಯಾಪಿಸಿತು. ಇದರೊಂದಿಗೆ ಜನಹೋರಾಟಗಾರರ ಬಂಧನ, ಜೈಲುವಾಸ ಜನರನ್ನು ರೊಚ್ಚಿಗೆಬ್ಬಿಸಿತ್ತು.

ಅದುವರೆಗೂ ಜನಮಾನಸದಲ್ಲಿದ್ದ "ಇಂದಿರಾ ಅಂದರೆ ಇಂಡಿಯಾ ; ಇಂಡಿಯಾ ಅಂದರೆ ಕಾಂಗ್ರೆಸ್" ಎಂಬ ಅಭಿಮಾನದ ಘೋಷಣೆಯು ಇಂದಿರಾಗಾಂಧಿ ಅವರನ್ನು ಮತ್ತು ಕಾಂಗ್ರೆಸ್‌ನ್ನು ಸಂರಕ್ಷಿಸಿದೆ ಎಂಬ ವಿಚಾರಗಳು ಬಾಬುಜಿ ಅವರಿಗೆ ತಿಳಿಯದಿದ್ದದ್ದೇನಲ್ಲ. ಡಾ. ಜಗಜೀವನರಾಂ ಅವರಂಥಹ ಮುತ್ಸದಿ, ರಾಜಕೀಯ ನೇತಾರರ ದೂರಗಾಮಿ ಚಿಂತನೆಗಳು, ಕಾಂಗ್ರೆಸ್ ಪಕ್ಷವನ್ನು ಮುನ್ನೆಡುಸುತ್ತಿವೆ, ಎಂಬುದನ್ನು ಅವಲೋಕಿಸಿದ ಇಂದಿರಾಗಾಂಧಿ ಅವರು, ಸರ್ವಾಧಿಕಾರದೆಡೆಗೆ ಸಾಗಿದ ಪರಿಯನ್ನು ತುರ್ತುಪರಿಸ್ಥಿತಿಯ ಕರಾಳ ನಡೆಗಳು ಅಭಿವ್ಯಕ್ತಗೊಳಿಸುತ್ತವೆ. ರಾಯಬರೇಲಿ ಕ್ಷೇತ್ರದಿಂದ ಇಂದಿರಾಗಾಂಧಿ ಅವರ ಆಯ್ಕೆಯನ್ನು ಅಸಿಂಧುಗೊಳಿಸಿದ ಅಲಹಾಬಾದ್ ಹೈಕೋರ್ಟ್ ತೀರ್ಮಾನ ಅವರನ್ನು ಪ್ರಧಾನ ಮಂತ್ರಿ ಸ್ಥಾನದಿಂದ ಇಳಿಸುವುದು ಹಾಗೂ 6 ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸಲು ಅನರ್ಹರು ಎಂಬ ತೀರ್ಪು, ಅದರ ಮೇಲೆ ಬಂದ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ, ಅಧಿಕಾರದಲ್ಲುಳಿಯಲು ಪ್ರಧಾನಿ ಇಂದಿರಾಗಾಂಧಿ ಅವರ ರಣತಂತ್ರಗಳು ಜಾಲವನ್ನು ಅಮೂಲಾಗ್ರವಾಗಿ ಬಲ್ಲ ಡಾ. ಜಗಜೀವನರಾಂ ಅವರು 3ನೇ ಫೆಬ್ರವರಿ 1977ರಲ್ಲಿ ಸಚಿವಸ್ಥಾನ, ಪಕ್ಷದ ಸ್ಥಾನಮಾನ, ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದರು. ಅವಕಾಶವಾದಿ ರಾಜಕಾರಣಿಯಲ್ಲದ ರಾಂ ಅವರು ಪ್ರತಿಕೂಲ ಪರಿಸ್ಥಿತಿಯ ಲಾಭಗಳಿಸಲಿಚ್ಛಿಸದೆ, ತಾವೇ ಸರ್ಕಾರ ರಚಿಸುವ ಅವಕಾಶವನ್ನು ತೊರೆದು, ನೀತಿವಂತ ನಾಯಕರಾಗಿ ನಿಂತರು.

ಮುಂದುವರಿಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

'ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ' ಕೃತಿಯಿಂದ ಆಯ್ದ ಭಾಗಗಳು

ಲೇಖಕರು : ಲೂಯಿ ಫಿಷರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನೋಡುತ್ತಿದ್ದವರೆಲ್ಲಾ ಬಿಕ್ಕಿ ಬಿಕ್ಕಿ ಅತ್ತರು. ಧ್ವನಿ ಅಂಕೆಗೆ ಬಂದ ಮೇಲೆ ಕೇಳಿಸಲಾಗದಷ್ಟು ಕ್ಷೀಣವಾಗಿತ್ತು. ಆತನು ಪಿಸುಗುಟ್ಟಿದ ಮಾತನ್ನು ಡಾಕ್ಟರ್ ಸುಶೀಲಾ ನಾಯರ್ ಗಟ್ಟಿಯಾಗಿ ಹೇಳಿದಳು. ಅವರೆಲ್ಲಾ ಆತನಿಗೆ ಮೋಸ ಮಾಡುತ್ತಿದ್ದರೆ? ಆತನ ಜೀವ ಉಳಿಸಲು ಪ್ರಯತ್ನ ಮಾಡುತ್ತಿದ್ದರೆ? ಆತನು ಪಾಕೀಸ್ತಾನಕ್ಕೆ ಹೋಗಬೇಕು ಶಾಂತಿಯನ್ನು ಕಾಪಾಡಿ, ಆತನನ್ನು ಬಿಡುಗಡೆ ಮಾಡುವರೆ? ಕಾಂಗ್ರೆಸ್ ಮುಸ್ಲಿಂ ನಾಯಕ ಮೌಲಾನಾ ಆಜಾದ್, ರಾಷ್ಟ್ರೀಯ ಸೇವಕ ಸಂಘದ ಪ್ರತಿನಿಧಿ, ಪಾಕೀಸ್ತಾನದ ರಾಯಭಾರಿ ಮತ್ತು ಒಬ್ಬ ಸಿಕ್, ಸಮಾಧಾನದ ಮಾತುಗಳನ್ನಾಡಿದರು. ಗಾಂಧಿ ಮಂಚದ ಮೇಲೆ ಮೌನವಾಗಿ ಆಲೋಚಿಸುತ್ತಾ ಕುಳಿತಿದ್ದನು. ಆ ಕ್ಷಣದಲ್ಲಿ ತಾನು ಸಾಯಬೇಕೋ, ಉಳಿಯಬೇಕೋ ನಿರ್ಧರಿಸುತ್ತಿದ್ದನು. ಕಡೆಗೆ ಉಪವಾಸ ಮುಕ್ತಾಯ ಮಾಡುವುದಾಗಿ ಹೇಳಿದನು. ಪಾರ್ಸಿ, ಮುಸ್ಲಿಂ, ಜಪಾನೀ ಪವಿತ್ರ ಗ್ರಂಥಗಳನ್ನೋದಿದ ಮೇಲೆ ಹಿಂದೂ ಶ್ಲೋಕವನ್ನೊಂದನ್ನು ಹೇಳಿದರು.

ಅಸತೋಮ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ,
ಮೃತ್ಯೋರ್ಮ ಅಮೃತಂಗಮಯ
ಅಸತ್ಯದಿಂದ ಸತ್ಯಕ್ಕೆ, ಕತ್ತಲಿನಿಂದ ಬೆಳಕಿಗೆ
ಸಾವಿನಿಂದ ಮುಕ್ತಿಗೆ ನನ್ನನ್ನು ಕರೆದೊಯ್ಯಿ.

ಆಶ್ರಮದ ಹುಡುಗಿಯರು ಒಂದು ಹಿಂದೂ ಪ್ರಾರ್ಥನೆಯನ್ನು, ಗಾಂಧಿಗೆ ಇಷ್ಟವಾದ ಕ್ರೈಸ್ತರ "ನಾನು ಅಚ್ಚರಿಯ ಶಿಲುಬೆಯನ್ನು ನೋಡುವಾಗ," ಎಂಬ ಸ್ತುತಿಯನ್ನು ಹಾಡಿದರು. ಕಡೆಗೆ ಮಹಾತ್ಮ ಎಂಟು ಔನ್ಸ್ ಕಿತ್ತಲೆ ರಸವನ್ನು ನಿಧಾನವಾಗಿ ಕುಡಿದರು. ಶಾಂತಿ ಪ್ರಮಾಣಗಳಿಗೆ ಅವರು ಯಾರೂ ತಪ್ಪದಿದ್ದರೆ ನೂರಿಪ್ಪತ್ತೈದು ಏಕೆ ನೂರಮುವತ್ತು ಮೂರುವರ್ಷ ಕೂಡ ಬದುಕಬೇಕೆಂಬ ಆಸೆ ಪುನಃ ತನ್ನಲ್ಲಿ ಹುಟ್ಟುವುದೆಂದು ಹೇಳಿದರು. ಆ ಮಧ್ಯಾಹ್ನ ಆತನು ಸ್ಟೇಟ್ಸ್‌ಮನ್ ಪತ್ರಿಕೆಯ ಮಾಜಿ ಸಂಪಾದಕ ಆರ್ಥರ್ ಮೂರ್ ಅವರೊಡನೆ ಮಾತನಾಡಿದರು. ಆತನು, "ಗಾಂಧಿ ಸಂತೋಷವಾಗಿದ್ದನು, ಮಾತನಾಡುವಾಗ ಆತನ ಆಸಕ್ತಿ ನನ್ನ ಕಡೆಗೇ ಇತ್ತು. ಅನೇಕ ಪ್ರಶ್ನೆಗಳನ್ನು ಕೇಳಿದನು," ಎಂದು ಬರೆದನು. ಆ ಸಾಯಂಕಾಲ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ಆ ಪ್ರಮಾಣಗಳಿಗೆ, "ಏನೂ ಸಂಭವಿಸಿದರೂ ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ, ಜ್ಯೂಗಳಲ್ಲಿ ಮುರಿಯಲಾಗದ ಸ್ನೇಹವಿರುವುದು," ಎಂದು ಅರ್ಥಮಾಡಿ ಹೇಳಿದನು. ಇದು ಆ ಜನ ಬಯಸುವ ಮನುಷ್ಯನ ಮನಸ್ಸಿನ ಕಳವಳವಲ್ಲವೆಂಬುದಕ್ಕೆ ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಮಹಮ್ಮದ್ ಜಫರುಲ್ಲಾಖಾನ್, ಲೇಕ್ ಸಸೆಕ್ಸಿನ ಸಂಯುಕ್ತ ರಾಷ್ಟ್ರಗಳ ಭದ್ರತಾ ಸಭೆಯಲ್ಲಿ ಕೊಟ್ಟ ಹೇಳಿಕೆಯೇ ಸಾಕ್ಷ್ಯ. "ಉಪವಾಸದ ಫಲವಾಗಿ ಹೊಸ ಪ್ರಚಂಡ ಭಾವನೆ, ಎರಡೂ ರಾಷ್ಟ್ರಗಳಿಗೂ ಸ್ನೇಹವಿರಬೇಕೆಂಬ ಅಭಿಲಾಷೆಯ ಅಲೆ ಖಂಡವನ್ನೆಲ್ಲಾ ಆವರಿಸಿದೆ." ಖಂಡಿತವಾಗಿ ಆತ ಐಂದ್ರ ಜಾಲಿಕ, ರಾಜಕೀಯ ತಜ್ಞರು ತಲೆ ಹಾಕದೆ ಇದ್ದಿದ್ದರೆ! ಉಪವಾಸದ ಮುಕ್ತಾಯ ಅತನ ಸಂತೋಷ ಸ್ವಭಾವವನ್ನು ಅರಳಿಸಲು ಉತ್ಸಾಹದಿಂದ ಕೆಲಸಕ್ಕೆ ಹಿಂದಿರುಗಿದನು. ಧೈರ್ಯವಾಗಿ ಸಾವನ್ನೆದುರಿಸುವುದರಿಂದ ಹೊಸ ಜೀವನ ಆರಂಭವಾಯಿತು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ

ನಾಸ್ತಿಕ ಗೋ. ರಾಮಚಂದ್ರರಾಯರು ಮತ್ತು ಗಾಂಧೀಜಿ

– ಡಾ. ಎಚ್.ಎಸ್. ದೊರೆಸ್ವಾಮಿ



ಗೋ. ರಾಮಚಂದ್ರರಾಯರು ನಾಸ್ತಿಕರು. ಅವರು ಸಸ್ಯಶಾಸ್ತ್ರ ಎಂಎಸ್ಸಿ ಪದವೀಧರರೂ ಹೌದು. ನಾಲ್ಕಾರು ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದವರು. ಬ್ರಾಹ್ಮಣರಾಗಿದ್ದ ಗೋರಾಸರಸ್ವತಿ ಎಂಬ ಹರಿಜನ ಮಹಿಳೆಯನ್ನು ಮದುವೆಯಾದರು. ವಿಜಯವಾಡ ಹತ್ತಿರದ ಪಟನುಟಾ ಎಂಬ ಹಳ್ಳಿಯಲ್ಲಿ ಆಶ್ರಮವನ್ನು ಕಟ್ಟಿ ಅಲ್ಲಿಯೆ ಸಂಸಾರ ಸಮೇತ ವಾಸವಿದ್ದರು. ಗೋರಾ ಹೆಚ್ಚು ಸಮಯವನ್ನು ನಾಸ್ತಿಕ ಚಳವಳಿ, ಮುಖ್ಯಮಂತ್ರಿಗಳು ಮತ್ತು ಪ್ರಧಾನಿಗಳು ನಡೆಸುವ ವೈಭವೋಪೇತ ಜೀವನವನ್ನು ಕೈಬಿಡುವಂತೆ ಜನಾಭಿಪ್ರಾಯ ಮೂಡಿಸುವ ಚಳವಳಿಗಳು, ಅಸ್ಪೃಶ್ಯತಾ ನಿವಾರಣೆ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅಸ್ಪೃಶ್ಯರೊಡನೆ ಸಹಭೋಜನ, ಮಾಂಸಾಹಾರ ಸೇವಿಸುವ ಸಮಾರಂಭಗಳಲ್ಲಿ ನಿರತರಾಗಿರುತ್ತಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು, ಗಾಂಧೀಜಿ ಅವರ ಉಪ್ಪಿನ ಸತ್ಯಾಗ್ರಹದ ನೆನಪಿಗಾಗಿ, ಹುಟ್ಟಿದ ಮೊದಲನೇ ಮಗನಿಗೆ ಲವಣಂ ಎಂದು. ಎರಡನೇ ಮಹಾಯುದ್ಧದ ಸಮಯದಲ್ಲಿ ಹುಟ್ಟಿದ ಎರಡನೆಯ ಮಗನಿಗೆ 'ಸಮರಂ' ಎಂದು. ಸಂತ ವಿನೋಬಾರವರ ಭೂದಾನ ಯಜ್ಞ ಚಳವಳಿಯ ಕಾಲಕ್ಕೆ ಹುಟ್ಟಿದ ಮಗಳಿಗೆ 'ಭೂಕ್ರಾಂತಿ' ಎಂದು ಹೆಸರನ್ನಿಟ್ಟರು. ಎನ್. ಸಂಜೀವರೆಡ್ಡಿಯವರು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಆಗಿದ್ದಾಗ ಅವರ ಸರ್ಕಾರಿ ನಿವಾಸದ ಮುಂದೆ ಗೋರಾ ಅವರು ಅನಿರ್ದಿಷ್ಟ ಕಾಲದ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದರು. ಮುಖ್ಯಮಂತ್ರಿಗಳಾದವರು ಸಾಮಾನ್ಯ ಜನರಂತೆ ಸರಳ ಜೀವನ ನಡೆಸಬೇಕು. ಅದು ಬಿಟ್ಟು ಸರ್ಕಾರಿ ಮಹಲಿನಲ್ಲಿದ್ದುಕೊಂಡು, ವೈಭವದ ಜೀವನ ನಡೆಸುವುದು ಅಸಭ್ಯತೆ. ಕೂಡಲೇ ಸರ್ಕಾರಿ ಬಂಗಲೆಯನ್ನು ಖಾಲಿ ಮಾಡಿ, ನಿಜವಾದ ಜನಪ್ರತಿನಿಧಿಯಂತೆ ನಡೆದುಕೊಳ್ಳಿ ಎಂಬ ಬೇಡಿಕೆ ಇಟ್ಟರು. ಸಂಜೀವ ರೆಡ್ಡಿಯವರು ಗೋರಾರವರ ಬೇಡಿಕೆಯನ್ನು ಈಡೇರಿಸುವುದಾಗಿ ಮಾತು ಕೊಟ್ಟರಾದರೂ, ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ. ನಾಸ್ತಿಕರಾದ ರಾಮಚಂದ್ರರಾಯರು ಮಹಾತ್ಮ ಗಾಂಧಿಯವರನ್ನು ಕಂಡು ಅವರೊಡನೆ ನಾಸ್ತಿಕವಾದದ ಬಗ್ಗೆ ಚರ್ಚಿಸಲು ಅವರ ಆಶ್ರಮಕ್ಕೆ ಹೋದರು. ಗಾಂಧೀಜಿ ಅವರನ್ನು ಆಶ್ರಮದಲ್ಲಿ ಉಳಿಸಿಕೊಂಡು ಆಸ್ತಿಕತೆ–ನಾಸ್ತಿಕತೆಗಳ ಬಗೆಗೆ ಸುದೀರ್ಘ ಚರ್ಚೆ ನಡೆಸಿದರು. ಗಾಂಧೀಜಿ ಕೊನೆಗೆ ಗೋರಾಗೆ ಹೇಳಿದ ಮಾತು "ನಾನು ಆಸ್ತಿಕ. ನನಗೆ ದೇವರ ಇರುವಿನ ಬಗೆಗೆ ನಂಬಿಕೆ, ಶ್ರದ್ಧೆ ಎರಡೂ ಇದೆ. ನನ್ನ ಜೀವನದಲ್ಲಿ ಅನೇಕ ಸಾರಿ ಮುಂದಿನ ದಾರಿ ತೋರದ ಸನ್ನಿವೇಶ ಒದಗಿಬಂದಿದೆ. ದಾರಿ ತೋರಲು ಅನನ್ಯ ಭಕ್ತಿಯಿಂದ ಅಂತಹ ಸಂದರ್ಭಗಳಲ್ಲಿ ಭಗವಂತನಲ್ಲಿ ಮೊರೆಹೋಗಿ ಶರಣಾಗತನಾಗಿದ್ದೇನೆ. ಅವನು ಅಂತಹ ಸಂಕಟಮಯ ಸಂದರ್ಭದಲ್ಲಿ ನನ್ನ ನೆರವಿಗೆ ಬಂದಿದ್ದಾನೆ. ಅದನ್ನು ನಾನು '**inner voice**' ಎಂದು ಗುರುತಿಸಿದ್ದೇನೆ. ಈ '**inner voice**' ಆ ಸಂಕಟಮಯ ಪರಿಸ್ಥಿತಿಯಲ್ಲಿ ಮಾರ್ಗದರ್ಶನ ಮಾಡಿದೆ."

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.



ಪುಣೆಯ ಪುರಸಭೆಗೆ ತಿಲಕರು, ಸದಸ್ಯರಾಗಿ 1895ರಲ್ಲಿ ಆಯ್ಕೆಯಾದ ಎರಡುವರ್ಷಗಳಲ್ಲಿ ಅನೇಕ ಸಾರ್ವಜನಿಕ ಕಾರ್ಯದಲ್ಲಿ ಅತ್ಯುತ್ಸಾಹದಿಂದ ಭಾಗಿಯಾದರು. ಆಡಳಿತ ಸಮಿತಿಗೂ ಆಯ್ಕೆಯಾಗಿದ್ದ ತಿಲಕರನ್ನು, 'ಅಧ್ಯಕ್ಷರಾಗಲೂ' ಒತ್ತಾಯಗಳು ಬಂದಾಗ್ಯೂ, "ಹಿರಿಯರು ಆ ಸ್ಥಾನಗಳನ್ನು ಅಲಂಕರಿಸಬೇಕು" ಎಂದು, ಅಧ್ಯಕ್ಷ ಪದವಿಯನ್ನು ಸ್ವೀಕರಿಸಲಿಲ್ಲ, ನಗರದ ಒಳಚರಂಡಿ ವ್ಯವಸ್ಥೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ, ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಅನೇಕ ನಿರ್ಣಯಗಳಿಗೆ ಅವರು ಕಾರಣಕರ್ತರಾದರೂ. ಆಗಿನ ಮುಂಬೈ ಕೌನ್ಸಿಲ್‌ಗೆ 1895ರಲ್ಲಿ ತಿಲಕರು ಸ್ಪರ್ಧಿಸಿ, ಸದಸ್ಯರಾಗಿ ಆಯ್ಕೆಯಾದರು. ಮತ್ತು ಅದೇ ವರ್ಷದಲ್ಲಿ ಮುಂಬೈ ವಿಶ್ವವಿದ್ಯಾಲಯದ ಫೆಲೋ ಆಗಿ ಚುನಾಯಿತರಾಗಿದ್ದರು. ಅಲ್ಪಾವಧಿಯ ಸದಸ್ಯತ್ವದ ಸಂದರ್ಭದಲ್ಲಿ ಪ್ರಾಂತ್ಯದ ಕಂದಾಯವನ್ನು ಸಾರ್ವಜನಿಕ ಕಾರ್ಯಗಳಿಗೆ ಅತ್ಯಂತ ಕಡಿಮೆ ಉಪಯೋಗಿಸಲಾಗುತ್ತಿದೆ ಎಂದು ಕಟುವಾಗಿ ಟೀಕಿಸಿದರು. ಹಾಗೂ ಅಬಕಾರಿ ಮತ್ತು ಅರಣ್ಯ ಇಲಾಖೆಗಳ ಕಾರ್ಯವೈಖರಿಯು ನೈತಿಕವಾಗಿರಬೇಕೆಂದೂ, ಮದ್ಯದಂಗಡಿಗಳನ್ನು ಕಡಿಮೆ ಮಾಡಬೇಕೆಂಬ ಬೇಡಿಕೆಯನ್ನು ಸಲ್ಲಿಸಿದ್ದರು. ಇದೇ ಅವಧಿಯಲ್ಲಿ ರಾಯಘಡದಲ್ಲಿ ಶಿವಾಜಿ ಉತ್ಸವ ಆಚರಿಸಲು ಅಧಿಕಾರಿಗಳು ಸಮ್ಮತಿಕೊಡದಿದ್ದರೂ ಕೌನ್ಸಿಲ್ ಸದಸ್ಯತ್ವದ ಅಧಿಕಾರದಿಂದ, ಸರ್ಕಾರದ ಅನುಮತಿ ದೊರಕಿಸಿಕೊಟ್ಟರು. ತಿಲಕರು 1897ರಲ್ಲಿ 2ನೇ ಬಾರಿಗೆ ಮುಂಬೈ ಕೌನ್ಸಿಲ್ ಸದಸ್ಯರಾಗಿ ಮರು ಆಯ್ಕೆಗೊಂಡಿದ್ದರು. ಆದರೆ, ಸಾರ್ವಜನಿಕ ಭಾಷಣ, ಬ್ರಿಟಿಷರ ವಿರುದ್ಧದ ಹೇಳಿಕೆಗಳು ಮತ್ತು ಕೇಸರಿ ಪತ್ರಗಳ ಲೇಖನದಿಂದಾಗಿ ಅನೇಕ ರಾಜದ್ರೋಹದ ಆಪಾದನೆಗಳನ್ನು ಅವರ ಮೇಲೆ ಹೊರಿಸಲಾಗಿತ್ತು. ಆದ್ದರಿಂದ ಅವರು ಕೌನ್ಸಿಲ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬೇಕಾಯಿತು.

ಗಾಂಧಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ನಂತರ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗಾಗುತ್ತಿರುವ ಶೋಷಣೆ, ಅನ್ಯಾಯ, ಅಸಮಾನತೆ, ಅವಕಾಶಗಳ ನಿರಾಕರಣೆ ವಿಚಾರಗಳನ್ನು ಭಾರತೀಯರಲ್ಲಿ ಹಂಚಿಕೊಳ್ಳಲು ಆಶಿಸಿದ್ದರು. ಆ ಭೇಟಿಯ ಅನುಭವವನ್ನು ಗಾಂಧಿ ಅವರು 'ನನ್ನ ಸತ್ಯಾನ್ವೇಷಣೆ' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಮುಂದುವರಿಯುವುದು...

ಅಕ್ಷರದವ್ವ : ಸಾವಿತ್ರಿಬಾ ಪುಲೆ

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸಾವಿತ್ರಿ ಬಾಪುಲೆ ಅವರು "ವ್ಯಸನಗಳು" ಎಂಬ ಲೇಖನದಲ್ಲಿ, 'ಮದ್ಯಪಾನ', ಕುಟುಂಬ ನಾಶಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸುತ್ತಾ, "ಪುರುಷರ ಈ ವ್ಯಸನದಿಂದ ಮನೆಯ ಸಂಕಷ್ಟಗಳು ಅಧಿಕವಾಗುತ್ತವೆ. ಅವು ಸ್ತ್ರೀಶಕ್ತಿಯ ಶೋಷಣೆಯ ಆಯುಧಗಳಾಗಿವೆ. ಕುಡುಕುತನ, ಜೂಜಾಟ ಮತ್ತು ವ್ಯಭಿಚಾರಗಳು, ಮಾನವೀಯತೆಗೆ ಅಘಾತ ತರುತ್ತವೆ." ಎಂದು ಮದ್ಯಪಾನ ವಿರೋಧಿಸಿ ಬರೆದರು. ಅವರು ಶಿಕ್ಷಣ ಕುರಿತಾಗಿ ಬರೆದ 4 ಕವನಗಳನ್ನು ಮರಾಠಿಯಿಂದ ಇಂಗ್ಲೀಷ್ ಬಾಷೆಗೆ ಸುನಿಲ್ ಸರ್ದಾರ್ ಹಾಗೂ ವಿಕ್ಟರ್ ಪಾಲ್ ಅವರು ಅನುವಾದಿಸಿದ್ದು, ಅದನ್ನೂ ಕನ್ನಡಕ್ಕೆ ಬಿ. ಶ್ರೀಪಾದ ಭಟ್ ಅವರು ಭಾಷಾಂತರಿಸಿದ್ದಾರೆ. ಅದರಲ್ಲಿನ ಒಂದು ಕವನ ಹೀಗಿದೆ.

ಬನ್ನಿ ಶಿಕ್ಷಣವನ್ನು ಪಡೆದುಕೊಳ್ಳಿ
ಆಗು ಸ್ವಾವಲಂಬಿ, ಉದ್ಯಮಶೀಲ
ಬೆಳಸಿಕೋ ಜ್ಞಾನವನು ಕ್ರಿಯೆಯ ಮೂಲಕವೇ
ವಿನಃ ಜ್ಞಾನ ಎಲ್ಲವೂ ಶೂನ್ಯ
ವಿನಃ ಜ್ಞಾನ ನಾವು ಪಶುಗಳಿಗೆ ಸಮಾನ
ಸೋಮಾರಿ ಅಪ್ರಯೋಜಕನಾಗದಿರು
ಪಡೆದುಕೋ ವಿದ್ಯೆಯನು
ಶಮನಗೊಳಿಸು ದಮನಿತರ ನೋವನ್ನು
ಕಲಿಯಲಿರುವಾಗ ಅಪಾರ ಅವಕಾಶ
ಕಳೆದುಕೊಳ್ಳದಿರು ಕಲಿತುಕೋ
ಕಳೆದುಕೋ ಎಲ್ಲ ಜಾತಿ ಸಂಕೋಲೆಗಳನು
ಕಿತ್ತೆಸೆ ಬ್ರಾಹ್ಮಣರ ಶಾಸ್ತ್ರಗಳನು



ಅವರ ಕವನ ಸಂಕಲನ 'ಕಬ್ಯಪುಲೆ' (ಕಾವ್ಯ ಅರಳಿತು) 1854ರಲ್ಲಿ ಪ್ರಕಟವಾಯಿತು. ಇದನ್ನು ಅಭಂಗ ಧಾಟಿಯಲ್ಲಿ ಬರೆದಿದ್ದು, ಹಾಡಲು ಸುಲಭ ಸಾಧ್ಯವಾಗುವಂತಿವೆ. ಇದರಲ್ಲಿ ಶಿಕ್ಷಣ, ಪ್ರಕೃತಿ, ಜಾತೀಯತೆ, ಶೋಷಣೆಯ ಅಂಶಗಳೇ ಕವನದ ವಿಷಯಗಳಾಗಿದ್ದವು. ಇದು ಬ್ರಿಟಿಷ್ ಭಾರತದಲ್ಲಿ ಪ್ರಕಟವಾದ ಮೊದಲ ಭಾರತೀಯ ಕವನ ಸಂಕಲನವಾಗಿದೆ ಎಂಬ ಪ್ರಶಂಸೆಗೆ ಪಾತ್ರವಾಯಿತು. ನಂತರ 1891ರಲ್ಲಿ 'ಭವನ ಸುಬೋಧ ರತ್ನಾಕರ್' (ಪರಿಶುದ್ಧ ರತ್ನಗಳ ಸಾಗರ) ಎಂಬ ಕವನ ಸಂಕಲನವನ್ನು ರಚಿಸಿದ್ದರು. ಅದರಲ್ಲಿ ತಾಯಿಯಾಗಿ ಸಾಕಿ ಸಲಹಿದ ಮಾತೆ ಸುಗುಣಾಬಾಯಿ ಕ್ಷೀರ ಸಾಗರ ಅವರನ್ನು ಕುರಿತು "ಆವು ಮಾ" ಎಂಬ ಕವನವನ್ನು ಬರೆದರು. ಪುಲೆ ಅವರು ಬರೆದ "ನಿರ್ಮಿಕಾಜಿ ಶೋಧ" ಕೃತಿಯನ್ನು ತಾಯಿ ಸುಗುಣಾಬಾಯಿ ಅವರಿಗೆ ಅರ್ಪಣೆ ಮಾಡಿದ್ದರು. ಪುಲೆ ಅವರು "ಮಂಗಲಾಷ್ಟಕ" (ಮದುವೆಯ ಹಾಡು) ಕೃತಿ ರಚಿಸುವಾಗ ಸಾವಿತ್ರಿ ಅವರು ಸಹಯೋಗ ನೀಡಿದ್ದರು. ಇವುಗಳು, ಸರಳ ಜಾತ್ಯಾತೀತ ಮದುವೆಗಳನ್ನು ಮಾಡುವಾಗ ವಧು-ವರ ಮಾಡಬೇಕಾದ ಪ್ರತಿಜ್ಞೆ ಅಥವಾ ಒಪ್ಪಂದಗಳಾಗಿದ್ದುವು. ಇದು ಸತ್ಯ ಶೋಧಕ ಸಮಾಜದ ನೀತಿ ನಡಾವಳಿಯ ಭಾಗವಾಗಿತ್ತು.

ಮುಂದುವರಿಯುವುದು...

ಗಾಂಧಿ ಹೆಜ್ಜೆ ಜಾಡಿನಲ್ಲಿ ಸಾಗಿದವರು : ಮೊಳಹಳ್ಳಿ ಶಿವರಾಯ

ಡಾ. ಗಣನಾಥಶೆಟ್ಟಿ ಎಕ್ಕಾರು

ಗಾಂಧೀಜಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಅಳವಡಿಸಿಕೊಂಡು, ಅವರ ಹಾದಿಯಲ್ಲೇ ಸಾಗಿದವರ ಕುರಿತಾದ ಲೇಖನಮಾಲೆ ಇದಾಗಿದೆ. ಜನಪ್ರಿಯತೆಗಾಗಿ, ಗೌರವಕ್ಕಾಗಿಯೋ ಮತ್ತು ಪ್ರಭಾವಕ್ಕಾಗಿಯೋ ಕಾತರಿಸದವರು, ತಲೆಮಾರಿನ ಹಿಂದಿನ ಅವರ ಬದುಕು ಸರ್ವರಿಗೂ ಆದರ್ಶವಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವು ಚಿಗುರೊಡೆಯುವ ಕಾಲದಲ್ಲಿ ಶಿವರಾಯರು ಪುತ್ತೂರಿನ ರಂಗಪ್ಪಯ್ಯ-ಮೂಕಾಂಬಿಕಾ ದಂಪತಿಗಳಿಗೆ 1880ರ ಆಗಸ್ಟ್ 4ರಂದು ಪುತ್ತೂರಿನಲ್ಲಿ ಜನಿಸಿದರು. ಬಡಬಗ್ಗರಿಗೆ ಸಹಾಯ ಮಾಡುವ ಉದಾರ ಮನಸ್ಸು ಅವರದು. ಅವರ ಈ ಗುಣಗಳು ಶಿವರಾಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ಪಾತ್ರವಹಿಸಿದೆ. ಶಿಕ್ಷಣ, ಕಲೆ-ಸಂಸ್ಕೃತಿಯಲ್ಲಿ ಆಸಕ್ತಿ ಹೊಂದಿದ ಸುಸಂಸ್ಕೃತ ಆದರ್ಶ ಕುಟುಂಬ ಶಿವರಾಯರದು. ಪುತ್ತೂರಿನಲ್ಲಿ ಪ್ರಾಥಮಿಕ ಶಾಲೆಯನ್ನು ಮುಗಿಸಿ ಮಂಗಳೂರಿನಲ್ಲಿ ಎಫ್.ಎ ಪರೀಕ್ಷೆ ನಂತರ ಫೀಡರ್‌ಶಿಪ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬಳಿಕ ಕೊಡಗಿನ ಶಾಲೆಯೊಂದರಲ್ಲಿ ಅಧ್ಯಾಪಕರಾಗಿದ್ದರು. ನಂತರ ಪುತ್ತೂರಿಗೆ ಬಂದು ವಕೀಲ ವೃತ್ತಿಯನ್ನು ಆರಂಭಿಸಿದರು. ಅತ್ಯಂತ ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕ ವಕೀಲರಾಗಿ ವಕೀಲಿ ವೃತ್ತಿಗೆ ಗೌರವವನ್ನು ತಂದುಕೊಟ್ಟವರು ಶಿವರಾಯರು. ಅವರ ವೃತ್ತಿ ಗಳಿಕೆಯ ಬಗ್ಗೆ ಶಿವರಾಯರ ಮಡದಿಯ ಮಾತನ್ನು ಅವರ ಮೊಮ್ಮಗಳು ಹೀಗೆ ಉಲ್ಲೇಖಿಸುತ್ತಾರೆ:-

"ಅವರು ಕಕ್ಷಿದಾರರ ಹತ್ತಿರ ನ್ಯಾಯವಾದ ವೇತನ ಪಡೆಯುತ್ತಿದ್ದರೆ ನಾವು ಮನೆಗೆ ಚಿನ್ನದಗೋಡೆ ಕಟ್ಟಿಸಬಹುದಾಗಿತ್ತು. ಅವರ ಮಡದಿಯ ಮಾತಿಗೆ ಶಿವರಾಯರ ಪ್ರತಿಕ್ರಿಯೆ ಹೀಗಿತ್ತು "ಕ್ರಿಮಿನಲ್ ಲಾಯರಾಗಿ ಕೆಲಸ ಮಾಡಿ ದುಡಿದ ಹಣ ಶಾಶ್ವತವಲ್ಲ. ಅದು ಅನ್ಯಾಯದ ಹಣ ಸುಳ್ಳು ಹೇಳಿ ಸಂಪಾದಿಸುವ ಹಣ", ಹೀಗೆ ವಕೀಲಿ ವೃತ್ತಿಯ ಮಿತಿಯ ಬಗ್ಗೆ ಸ್ಪಷ್ಟವಾದ ಅರಿವು ಅವರಿಗಿತ್ತು. ವಂಚನೆ ಕಂಡರೆ ಅವರು ಕಕ್ಷಿಗಾರರಿಂದ ದೂರ ಸರಿಯುತ್ತಿದ್ದರು. ವಕೀಲನಿಗೆ ಬೇಕಾದ ಕಾನೂನು ಅರಿವಿನೊಂದಿಗೆ ಜನರ ದಿನನಿತ್ಯದ ವ್ಯವಹಾರ, ಜೀವನ ಮತ್ತು ಸಂಸ್ಕೃತಿಗಳ ಅಪಾರವಾದ ಅನುಭವ ಅವರಿಗಿತ್ತು. ಇದರಿಂದ ಅವರು ಸಿವಿಲ್ ಹಾಗೂ ಕ್ರಿಮಿನಲ್ ಕೇಸುಗಳ ಒಳಮರ್ಮವನ್ನು ಅರಿತು ನ್ಯಾಯ ಸಿಗುವ ರೀತಿಯಲ್ಲಿ ಕೇಸುಗಳನ್ನು ರಾಜಿಯಲ್ಲಿ ಇತ್ಯರ್ಥಗೊಳಿಸಲು ಪ್ರಯತ್ನಿಸುತ್ತಿದ್ದರು. ವೃತ್ತಿಯನ್ನು ಹಣ ಗಳಿಕೆಗಾಗಿ ಮಾಡದೆ ಕೇವಲ ಬದುಕು ಸಾಗಿಸುವ ಸಂಪಾದನೆಗಾಗಿ ಮಾಡಿದರು. ಅವರ ಇಡೀ ಬದುಕು ಸಾರ್ವಜನಿಕ ಸೇವೆಗಾಗಿ ಮುಡಿಪಾಗಿತ್ತು. ಬಹುಮುಖ ಪ್ರತಿಭಾವಂತರಾದ ಅವರು ವಿವಿಧ ಕ್ಷೇತ್ರಗಳಲ್ಲಿ ದುಡಿದರು. ಶೋಷಿತರ ಮತ್ತು ಬಡವರ ಪರವಾಗಿ ನಿಲ್ಲುತ್ತಿದ್ದ ರಾಯರಿಗೆ ಗಾಂಧೀಜಿ ಅವರ ಹೋರಾಟ, ಚಿಂತನೆಗಳು ಅಗಾಧವಾದ ಪ್ರಭಾವ ಬೀರಿತ್ತು. ಗಾಂಧಿ ಅವರಂತೆ ಒಂದು ತುಂಡು ತೋಳಿನ ಖಾದಿ ಬನಿಯನ್ ಮತ್ತು ಒಂದು ತುಂಡು ಪಂಚೆಯೇ ಅವರ ಉಡುಪಾಗಿತ್ತು. ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯ "ಸಹಕಾರಿ ಚಳುವಳಿಯ ಪಿತಾಮಹ" ಎಂದೇ ಗೌರವಿಸುವರು. ದಕ್ಷಿಣ ಕನ್ನಡ ಜಿಲ್ಲೆ ಅತ್ಯಂತ ಹೆಚ್ಚು ಪ್ರಾಥಮಿಕ ಶಾಲೆಗಳನ್ನು ಹೊಂದಿದ ಜಿಲ್ಲೆ ಎಂದು ಪ್ರಖ್ಯಾತವಾಗಲು ಶಿವರಾಯರೇ ಕಾರಣಕರ್ತರಾಗಿದ್ದಾರೆ. 1916ರಲ್ಲಿ ಪುತ್ತೂರು ತಾಲ್ಲೂಕಿನಾದ್ಯಂತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಮತ್ತು ಪುತ್ತೂರು ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ಇದೇ ಸಂಘವು 1965ರಲ್ಲಿ ಪ್ರಸಿದ್ಧ ವಿವೇಕಾನಂದ ಕಾಲೇಜನ್ನು ಸ್ಥಾಪಿಸಿತು. ವಿಟ್ಲದ ಹಿರಿಯ ಪ್ರಾಥಮಿಕ ಶಾಲೆಯನ್ನು ರಾಜರ ಆಡಳಿತದಿಂದ ತಾಲ್ಲೂಕು ಬೋರ್ಡಿಗೆ ವರ್ಗಾಯಿಸಿದರು. ದಕ್ಷಿಣ ಕನ್ನಡ ಗೌಡ ಶಿಕ್ಷಣ ಸಂಘ ರಚಿಸಿದರು. ಶಾಲೆಗಳಲ್ಲಿ 'ವಿದ್ಯಾರ್ಥಿ ವಸ್ತು ಖರೀದಿ ಸಂಘ' ಸ್ಥಾಪಿಸಿ ಅಧ್ಯಾಪಕರು, ವಿದ್ಯಾರ್ಥಿಗಳಿಗೆ ಕಡಿಮೆ ಬೆಲೆಯಲ್ಲಿ ಪಾಠೋಪಕರಣಗಳು ದೊರೆಯುವಂತೆ



ಮಾಡಿದರು. 1906ರಲ್ಲಿಯೇ ಪುತ್ತೂರಿನಲ್ಲಿ ಪ್ರಥಮ ಸಹಕಾರಿ ಕ್ರೆಡಿಟ್ ಸೊಸೈಟಿಯನ್ನು ಸ್ಥಾಪಿಸಿದರು. ಕಾಲ್ನಡಿಗೆಯಲ್ಲಿ ಹಳ್ಳಿಗಳಲ್ಲಿ ಸುತ್ತಿ, ಅಲ್ಲಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಿದರು. ವಿಟ್ಲದಲ್ಲಿ "ದಕ್ಷಿಣಕನ್ನಡ ಕೃಷಿಕರ ಸಗಟು ಮಾರಾಟ ಸಂಘ", 1919ರಲ್ಲಿ "ಕೃಷಿಕರ ಸಹಕಾರಿ ಭಂಡಸಾಲೆ ಸಂಘ" ಆರಂಭಿಸಿದರು. ಮತ್ತು ಅವನ್ನೂ ಮಂಗಳೂರಿಗೂ ವಿಸ್ತರಿಸಿದರು. ಈ ಸಂಘಗಳ ಮೇಲ್ವಿಚಾರಣೆಗಾಗಿ "ಎಸ್.ಕೆ. ಡಿಸ್ಟ್ರಿಕ್ ಕೌನ್ಸಿಲ್ ಆಫ್ ಸೆಪ್ರಿಸಿಯೇಷನ್"ನ್ನು ಸ್ಥಾಪಿಸಿದರು. ಮೊದಲನೇ ವಿಶ್ವ ಮಹಾಯುದ್ಧದಲ್ಲಿ ರಂಗೂನ್‌ನಿಂದ ಅಕ್ಕಿ ತರಿಸಿ, ಬಡಬಗ್ಗರಿಗೆ ವಿತರಣೆ ಮಾಡಿಸಿದರು. ಅಡಿಕೆ ಬೆಳೆ ರೋಗ ನಿವಾರಣೆಗೆ ಮಹಾಳಿ ನಿವಾರಣ ಸಂಘವನ್ನು, 1935ರಲ್ಲಿ ಕೊಟ್ಟೇಚ್ಚರಿ ಸಹಕಾರಿ ಸಾಲ ಮತ್ತು ಮಾರಾಟ ಸಹಕಾರಿ ಸಂಘವನ್ನೂ, ಗೋದಾಮು, ಕಚೇರಿ ಕಟ್ಟಡವನ್ನು ನಿರ್ಮಿಸಿದರು. ಪುತ್ತೂರಿನ ಹರಿಜನ ಸಂಘ, ಸಹಕಾರಿ ಸ್ಟೋರ್, ಮನೆಕಟ್ಟಡ ಸಂಘ, ಧಾನ್ಯದ ಬ್ಯಾಂಕ್, ಸರ್ಕಾರಿ ನೌಕರರ ಸಂಘ, ಲೇಬರ್ ಯೂನಿಯನ್, ವರ್ತಕರ ಸಂಘ ಮಹಿಳೆಯರ ಕೈಗಾರಿಕಾ ಸಂಘಗಳನ್ನು ಜಿಲ್ಲೆಯ ಮೂಲೆಮೂಲೆಗಳಲ್ಲಿ ಸಂಘಟನೆಯನ್ನು ಸ್ಥಾಪಿಸಿದರು. ಸಹಕಾರಿಬ್ರಹ್ಮ ಶಿವರಾಯರು ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ವಕೀಲಿಕೆಗೆ ಕೀಲಿಯಿಕ್ಕಿ ಹಳ್ಳಿಗಳನ್ನು ಸುತ್ತಿ ಮೊಳ ಮೊಳವು ಅಳೆದು ಶೋಧಿಸಿ, ನೋವು ಕಾವುಗಳಿಗೆ ಪರಿಹಾರವಾಗಿ ಸಹಕಾರಿ ಚಿಕಿತ್ಸೆ ಒದಗಿಸಿದವರಾಗಿದ್ದಾರೆ. ಸಹಕಾರಿ ಸಂಘಗಳಲ್ಲದೇ ಬ್ಯಾಂಕುಗಳು, ಶಾಲೆ, ಕಾಲೇಜುಗಳು, ಶಿಕ್ಷಕರ ಸಂಘಗಳು, ಸಾಂಸ್ಕೃತಿಕ ಸಂಘಟನೆಗಳು ಎಲ್ಲವೂ ಮೊಳಹಳ್ಳಿ ಅವರ ಶಾಶ್ವತ ಕೀರ್ತಿಗಳು.

ಅಸ್ಪೃಶ್ಯತಾ ನಿವಾರಣೆ ಮತ್ತು ಮದ್ಯಪಾನದ ವಿರುದ್ಧ ಜಾಗೃತಿ ನಾಟಕ ಆಡುವಂತೆ ಶಿವರಾಯರು, ಕಾರಂತರನ್ನು ವಿನಂತಿಸಿದರು. ಪುತ್ತೂರಿನಲ್ಲಿ 1930ರಿಂದ ದಸರಾ ಮಹೋತ್ಸವ ಏರ್ಪಡಿಸಿ ಕರ್ನಾಟಕದ ವಿವಿಧ ಭಾಗಗಳಿಂದ ವಿದ್ವಾಂಸರನ್ನು ಕಲಾವಿದರುಗಳನ್ನು ಆಹ್ವಾನಿಸಿ ಉಪನ್ಯಾಸ ನಾಟಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಹೀಗೆ ಪುತ್ತೂರಿನಲ್ಲಿ ಸಾಂಸ್ಕೃತಿಕ ವಾತಾವರಣ ನಿರ್ಮಾಣದಲ್ಲಿ ಶಿವರಾಯರ ಕೊಡುಗೆ ಅಪಾರವಾಗಿದೆ. ಇವರನ್ನು ಕುರಿತು ಸಾಹಿತಿಗಳು, ಗಣ್ಯರಾದ ಶಿವರಾಮಕಾರಂತರು, ವಿ.ಸೀತಾರಾಮಯ್ಯ, ರಮಾನಂದರಾಯರು, ಬಿ.ಎಂ. ಇದಿನಬ್ಬ, ಸಿ.ಕೆ. ವೆಂಕಟರಾಮಯ್ಯ, ಎಸ್. ನಿಜಲಿಂಗಪ್ಪ, ಮೈಸೂರು ದಿವಾನರಾದ ಮಿರ್ಜಾ ಇಸ್ಮಾಯಿಲ್, ಏರ್ಯಲಕ್ಷ್ಮೀನಾರಾಯಣ ಆಳ್ವ ಮುಂತಾದವರು ಮುಕ್ತಕಂಠದಿಂದ ಹಾಡಿ ಹೊಗಳಿದ್ದಾರೆ. "ನೂರ ಮೇರು" ಎಂಬ ಸ್ಮರಣಸಂಚಿಕೆಯನ್ನು ಮೊಳಹಳ್ಳಿ ಶಿವರಾಯರ ಶತಮಾನೋತ್ಸವ ಸಮಿತಿ ಅವರು ಪ್ರಕಟಿಸಿದ್ದಾರೆ.

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ಶಕ್ತಿ ಮತ್ತು ಆತ್ಮವಿಶ್ವಾಸದಿಂದ ನಮಗೆ ಅನ್ಯಾಯ ಮಾಡಿದವರನ್ನು ಕ್ಷಮಿಸಲು ಸಾಧ್ಯವಾಗುತ್ತದೆ. ಪ್ರತೀಕಾರವು ಹಾನಿಗೊಳಗಾದ ವ್ಯಕ್ತಿ ಮತ್ತು ಸೇಡು ತೀರಿಸಿಕೊಂಡ ವ್ಯಕ್ತಿ ಇಬ್ಬರನ್ನೂ ನಾಶಪಡಿಸುತ್ತದೆ. ಕ್ಷಮೆ ಅ ಈರ್ವರನ್ನೂ ಉನ್ನತೀಕರಿಸುತ್ತದೆ: ಹಾನಿಗೊಳಗಾದ ವ್ಯಕ್ತಿ ಸ್ವತಂತ್ರನಾಗುತ್ತಾನೆ ಮತ್ತು ಅಂತಿಮವಾಗಿ ಕ್ಷಮೆ ತೋರಿದ ಹಾಗೂ ಅದನ್ನು ಅನುಭವಿಸಿದ ವ್ಯಕ್ತಿಗೆ ಸಂತೋಷ ಸಿಗುತ್ತದೆ 1948ರ ಜನವರಿ 30 ರಂದು ಬಾಪುವನ್ನು ಹತ್ಯೆ ಮಾಡಲಾಯಿತು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಇದಕ್ಕೂ ಮೊದಲು ಅಂದರೆ 1930ರ ದಶಕದ ಒಬ್ಬ ಮನುಷ್ಯನಿಂದ ಗಾಂಧೀಜಿ ಅವರ ಹತ್ಯೆಗೆ ಹಲವಾರು ಪ್ರಯತ್ನಗಳು ನಡೆದಿದ್ದವು. ಅಂತಹ ಒಂದು ಪ್ರಯತ್ನದ ಹಂತಕನನ್ನು ಸ್ವಯಂಸೇವಕರು ಹಿಡಿದು ಗಾಂಧಿಯ ಮುಂದೆ ತಂದು ನಿಲ್ಲಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತು "ಕ್ಷಮೆ ಯಾವಾಗಲೂ ಬೇಷರತ್ತಾಗಿರಬೇಕು" ಎಂದರು. ಶತ್ರುಗಳನ್ನು ಕ್ಷಮಿಸುವ ವಿಷಯದ ಅವರ ಧೋರಣೆ ಮತ್ತು ಬದ್ಧತೆಯು ಭಾರತೀಯರು ಮಾತ್ರವಲ್ಲದೆ ಜಗತ್ತಿನಾದ್ಯಂತ ಮಹಾನ್ ವ್ಯಕ್ತಿಗಳಿಗೆ ಆದರ್ಶವಾಯಿತು. ಇದು ಕ್ಷಮೆಗೆ ಇರುವ ದೊಡ್ಡ ಶಕ್ತಿಯನ್ನು ಸಾಕ್ಷೀಕರಿಸುತ್ತದೆ. ಅಮೆರಿಕಾದ ಕಪ್ಪು ವರ್ಣೀಯರ ನಾಯಕ ಮಾರ್ಟಿನ್ ಲೂಥರ್ ಕಿಂಗ್(ಜೂ), ದಕ್ಷಿಣ ಆಫ್ರಿಕಾದ ನೇತಾರ ನೆಲ್ಸನ್ ಮಂಡೇಲಾ ಮತ್ತು ಸ್ಟೀವ್ ಬಿಕೊ ಹಾಗೂ ಮಯನ್ಮಾರ್‌ನ ಆಂಗ್ ಸಾಂಗ್ ಸೂಕಿ ಮುಂತಾದವರು ಬಾಪುವಿನ "ಕ್ಷಮೆ ಎಂಬುದು ಪ್ರಬಲರ ಲಕ್ಷಣವಾಗಿದೆ" ಎನ್ನುವ ನುಡಿಯನ್ನು ಪಾಲಿಸಿದ್ದಾರೆ. ಯಾರಾದರೂ ನಿಮ್ಮನ್ನು ನೋಯಿಸಲು ಪ್ರಯತ್ನಿಸಿದ್ದರೆ, ಭವಿಷ್ಯದಲ್ಲಿ ಈ ವ್ಯಕ್ತಿಯಿಂದ ನಿಮ್ಮನ್ನು ಉತ್ತಮವಾಗಿ ಸಂರಕ್ಷಿಸಿಕೊಳ್ಳಲು ಇದನ್ನು ಮುನ್ಸೂಚನೆಯಾಗಿ ತಿಳಿಯಲು ಮತ್ತು ಅವರನ್ನು "ಕ್ಷಮಿಸಿರಿ" ಎಂದು ಬಾಪು ತಿಳಿಸಿದ್ದಾರೆ. ಹೀಗೆ ಕ್ಷಮಾಗುಣದ ತಾತ್ಪರ್ಯಕ್ಕೆ ನಿದರ್ಶನವಾಗಿದ್ದ ಬಾಪುವನ್ನು "ಕ್ಷಮಾಗುಣದ ಚಾಂಪಿಯನ್" ಎಂದು ಹೇಳಬಹುದು. ಸಣ್ಣ ಪುಟ್ಟ ವಿಚಾರಗಳಿಗೆಲ್ಲಾ ಕಿತ್ತಾಡಿಕೊಳ್ಳುವ, ಅದೇ ಕಾರಣಕ್ಕಾಗಿ ಬಹುಕಾಲ ದ್ವೇಷ ಸಾಧಿಸುವ, ಪ್ರತೀಕಾರ ತೀರಿಸಿಕೊಳ್ಳಲು ಕಾಯುವ, ಅವಕಾಶ ಸಿಕ್ಕಿದಾಗ ಹಿಂಸೆಗೆ ತೊಡಗುವ ಯುವಜನತೆಗೆ ಬಾಪುವಿನ ಕ್ಷಮಾಗುಣವು ಆದರ್ಶವಾಗಬೇಕಿದೆ.

ಮುಂದುವರಿಯುವುದು..

ಕಾಲ

ದುಷ್ಟಗುಣದ ಬ್ರಿಟಿಷರನ್ನು
ಬಿಟ್ಟು ಇನ್ನು ಫಲ ಇಲ್ಲ
ಮೆಟ್ಟಿ ತುಳಿಯಬೇಕ ಪಾತಾಳಕ
ಕಾಲಕಟ್ಟಿ ಕುಟ್ಟಿ ಅಟ್ಟಬೇಕು
ಇಂಗ್ಲೆಂಡಕ
ಎಷ್ಟು ನಿಷ್ಠುರ ಆಡಿದರ
ಸಿಟ್ಟ ತಡಿಯದಕ
ಬುದ್ಧಿಗೇಡಿ ಬ್ರಿಟಿಷರನ್ನು
ಗದ್ದಿಕೊಂತ ಬಿದ್ದ ರಕ್ತ
ಹದ್ದು ನಾಯಿ ನರಿಗಳಿಗೆ ನೀಡಾಕ

ಸೌಜನ್ಯ : (ಹೊಸತು ಜೂನ್ 2017 ಪತ್ರಿಕೆಯಲ್ಲಿ ಶ್ವೇತಾ ಎಂ.ಬಿ. ಅವರ "ಜನಪದ ಸಂಗೀತ ಮತ್ತು ರಾಷ್ಟ್ರೀಯ ಚಳುವಳಿಗಳು ಎಂಬ ಲೇಖನದಿಂದ ಆಯ್ದುಕೊಳ್ಳಲಾಗಿದೆ)

ಗಾಂಧಿ

ಮರೆವುದೆಂತೋ ನಮ್ಮ
ಸ್ವಾತಂತ್ರ್ಯ ಶಿಲ್ಪಿಯ
ದಿವ್ಯ ದಿನದಿ ಶುಭ
ಮುಹೂರ್ತದಲ್ಲಿ
ಮರೆವುದೆಂತೈ ಭುವನ
ಗೌರವಾ ಮಹಾತ್ಮನ
ಸ್ವಾತಂತ್ರದಿ ಸುಪ್ರಭಾತದಲ್ಲಿ

ಹೆಜ್ಜೆಹೆಜ್ಜೆಯಾನಿರಿಸಿ
ಕೈಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆ
ಇಲ್ಲಿ ಎಲ್ಲಿ ಓ ಅವನೆಲ್ಲಿ ನಿಚ್ಚವೂ
ನಮ್ಮೆದೆಯ ನಂಜೀಂಟುವ
ನೀಲಕಂಠನಿಲ್ಲಿ ನೀಲಕಂಠನಿಲ್ಲಿ

ಕ್ರಿಸ್ತ ಬುದ್ಧರ ಮೈತ್ರಿಯಂ
ಸಾರಿ ಸಾಧಿಸುತೆ
ವಿಶ್ವಸೇವಕರ ಪಂಕ್ತಿಯಲಿ
ನಿಂದೆ ವಾದಿಸುತೆ ಬೋಧಿಸುತೆ
ಕರುಣೆಯಂ ಸಾಧಿಸುತೆ
ಭಕ್ತಿಯಿಂ ದೇವರಂ ಪ್ರಾರ್ಥಿಸುತ್ತೆ

ಸೃಷ್ಟಿಕರ್ತಂ ಸೃಷ್ಟಿತಾನಾಗಿ
ಸೃಷ್ಟಿಯೊಳು ದುಡಿಯುತಿರ್ಪುದ
ತಾನ ದಿವ್ಯಶಕ್ತಿಯಾಗಿ
ಗಾಂಧಿಯೆಂಬ ಪೆಸರಿನ
ನಾಂದಿಯಾಗಲಿ
ನಮ್ಮ ಸ್ವಾತಂತ್ರ ಸಂಭ್ರಮಕೆ
ಹಾಡು ಪಕ್ಷಿ
ಜೈ ಗಾಂಧಿಗೆ ಜೈ ಗಾಂಧಿಗೆ
ಜೈ ಗಾಂಧಿಗೆ

ಸ್ವಾತಂತ್ರವ ಸಾಧಿಸಿದ ವೀರ
ಶ್ರೀ ಭುಜಕೆ ಸತ್ಯ ಅಹಿಂಸಾ ತ್ಯಾಗ
ಸಮರ್ಪಣದ ಋತ
ಚಿನ್ಮಯ ನಿಜಕ ಚಿನ್ಮಯ ನಿಜಕ

– ಕುವೆಂಪು

(ಗಾಂಧಿ ಕವನಾಂಜಲಿ : ಪುಟ–24

ವಿ.ಎಸ್. ಶ್ರೀನಿವಾಸ ಶಾಸ್ತ್ರಿ ಮತ್ತು ಗಾಂಧೀಜಿ

– ವೇಮಗಲ್ ಸೋಮಶೇಖರ್.

ಗಾಂಧೀಜಿ ಅವರು 1924ರಲ್ಲಿ ಪೂನಾದ ಯರವಾಡ ಸೆರೆಮನೆಯಲ್ಲಿದ್ದಾಗ ಅಪೆಂಡಿಸೈಟಿಸ್ ಬೇನೆಯಿಂದ ನರಳುತ್ತಿದ್ದರು. ತಕ್ಷಣ ಅವರು1924ರ ಜನವರಿ 12ರಂದು ರಾತ್ರಿ ಪೂನಾದ ಸಸೂನ್ ಆಸ್ಪತ್ರೆಗೆ ಶಸ್ತ್ರ ಚಿಕಿತ್ಸೆಗಾಗಿ ಸೇರಿಸಲಾಯಿತು. ಶಸ್ತ್ರ ಚಿಕಿತ್ಸೆಗೆ ನಡೆಯಿವುದಕ್ಕೆ ಮುಂಚೆ 'ನೀವು ಯಾರನ್ನು ನೋಡಲು ಬಯಸುತ್ತೀರಿ' ಎಂದು ಕೇಳಿದಾಗ ಶ್ರೀನಿವಾಸ ಶಾಸ್ತ್ರಿಗಳ ಹೆಸರನ್ನು ಗಾಂಧೀಜಿ ಸೂಚಿಸಿದರು. ತಕ್ಷಣ ಶ್ರೀನಿವಾಸ ಶಾಸ್ತ್ರಿಗಳನ್ನು ಮದರಾಸಿನಿಂದ ಕರೆಯಿಸಲಾಯಿತು. ನಂತರ ಶಸ್ತ್ರ ಚಿಕಿತ್ಸೆ ನಡೆಯಿತು.

1946ರ ಜನವರಿ 21ರಿಂದ ಫೆಬ್ರವರಿ ಒಂದರವರೆಗೆ ಮದರಾಸಿನಲ್ಲಿ ನಡೆದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯರಜತಮಹೋತ್ಸವು ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಕಾರಣದಿಂದಾಗಿ ಗಾಂಧೀಜಿ ಮದರಾಸಿನಲ್ಲಿಯೇ ಇದ್ದರು. ಆ ಸಮಯದಲ್ಲಿ 76 ವರ್ಷ ವಯಸ್ಸಾಗಿದ್ದ ರೈಟ್ ಹಾನರಬಲ್ .ಶ್ರೀನಿವಾಸ ಶಾಸ್ತ್ರಿಗಳು ಅಸ್ವಸ್ಥರಾಗಿ ಮದರಾಸಿನ ಜನರಲ್ ಆಸ್ಪತ್ರೆಗೆ ಸೇರಿದ್ದರು. ಅವರಿಬ್ಬರ ಮೈತ್ರಿ ಬಹು ಗಾಢವಾಗಿದ್ದ ಕಾರಣ 22ರಂದು ಸಂಜೆ ಶಾಸ್ತ್ರಿಗಳ ಆರೋಗ್ಯ ವಿಚಾರಿಸಲು ಗಾಂಧೀಜಿ ಆಸ್ಪತ್ರೆಗೆ ತೆರಳಿದರು. ಹಾಸಿಗೆಯಿಂದ ಏಳಬಾರದೆಂದು ವೈದ್ಯರು ಶಾಸ್ತ್ರಿ ಅವರಿಗೆ ತಿಳಿಸಿದ್ದರು. ಆದಾಗ್ಯೂ ಶಾಸ್ತ್ರಿಗಳು ಹಾಸಿಗೆಯ ಮೇಲೆ ಎದ್ದು ಕುಳಿತಿದ್ದರು. ಗಾಂಧೀಜಿ ಶಾಸ್ತ್ರಿಗಳ ಕೈಯನ್ನು ಹಿಡಿದು ಸಂತೈಸಿದರು. ನಂತರ ಬಹಳ ಹೊತ್ತು ಮಾತುಕತೆ ನಡೆಸಿದರು.

ಪುನಃ ಎಡನೆಯ ಬಾರಿ ಅಂದರೆ ಜನವರಿ 30ರಂದು ರಾತ್ರಿ ಶ್ರೀನಿವಾಸ ಶಾಸ್ತ್ರಿಗಳನ್ನು ಕಾಣಲು ಮಹಾತ್ಮರು ಆಸ್ಪತ್ರೆಗೆ ಹೋಗಿದ್ದರು. ಅವರೊಡನೆ ಹಲವು ಸ್ನೇಹಿತರಿದ್ದರು. "ಈಗ ಜೀವಂತವಾಗಿರುವ ವ್ಯಕ್ತಿಗಳಲ್ಲಿ ನೀವು ಅತ್ಯಂತ ಶ್ರೇಷ್ಠರು, ಈ ಯುಗದ ನಿಜವಾದ ಮಹಾತ್ಮ" ಮುಂತಾಗಿ ಮಹಾತ್ಮರನ್ನು ಹೊಗಳಿ, ನೂರು ವರ್ಷ ಬದುಕಿರಲೆಂದು ಶಾಸ್ತ್ರಿಗಳು ಹರಿಸಿದರು.

ನಂತರ ಮೂರು ದಿನಗಳ ದಕ್ಷಿಣ ದೇಶದ ಪ್ರವಾಸದಿಂದ ಮತ್ತೆ ಗಾಂಧೀಜಿ ಮದರಾಸಿಗೆ ಆಗಮಿಸಿದರು. ಶಾಸ್ತ್ರಿಗಳನ್ನು ಮೂರನೇ ಬಾರಿ ಕಾಣಲು ಫೆಬ್ರವರಿ ನಾಲ್ಕರಂದು ಆಸ್ಪತ್ರೆಗೆ ಬಂದಿದ್ದರು. ಗಾಂಧಿ ಅವರನ್ನು ನೋಡುತ್ತಲೇ ದುಃಖ ಮಿಶ್ರಿತ ಪ್ರೇಮಾಶ್ರುಧಾರೆ ಶಾಸ್ತ್ರಿ ಅವರ ಕಣ್ಣುಗಳಿಂದ ಹರಿಯತೊಡಗಿತು. "ವಿಪರೀತ ಕೆಲಸವಿದ್ದರೂ ಬಿಡುವು ಮಾಡಿಕೊಂಡು ಇಲ್ಲಿಗೆ ಬಂದಿರುವುದು ನನ್ನಲ್ಲಿ ನಿಮಗಿರುವ ಪ್ರೇಮ ಗೌರವವನ್ನು ತೋರಿಸುತ್ತದೆ. ನಾನೇ ಧನ್ಯ" ಮುಂತಾಗಿ ಮಾತನಾಡಿದರು. ಅಂದು ಸೋಮವಾರ. ಮೌನ ದಿನವಾದ್ದರಿಂದ ಗಾಂಧೀಜಿ ಏನೂ ಮಾತನಾಡಲಿಲ್ಲ. ಇದು ಅವರಿಬ್ಬರ ಕಡೆಯ ಸಂದರ್ಶನವಾಗಿ ಪರಿಣಮಿಸಿತು. ಈ ಭೇಟಿಯ ಮೂರು ತಿಂಗಳ ನಂತರ ಅಂದರೆ 1946ರ ಏಪ್ರಿಲ್ 17ರ ಬುಧವಾರ ರಾತ್ರಿ ಶ್ರೀನಿವಾಸ ಶಾಸ್ತ್ರಿಗಳು ನಿಧನಹೊಂದಿದರು.

ಸಾದರ ಸ್ವೀಕಾರ

ಶೀರ್ಷಿಕೆ	ಪ್ರಕಾಶಕರು	ಲೇಖಕರು
1. ಮರೆಯದ ಚೇತನ	ಪ್ರಣವ ಪ್ರಕಾಶನ	ಪ್ರೊ. ಬಸಯ್ಯ ಶಿರೋಳ
2. 108 ಸುಭಾಷಿತಾ	ಪ್ರಣವ ಪ್ರಕಾಶನ	ಪ್ರೊ. ಬಸಯ್ಯ ಶಿರೋಳ
3. ಜಾಬಾಲಿ	ನವಕರ್ನಾಟಕ ಪ್ರಕಾಶನ	ನಾರ್ಲ ವಂಕಟೇಶ್ವರ
4. Untold tales from the Mahabharata	Bloomsbury	Uday Shankar
5. Fractured Freedom A Prisoned Memoir	Blossoms Book House	Kobab Ghandy
6. Anxious People	Blossoms Book House	Fredrik Backman
7. The Midnight Library	Blossoms Book House	Matt Haig
8. The Battle of Belonging	Gangarams Book Bureau	Shashi Tharoor
9. A Promised Land	Gangarams Book Bureau	Barack Obama
10. Restless as Mercury: My Life As a Young Man	Gangarams Book Bureau	Mohandas Karamchand Gandhi
11. The Psychology of Money	Book Worm	Morgan Housel
12. Sapiens A Brief History of Humankind	Book Worm	Yuval Noah Harari
13. The Thursday Murder Club	Book Worm	Richard Osman
14. The Amils of Sindh of a A Narrative History Remarkable Community	Black and White Fountain	Saaz Agarwal

ಸಂಗ್ರಹ : ನವೀನ್‌ಕುಮಾರ್



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಶಾಂತಬಾಯಿ ಕರಮಕರ

ಸ್ವಾತಂತ್ರ ಹೋರಾಟಗಾರರ ಕುಟುಂಬದ ಮಧ್ವರಾವ್ ಕಬ್ಬೂರರ ಮಗಳಾಗಿ ಜನಿಸಿದ ಶಾಂತಾಬಾಯಿ ಅವರು ಅನೇಕ ಹೋರಾಟದಲ್ಲಿ ಭಾಗವಹಿಸಿದರು. 1930ರ ಉಪ್ಪಿನ ಸತ್ಯಾಗ್ರಹ, ಪ್ರಭಾತ್ ಪೇರಿ, 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. 1942ರ ಚಳುವಳಿಯಲ್ಲಿ, ಮಗುವನ್ನು ಎತ್ತಿಕೊಂಡು ಬಂದು ಭಾಗವಹಿಸುತ್ತಾ, ಸತ್ಯಾಗ್ರಹದ ಬುಲೆಟಿನ್ ಹಂಚುತ್ತಾ ಭಾಷಣ ಮಾಡಿದ ಇವರನ್ನು ಪೋಲೀಸರು ಬಂಧಿಸಿ ಹಿಂಡಲಗಾ ಜೈಲಿಗೆ ದಬ್ಬಿದರು. ಜೈಲು ವಾಸದಲ್ಲಿದ್ದ ಇತರೆ ಸಾದಾ ಕೈದಿಗಳಿಗೆ ಹೆಣಿಗೆ, ಕಸೂತಿ, ಬರಹ, ಕರಪತ್ರ, ಆರೋಗ್ಯ ಸಂಬಂಧಿ ವಿಚಾರಗಳನ್ನು ಹೇಳಿಕೊಡುತ್ತಿದ್ದರು. ತನಗೆ ಕೊಟ್ಟ ಹಾಲನ್ನೂ ಜೈಲಿನಲ್ಲಿದ್ದ ಮಕ್ಕಳಿಗೆ ವಿತರಿಸುತ್ತಿದ್ದರು.

ಅಂಬಾಬಾಯಿ ಪೈ

ಉಡುಪಿ ಜಿಲ್ಲೆಯ ಮಲ್ಪೆ ತಾಲ್ಲೂಕಿನ ಕಡವೂರಿನ ಮಗಳಾಗಿ 1907ರಲ್ಲಿ ಜನಿಸಿದ ಅಂಬಾಬಾಯಿ ಅವರು ಗಾಂಧಿ ಅವರ ಉಪ್ಪಿನ ಸತ್ಯಾಗ್ರಹವನ್ನು ದಕ್ಷಿಣ ಕನ್ನಡದಲ್ಲಿ ನಡೆಸಿದವರಾಗಿದ್ದಾರೆ. 1930ರಲ್ಲಿ ಉಡುಪಿಯಿಂದ ಮಲ್ಪೆವರೆಗೆ, ಸ್ವಯಂ ಸೇವಕಿಯರೊಂದಿಗೆ ಮೆರವಣಿಗೆಯಲ್ಲಿ ತೆರಳಿ, ಉಪ್ಪನ್ನು ತಯಾರಿಸಿದರು. ನಂತರದಲ್ಲಿ 1932ರಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರ, ಸೇಂದಿ ಮಾರಟ ವಿರುದ್ಧ ಪಿಕೆಟಿಂಗ್ ನಡೆಸಿದರು. ಪೋಲೀಸರು ಇವರನ್ನು ಬಂಧಿಸಿ, ಉಡುಪಿ ಪೋಲೀಸ್ ಠಾಣೆಯಲ್ಲಿ ಒತ್ತಾಯ ಪೂರ್ವಕವಾಗಿ ಇವರ ಕೈಬೆರಳುಗಳ ಮೊಹರು ಪಡೆದು ಬಿಡುಗಡೆ ಮಾಡಿದ್ದರು. ಇವರು ಪೋಲೀಸರಿಂದ ಕ್ಷಮೆ ಯಾಚಿಸಿ ಹೊರಬಂದರೆಂಬ ಸುಳ್ಳು ಮಾಹಿತಿ ಹಬ್ಬಿಸಲಾಯಿತು. ಇದಕ್ಕೆ ಕಿವಿಗೊಡದ ಅಂಬಾಬಾಯಿ ಮೂಡಬಿದರೆಯಲ್ಲಿ ಪಿಕೆಟಿಂಗ ಮುಂದುವರೆಸಿದ್ದರಿಂದ ಇವರನ್ನು ಬಂಧಿಸಿ ಮಂಗಳೂರಿನ ಸಬ್‌ಜೈಲಿನಲ್ಲಿ ಇರಿಸಿದ್ದರು. ಜೈಲಿನಲ್ಲಿ ಶ್ರಮದ ಕೆಲಸ ಮಾಡುತ್ತ ನಾಲ್ಕು ತಿಂಗಳ ನಂತರ ಬಿಡುಗಡೆ ಆದರು. ನಂತರದಲ್ಲಿ ಇವರು ರಚನಾತ್ಮಕ ಕೆಲಸಗಳಲ್ಲಿ ಜೀವನ ಸವೆಸಿದರು.

ಮುಂದುವರಿಯುವುದು....

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು (ಮುಂದುವರಿದ ಭಾಗ)

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಅವರು ಸಂಯುಕ್ತವಾಗಿ ದಿ.24.12.2020ರಂದು ಆಯೋಜಿಸಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಂಡಿಸಿದ ಲೇಖನವನ್ನು ಫೆಬ್ರವರಿ ತಿಂಗಳಿಂದ ಪ್ರಕಟಿಸಲಾಗುತ್ತಿದೆ.

ಗಾಂಧೀಜಿ ಅವರು "ನಯೀ ತಾಲೀಂ" ಬಗ್ಗೆ ಬರೆಯುತ್ತಾ ಭಾರತದಲ್ಲಿ ಕೈಗಾರಿಕಾ ಕ್ರಾಂತಿ ಯಾಕಾಗಲಿಲ್ಲ ಎನ್ನುವುದನ್ನು ವಿವರಿಸಿದ್ದರು. "ಬುದ್ಧಿವಂತಿಕೆ ಕೇವಲ ಪುಸ್ತಕದಿಂದ ಮಾತ್ರ ಬರುವುದಿಲ್ಲ, ಅದು ಅನುಭವ ಜನ್ಯ" ಎಂದು ಅವರು ಹೇಳುತ್ತಿದ್ದರು.

ಗಾಂಧೀಜಿ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರಕ್ಕೆ 1927 ಮತ್ತು 1936 ರಲ್ಲಿ ಭೇಟಿ ಕೊಟ್ಟಿದ್ದರು. 1927 ರ ಜುಲೈ 12 ರಂದು ಭೇಟಿ ಕೊಟ್ಟಾಗ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು, "ಇಲ್ಲಿಯ ವಿಶಾಲವಾದ ಪ್ರಯೋಗ ಶಾಲೆಗಳು. ಅದ್ಭುತವಾದ ಉಪಕರಣಗಳನ್ನು ನೋಡಿದಾಗ, ಇವುಗಳ ನಿರ್ಮಾಣದಲ್ಲಿದ್ದ ಕಾರ್ಮಿಕರ ನೆನಪಾಗುತ್ತದೆ. ನೀವು ಇಲ್ಲಿ ನಡೆಸುವ ಸಂಶೋಧನೆಯ ಫಲ ಆ ಕೊನೆಯ ಕಾರ್ಮಿಕನಿಗೆ ತಲುಪಿದಾಗ ಮಾತ್ರ ಸಾರ್ಥಕವಾಗುತ್ತದೆ. ನೀವು ಕೇವಲ ಪ್ರಯೋಗಶಾಲೆಗಳಿಗೆ ಮಾತ್ರ ಸೀಮಿತವಾಗಿ ಇರಬೇಡಿ. ಬದಲಾಗಿ ಹಳ್ಳಿಗಳನ್ನು ತಲುಪಿ ಆ ಜನರಿಗೂ ನಿಮ್ಮ ಸಂಶೋಧನೆಯನ್ನು ವಿವರಿಸಬೇಕು." ಎಂದರು. (ದಿ.ಹಿಂದೂ ಪತ್ರಿಕೆ 1927ರ ಜುಲೈ 13 ರಂದು ಇದನ್ನು ಪ್ರಕಟಿಸಿದೆ.) ಇದನ್ನು ನೋಡಿದಾಗ ಅವರಿಗೆ ವಿಜ್ಞಾನ ಹಳ್ಳಿಹಳ್ಳಿಗಳನ್ನು ತಲುಪಬೇಕು ಎನ್ನುವುದರ ಬಗ್ಗೆ ಇದ್ದ ಕಳಕಳಿ ಅರ್ಥವಾಗುತ್ತದೆ. ಅವರ ವೈಜ್ಞಾನಿಕ ಚಿಂತನೆಗೆ ಇದ್ದ ದೂರದೃಷ್ಟಿಯ ಅರಿವೂ ನಮಗಾಗುತ್ತದೆ.

ಗಾಂಧೀಜಿ ಅವರಿಗೆ ಎಲ್ಲ ವಿಷಯಗಳಲ್ಲಿ ಅದ್ಭುತವಾದ ಕುತೂಹಲವಿತ್ತು,ಒಬ್ಬ ವಿಜ್ಞಾನದ ವಿದ್ಯಾರ್ಥಿಗೆ ಇರಬೇಕಾದ ಚಿಕಿತ್ಸಕ ಮನೋಭಾವ ಅವರಿಗಿತ್ತು. ಅವರು 1932 ರಲ್ಲಿ ಯರವಾಡಾ ಜೈಲಿನಲ್ಲಿದ್ದಾಗ ಕಾಕಾ ಕಾಲೇಲ್ಕರ್ ಅವರೊಂದಿಗೆ ಆಕಾಶಕಾಯಗಳ ಅಧ್ಯಯನವನ್ನು ಪ್ರಾರಂಭಿಸಿದರು. ಹಲವಾರು ಗ್ರಹ, ನಕ್ಷತ್ರ ನಕ್ಷತ್ರ ಪುಂಜಗಳನ್ನು ಗಮನಿಸಿ ಚಿತ್ರಿಸಿದರು. ಗಾಂಧೀಜಿ ಅವರ ಪ್ರಕಾರ ಹೊಲಿಗೆ ಯಂತ್ರ ಮಹಿಳೆಯರಿಗೆ ಅತ್ಯುಪಯುಕ್ತವಾದ ಯಂತ್ರವಾಗಿದ್ದು ಅದುವರೆಗಿನ ಸಂಶೊಧನೆಗಳಲ್ಲಿಯೇ ಅತಿ ಶ್ರೇಷ್ಟವಾದುದಾಗಿದೆ ಎಂದಿದ್ದಾರೆ.

ಮುಂದುವರಿಯುವುದು....

ಕನ್ನಡ... ಕನ್ನಡಿಗ... ಕರ್ನಾಟಕ : ವಿನಾಯಕ ಕೃಷ್ಣ ಗೋಕಾಕ್
(06.06.1891 – 06.06.1986)

– ಡಾ. ರಾಮಲಿಂಗೇಶ್ವರ (ಸಿಸಿರಾ)

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಕನ್ನಡಕ್ಕೆ ಭಾಷೆಗೆ ಅಂತಾರಾಷ್ಟ್ರೀಯ ಖ್ಯಾತಿ ಮತ್ತು ಗೌರವವನ್ನೂ ತಂದವರು, ವಿನಾಯಕ ಕೃಷ್ಣ ಗೋಕಾಕರು ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದ್ದರು. ಆ ಕಾಲಕ್ಕೆ ಸವಣೂರು ಒಂದು ಪುಟ್ಟ ಸಂಸ್ಥಾನವಾಗಿತ್ತು. ಗೋಕಾಕರುಕನ್ನಡ–ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವ ಪಡೆದಿದ್ದವರು. ವಿನಾಯಕರ ವಿದ್ಯಾಭ್ಯಾಸ ಸವಣೂರು ಮತ್ತು ಧಾರವಾಡಗಳಲ್ಲಿ ನಡೆಯಿತು. ಕನ್ನಡದ ವರಕವಿ ಬೇಂದ್ರೆ ಅವರ ಸಂಪರ್ಕ, ಮಾರ್ಗದರ್ಶನ, ಪ್ರೋತ್ಸಾಹಗಳಿಂದಾಗಿ ಇವರ ಸಾಹಿತ್ಯ ಕೃಷಿ ಬೆಳೆಯಿತು. ಬೇಂದ್ರೆ ಅವರು ಕಾವ್ಯ ಗುರುವೂ, ಮಾರ್ಗದರ್ಶಕರೂ ಆಗಿದ್ದರೆಂದು ಗೋಕಾಕರೇ ಹೇಳಿಕೊಂಡಿದ್ದಾರೆ. ಆಂಗ್ಲ ಭಾಷೆಯಲ್ಲಿ ಎಂ.ಎ ಪದವಿಯ ನಂತರ ಪುಣೆಯ ಸಿ.ಎಸ್.ಪಿ ಕಾಲೇಜಿನಲ್ಲಿ ಉಪನ್ಯಾಸಕರಾದರು. ಇವರನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ಫರ್ಗ್ಯೂಸನ್ ಕಾಲೇಜಿನವರೇ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಇವರನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಕಳುಹಿಸಿದ್ದರು.

ಗೋಕಾಕರು ಆಕ್ಸ್‌ಫರ್ಡ್‌ನಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. "ಆಕ್ಸ್‌ಫರ್ಡ್‌ನಲ್ಲಿ ಇಂಗ್ಲೀಷ್ ಸಾಹಿತ್ಯವನ್ನು ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದ ಮೊದಲ ಭಾರತೀಯ" ಎಂಬ ಕೀರ್ತಿಗೂ ಪಾತ್ರರಾದರು. ಇಂಗ್ಲೆಂಡಿನಿಂದ ಹಿಂತಿರುಗಿದಾಗ ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜಿನ ಪ್ರಿನ್ಸಿಪಾಲರಾದರು. ಪುಣೆಯ ಫರ್ಗೂಸನ್ ಕಾಲೇಜು, ವೀಸನಗರದ ಕಾಲೇಜು, ಕೊಲ್ಲಾಪುರದ ರಾಜಾರಾಮ ಕಾಲೇಜು, ಧಾರವಾಡದ ಕರ್ನಾಟಕ ಕಾಲೇಜು, ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದಿನಲ್ಲಿರುವ ಇಂಗ್ಲೀಷ್ ಮತ್ತು ವಿದೇಶೀ ಭಾಷೆಗಳ ಕೇಂದ್ರ ಸಂಸ್ಥೆ, ಸಿಮ್ಲಾದಲ್ಲಿರುವ ಉನ್ನತ ಅಧ್ಯಯನ ಸಂಸ್ಥೆ –ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಶ್ರೀ ಸತ್ಯಸಾಯಿ ಉನ್ನತ ಅಧ್ಯಯನ ಸಂಸ್ಥೆಯ ಉಪಕುಲಪತಿಗಳಾಗಿದ್ದರು. ಜಪಾನ್, ಅಮೆರಿಕ, ಇಂಗ್ಲೆಂಡ್, ಬೆಲ್ಜಿಯಂ, ಗ್ರೀಸ್, ಪೂರ್ವ ಆಫ್ರಿಕ ಮೊದಲಾದ ದೇಶಗಳಿಗೆ ಭಾರತದ ಸಾಂಸ್ಕೃತಿಕ ರಾಯಭಾರಿಯೂ ಆಗಿದ್ದರು. ಕನ್ನಡ, ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಗೋಕಾಕರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಮೊದಲ ಕೃತಿ "ಕಲೋಪಾಸಕರು". ಅವರು ಇಂಗ್ಲೆಂಡಿಗೆ ಸಾಗರ ಮಾರ್ಗದಲ್ಲಿ ಹೋಗಿ ಬಂದ ಅನುಭವದ "ಸಮುದ್ರ ಗೀತೆಗಳು", ನಂತರ ಪಯಣ, ಆಕಾಶವಾಣಿ, ಅಭ್ಯುದಯ, ನವ್ಯ ಕವಿತೆಗಳು, ಕಾಶ್ಮೀರ, ಇಂದಲ್ಲನಾಳೆ ಕವನಸಂಕಲನಗಳನ್ನು ರಚಿಸಿದ್ದಾರೆ. ಹಾಗೂ ಜನನಾಯಕ, ಯುಗಾಂತರ, ಮುನಿದಮಾರಿ, ಇಜ್ಜೋಡು ನಾಟಕಗಳನ್ನು, ಸಮರಸವೇ ಜೀವನ, ಸಮುದ್ರದಾಚೆಯಿಂದ ಕಾದಂಬರಿಗಳನ್ನು, ವಿಶ್ವಮಾನವ ದೃಷ್ಟಿ, ಸೌಂದರ್ಯ ಮೀಮಾಂಸೆ, ಅರ್ಪಣಾದೃಷ್ಟಿ, ಕನ್ನಡ ಕಾವ್ಯ ಗೊತ್ತುಗುರಿಗಳು ಎಂಬ ವಿಮರ್ಶಾ ಕೃತಿಗಳನ್ನೂ ರಚಿಸಿದ್ದಾರೆ.

ಮುಕ್ತ ಛಂದಸ್ಸನ್ನು ಮೊದಲ ಬಾರಿ ಬೆಳಕಿಗೆ ತಂದವರು ಗೋಕಾಕರು. ವೀಸಾ ನಗರದಲ್ಲಿ ಎಂ.ಎನ್. ಕಾಲೇಜನ್ನು ಕಟ್ಟುವಲ್ಲಿ ಗೋಕಾಕರ ಪಾತ್ರ ಮಹತ್ವಪೂರ್ಣವಾಗಿದೆ. ಸಾರ್ವಜನಿಕ ಮತ್ತು ವೈಯಕ್ತಿಕ ಜೀವನದಲ್ಲಿ ಗಾಂಧಿ ಅವರ ಸರ್ವಧರ್ಮ ಸಮಾನತ್ವದ ಪ್ರತಿಪಾದಕರಾಗಿದ್ದರು. ಅವರ ಮೊಮ್ಮಗನ ಉಪನಯನದ ಸಮಾರಂಭದಲ್ಲಿ ವಿವಿಧ ಧರ್ಮದ ಹಿರಿಯರನ್ನು ಆಹ್ವಾನಿಸಿ, ಕ್ರೈಸ್ತ, ಮುಸ್ಲಿಂ, ಪಾರ್ಸಿ, ಹಿಂದೂ ಧಾರ್ಮಿಕ ಗ್ರಂಥಗಳಿಂದ ಪ್ರಾರ್ಥನೆಗಳನ್ನು ಮಾಡಿಸಿದರು. ಅವರ ಮೊಮ್ಮಗನ ದೃಷ್ಟಿಯಲ್ಲಿ ಇದೊಂದು "ಸರ್ವಧರ್ಮ ಪರಿಷತ್ತಾಗಿತ್ತು". ಗೋಕಾಕರು ವಿದ್ಯಾರ್ಥಿಗಳ ಸ್ನೇಹಿತ, ಮಾರ್ಗದರ್ಶಕ ಹಾಗೂ ನೆಚ್ಚಿನ ಗುರುವಾಗಿದ್ದರು. ಆಗ ಸ್ವಾತಂತ್ರ್ಯ ಹೋರಾಟ ತೀವ್ರವಾಗಿದ್ದ ಕಾಲ. ಗೋಕಾಕರು ಸಾಂಗ್ಲಿಯ ವಿಲ್ಲಿಂಗ್ಟನ್ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದರು.



ವಿದ್ಯಾರ್ಥಿ ಚಳುವಳಿಯು ತೀವ್ರಗೊಂಡಾಗ, ಎಸ್‌ಪಿ ಅವರು, ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಮಾಡಲು ಸಜ್ಜಾಗಿದ್ದರು. ಆ ಕ್ಷಣದಲ್ಲಿ ಪ್ರಿನ್ಸಿಪಾಲ್ ಗೋಕಾಕರು, ಎಸ್ಪಿ ಅವರ ಮುಂದೆ "ಗುಂಡು ಹಾರುಸುವುದಾದರೆ ನನ್ನ ಮೇಲೆ ಹಾರಿಸಿರಿ" ಎಂದರು. ಗೋಲಿಬಾರು ಆಗಲಿಲ್ಲ ಆದರೆ ಎಸ್ಪಿ ಅವರು ವಿದ್ಯಾರ್ಥಿ ಪಿ.ಜೆ. ಪಾಟೀಲನನ್ನು ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಜೈಲಿಗೆ ಕಳುಹಿಸಿದ್ದರು. ನೆಚ್ಚಿನ ವಿದ್ಯಾರ್ಥಿಯ ಜೈಲುವಾಸ, ದುರಂತವಾಗಬಾರದೆಂದು ಅವನಿಗೆ ಅವಶ್ಯಕ ವಸ್ತುಗಳನ್ನು, ಪುಸ್ತಕಗಳನ್ನು ಕಳುಹಿಸುತ್ತಿದ್ದರು ಮತ್ತು ಪತ್ರ ಬರೆಯುತ್ತಿದ್ದರು.

ಧಾರವಾಡದ ಕರ್ನಾಟಕ ಕಾಲೇಜೆಂದರೆ ತೀರಾ ಅಚ್ಚುಮೆಚ್ಚು, ಗೋಕಾಕರು ಪ್ರಿನ್ಸಿಪಾಲರಾಗಿ ಆ ಕಾಲೇಜನ್ನು ಹಲವು ಆಯಾಮಗಳಲ್ಲಿ ವಿಸ್ತರಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಅವರ ಅಂತಿಮ ದಿನಗಳಲ್ಲಿ ಆ ಕಾಲೇಜನ್ನು ಹಾದು ಹೋಗುವ ಪ್ರಸಂಗ ಬಂದಿತ್ತು. ಆ ಸಂದರ್ಭದಲ್ಲಿ ಅವರಿಗೆ ಹಳೆಯ ನೆನಪುಗಳ ಸರಮಾಲೆಯೇ ಹೊಮ್ಮಿತ್ತು. ವಿದ್ಯಾರ್ಥಿಗಳೊಂದಿಗೆ ಅವರೇ ನಿರ್ಮಿಸಿದ ಇಂದು ಹೆಸರಾಗಿರುವ "ಗೋಕಾಕ್ ರಸ್ತೆ"ಯನ್ನು ಕುರಿತು ಅವರು ಬರೆದ Of a Road and open Road, Of a road in all my song The road we made, through sun and shade and made so nice and long" ಕವನವನ್ನು ಜ್ಞಾಪಿಸಿಕೊಂಡರು

ಇವರ ಸಾಹಿತ್ಯ–ಸಂಸ್ಕೃತಿ–ಶಿಕ್ಷಣದ ಸೇವೆಗೆ 1967ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು 1979ರಲ್ಲಿ ಕ್ಯಾಲಿಫೋರ್ನಿಯಾದ ಫೆಸಿಫಿಕ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್, 1961ರಲ್ಲಿ ಪದ್ಮಶ್ರೀ ಪ್ರಶಸ್ತಿ, ಹಂಪಿ ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್, ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ. ಭಾರತೀಯ ವಿದ್ಯಾಭವನದ ರಾಜಾಜಿ ಪ್ರಶಸ್ತಿ, ಐ.ಬಿ.ಎಚ್. ಪ್ರಶಸ್ತಿಗಳೂ ಪ್ರಧಾನ ಮಾಡಲಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷತೆ ಮತ್ತು ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷತೆ, ಇವೆರಡೂ ಕನ್ನಡಿಗರೊಬ್ಬರಿಗೆ ಮೊದಲ ಬಾರಿಗೆ ಸಂದ ಗೌರವಗಳಾಗಿವೆ. 1958ರ ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಇವರ ಮಹತ್ವದ 'ಭಾರತ ಸಿಂಧು ರಶ್ಮಿ' ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಪ್ರಾಪ್ತವಾಗಿದೆ. ಕರ್ನಾಟಕ ಸರ್ಕಾರ 1980ರಲ್ಲಿ ಶಿಕ್ಷಣದಲ್ಲಿ ಕನ್ನಡ ಭಾಷೆ ಕುರಿತು ವರದಿ ನೀಡಲು ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಈ ಸಮಿತಿ ನೀಡಿದ ವರದಿಯನ್ನ ಸರ್ಕಾರ ಅಂಗೀಕರಿಸಲು ಇಚ್ಛಿಸಲಿಲ್ಲ. ಈ ಸಂದರ್ಭದಲ್ಲಿ ನಡೆದ ಕನ್ನಡ ಚಳವಳಿ ಇತಿಹಾಸದಲ್ಲಿ "ಗೋಕಾಕ್ ಚಳವಳಿ" ಎಂದೇ ಮಾನ್ಯವಾಗಿದೆ. ಇದರ ಫಲವಾಗಿ ಕರ್ನಾಟಕದ ಕನ್ನಡೇತರ ಶಾಲೆಗಳಲ್ಲೂ ಮೂರನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೂ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಓದಬೇಕಾಗಿದೆ.

"ಸರಸ ಜನನ, ವಿರಸ ಮರಣ, ಸಮರಸವೇ ಜೀವನ" ಎಂಬ ಇವರ ಜೀವನಾನುಭವದ ಸಂದೇಶವು ಮನೆಮಾತಾಗಿದೆ.

ಹೆಮ್ಮೆಯ ಕನ್ನಡಿಗ : ವರನಟ ಡಾ. ರಾಜ್‌ಕುಮಾರ್

(ಏಪ್ರಿಲ್ 24, 1929 – ಏಪ್ರಿಲ್ 12, 2006)

ಮಹೇಶ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಕನ್ನಡಕ್ಕೊಬ್ಬನೇ ರಾಜಕುಮಾರ

1977ರಲ್ಲಿ ಬಿಡುಗಡೆಯಾದ ಸನಾದಿ ಅಪ್ಪಣ್ಣ ಚಿತ್ರದಲ್ಲಿ, ಡಾ. ರಾಜ್ ಶಹನಾಯಿ ವಾದಕರಾಗಿ ಅಭಿನಯಿಸಿದರು. ಈ ಚಿತ್ರಕ್ಕೆ ಭಾರತದ ಪ್ರಖ್ಯಾತ ಶಹನಾಯಿ ವಾದಕರಾದ ಉಸ್ತಾದ್ ಬಿಸ್ಮಿಲ್ಲಾ ಖಾನರ ಶಹನಾಯಿ ವಾದನವೇ ಜೊತೆಯಾಗಿತ್ತು. 1980ರ ದಶಕದಲ್ಲಿ ಸದಭಿರುಚಿಯ ಸಾಮಾಜಿಕ ಚಿತ್ರಗಳಾದ ಹಾಲುಜೇನು, ಚಲಿಸುವ ಮೋಡಗಳು, ಹೊಸ ಬೆಳಕು, ಶ್ರಾವಣ ಬಂತು, ಅನುರಾಗ ಅರಳಿತು, ಶ್ರುತಿ ಸೇರಿದಾಗ ಮುಂತಾದ ಯಶಸ್ವಿ ಚಿತ್ರಗಳು ತೆರೆಕಂಡವು. 1983ರ ಕವಿರತ್ನ ಕಾಳಿದಾಸ, ಡಾ. ರಾಜ್ ಅವರ ಕಲಾ ನೈಪುಣ್ಯಕ್ಕೆ ಒರೆ ಹಚ್ಚಿದ ಚಿತ್ರ. ಈ ಚಿತ್ರದಲ್ಲಿ ಅವಿದ್ಯಾವಂತ ಕುರುಬನಾಗಿಯೂ, ಮಹಾಕವಿಯಾದ ಕಾಳಿದಾಸನಾಗಿಯೂ, ದುಷ್ಯಂತ ಮಹಾರಾಜನಾಗಿಯೂ ವಿವಿಧ ಪಾತ್ರಗಳಿಗೆ ರಾಜ್ ಜೀವ ತುಂಬಿದ್ದಾರೆ. ಡಾ. ರಾಜ್ ಅವರ ಇನ್ನೂರನೇ ಚಿತ್ರವು 1988ರಲ್ಲಿ ತೆರೆಕಂಡ ದೇವತಾ ಮನುಷ್ಯ. ಒಡಹುಟ್ಟಿದವರು, "ಜೀವನ ಚೈತ್ರ" ಚಿತ್ರದ ಮೂಲಕ ಮದ್ಯಪಾನ ನಿಷೇಧ ಮತ್ತು "ಆಕಸ್ಮಿಕ" ಚಿತ್ರದ ಮೂಲಕ ಹೆಣ್ಣಿನ ಶೋಷಣೆಯ ವಿರುದ್ಧ ಹಾಗೂ "ಶಬ್ದವೇಧಿ" ಚಿತ್ರದ ಮೂಲಕ ಮಾದಕ ವ್ಯಸನಗಳ ವಿರುದ್ಧ ಹೋರಾಡುವ ಪಾತ್ರದಲ್ಲಿ ಡಾ. ರಾಜ್ ಅವರು ಕೌಟುಂಬಿಕ ಹಾಗೂ ಸಾಮಾಜಿಕ ಕಳಕಳಿಯ ಚಿತ್ರಗಳು ಜನಮನ್ನಣೆ ಗಳಿಸಿವೆ.

ಭಕ್ತಅಂಬರೀಶ ಎಂಬ ಚಿತ್ರದಲ್ಲಿ ನಟಿಸಬೇಕೆಂಬ ಅವರ ಕನಸು ಕನಸಾಗಿಯೇ ಉಳಿಯಿತು. ಸುಮಾರು 206 ಚಿತ್ರಗಳಲ್ಲಿ ನಾಯಕನಟರಾಗಿದ್ದ ರಾಜ್‌ಕುಮಾರ್ ಬೆರಳೆಣಿಕೆಯ ರಿಮೇಕ್ ಚಿತ್ರಗಳಲ್ಲಿ ನಟಿಸಿದ್ದಾರೆ. ಡಾ. ರಾಜ್ ಕುಮಾರ್ ಅವರು ಅಂದಿನ ಬಹುತೇಕ ಜನಪ್ರಿಯ ನಾಯಕಿಯರೊಂದಿಗೆ ನಟಿಸಿದ್ದಾರೆ. ಎಂ.ವಿ.ರಾಜಮ್ಮ, ಪಂಡರೀಬಾಯಿ, ಪ್ರತಿಮಾದೇವಿ, ಹರಿಣಿ, ಸಾಹುಕಾರ್ ಜಾನಕಿ, ಕೃಷ್ಣಕುಮಾರಿ, ರಾಜಸುಲೋಚನ, ಬಿ.ಸರೋಜದೇವಿ, ಸಂಧ್ಯಾ, ಮೈನಾವತಿ, ಲೀಲಾವತಿ, ಜಯಂತಿ, ಭಾರತಿ, ಕಲ್ಪನಾ, ವಂದನಾ, ಚಂದ್ರಕಲಾ, ಉದಯಚಂದ್ರಿಕಾ, ಬಿ.ವಿ.ರಾಧ, ಶೈಲಶ್ರೀ, ರಾಜಶ್ರೀ, ಆರತಿ, ಮಂಜುಳಾ, ಲಕ್ಷ್ಮಿ, ರೇಖಾ, ಜಯಮಾಲಾ, ಜಯಪ್ರದಾ, ಗಾಯತ್ರಿ, ಸರಿತಾ, ಜಯಚಿತ್ರಾ, ಕಾಂಚನಾ, ವಾಣಿಶ್ರೀ, ಜಿ.ವಿ.ಲತಾ, ಮಾಧವಿ, ಗೀತಾ, ಅಂಬಿಕಾ, ರೂಪಾದೇವಿ, ಊರ್ವಶಿ ಮುಂತಾದವರೊಂದಿಗೆ ನಟಿಸಿದ್ದಾರೆ. ರಾಜ್–ಭಾರತಿ, ರಾಜ್–ಲೀಲಾವತಿ, ರಾಜ್–ಜಯಂತಿ, ರಾಜ್–ಕಲ್ಪನಾ ಜೋಡಿ ಅತ್ಯಂತ ಜನಪ್ರಿಯ ಜೋಡಿಯಾಗಿತ್ತು. ಭಾರತೀಯ ಚಿತ್ರರಂಗದ ನೂರು ವರ್ಷ ಸಂದರ್ಭದಲ್ಲಿ ಫೋರ್ಬ್ಸ್ ಪತ್ರಿಕೆಯು ಪ್ರಕಟಿಸಿರುವ 25 ಅತ್ಯದ್ಭುತ ಚಲನಚಿತ್ರ ಕಲಾವಿದರ ಪಟ್ಟಿಯಲ್ಲಿ ಡಾ. ರಾಜ್ ಕುಮಾರ್ ಅವರ "ಬಂಗಾರದ ಮನುಷ್ಯ" ಚಿತ್ರದ ಅಭಿನಯವೂ ಒಂದಾಗಿದೆ. ಇವರಿಗೆ "ನಟಸಾರ್ವಭೌಮ" ಎಂಬ ಬಿರುದು, ಮೈಸೂರು ಹಾಗೂ ಹಂಪಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ಮತ್ತು ಚಿತ್ರರಂಗದಲ್ಲಿನ ಜೀವಮಾನದ ಸಾಧನೆಗಾಗಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿಗಳು ಪ್ರಧಾನಿಸಲ್ಪಟ್ಟಿವೆ. ಕನ್ನಡ ಚಿತ್ರರಂಗದ ಪ್ರಮುಖ ಚಿತ್ರ ನಿರ್ಮಾಪಕರಾದ ಪಾರ್ವತಮ್ಮ ರಾಜ್‌ಕುಮಾರ್ ಅವರು ವಜ್ರೇಶ್ವರಿ ಸಂಸ್ಥೆಯ ಅಡಿಯಲ್ಲಿ ಹಲವಾರು ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ. ಡಾ. ರಾಜ್ ದಂಪತಿಗಳ 5ಜನ ಮಕ್ಕಳು. ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರುಗಳೂ ಸಹ ಕನ್ನಡ ಚಿತ್ರರಂಗದ ನಾಯಕ ನಟರಾಗಿದ್ದಾರೆ. 'ಜೀವನ ಚೈತ್ರ' ಚಿತ್ರದಲ್ಲಿನ "ನಾದಮಯ ಈ ಲೋಕವೆಲ್ಲಾ" ಗಾಯನಕ್ಕೆ ಡಾ. ರಾಜ್ ಅವರಿಗೆ ರಾಷ್ಟ್ರ ಪ್ರಶಸ್ತಿ ಸಂದಿವೆ. ಇವರು ಚಿತ್ರಗೀತೆಗಳಷ್ಟೇ ಅಲ್ಲದೆ ಹಲವಾರು ಭಕ್ತಿಗೀತೆಗಳನ್ನೂ, ಕೀರ್ತನೆಗಳನ್ನು ಹಾಡಿರುವರು. ಕನ್ನಡವೇ ಸತ್ಯ, ಅನುರಾಗ, ಮಂಕುತಿಮ್ಮನ ಕಗ್ಗ – ರಾಜ್ ಕಂಠದಲ್ಲಿ ಮೂಡಿ ಬಂದ ಭಾವಗೀತಾ ಸಂಕಲನಗಳು.



ಕನ್ನಡಪರ ಚಳುವಳಿಗಳಲ್ಲಿ ಡಾ. ರಾಜ್

ಗೋಕಾಕ್ ವರದಿಯು ಕನ್ನಡವನ್ನು ಶಿಕ್ಷಣದಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಹಾಗು ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಕನ್ನಡ ಭಾಷೆಗೆ ಕೊಡುವುದರ ಕುರಿತಾಗಿತ್ತು. ಆದರೆ, ಈ ವರದಿಯು ಜಾರಿಗೆ ಅನೇಕ ತೊಡಕುಗಳಿದ್ದವು. 1981ರಲ್ಲಿ ಪಾಟೀಲ ಪುಟ್ಟಪ್ಪ, ಚಂದ್ರಶೇಖರಪಾಟೀಲ್ ಮುಂತಾದ ಸಾಹಿತಿಗಳು, ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಗೋಕಾಕ್ ವರದಿಯನ್ನು ಜಾರಿಗೊಳಿಸುವಂತೆ ಚಳುವಳಿಯನ್ನು ಪ್ರಾರಂಭಿಸಿದರು. ಚಳುವಳಿಯು ನೀರಸವಾಗಿದ್ದ ಸಮಯದಲ್ಲಿ, ಡಾ. ರಾಜ್ ಅವರ ಭಾಗವಹಿಸುವಿಕೆ ಚಳುವಳಿಯ ತೀವ್ರತೆಗೆ ಕಾರಣವಾಯಿತು. ಡಾ. ರಾಜ್ ನೇತೃತ್ವದಲ್ಲಿ ಕನ್ನಡ ಚಿತ್ರರಂಗದ ಕಲಾವಿದರು ಗೋಕಾಕ್ ಚಳುವಳಿಗೆ ಸಂಪೂರ್ಣ ಸಹಕಾರ ನೀಡಿದರು. ಕರ್ನಾಟಕದ ಜನತೆ ಚಳುವಳಿಯಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಉತ್ಸಾಹದಿಂದ ಭಾಗವಹಿಸಿದರು. ಕನ್ನಡ ಭಾಷಾಭಿಮಾನ, ಮಾನ್ಯತೆ ಮತ್ತು ಸೌಲಭ್ಯಗಳು ಸರ್ಕಾರಕ್ಕೆ ಮನದಟ್ಟು ಮಾಡಿಕೊಡಲು, ಡಾ. ರಾಜ್ ಅವರ ಭಾಷಣಗಳು ಹಾಗು ಚಳುವಳಿಯ ನೇತೃತ್ವ ಸಹಾಯಕಾರಿಯಾದವು. ಮಾನ್ಯ ಮುಖ್ಯಮಂತ್ರಿಗಳಾದ ಗುಂಡೂರಾವ್ ನೇತೃತ್ವದ ಸರ್ಕಾರವು ಚಳುವಳಿಯ ತೀವ್ರತೆಗೆ ಸ್ಪಂದಿಸಿ, ಗೋಕಾಕ್ ವರದಿಯನ್ನು ಜಾರಿಗೊಳಿಸಿತು.

ವಿಶ್ವದ ಮಹಾನ್ ದಾನಿ : ರತನ್ ಟಾಟಾ

ಡಾ. ಅಶೋಕ್‌ಕುಮಾರ್

ಇತ್ತೀಚಿನ ಸಮೀಕ್ಷೆಯಿಂದ ರತನ್ ಟಾಟಾ ಅವರು ವಿಶ್ವದ ನಂ-1 ದಾನಿ ಎಂದು ಅನಾವರಣಗೊಂಡಿರುವುದು ಭಾರತದ ಘನತೆಗೆ ಮತ್ತೊಂದು ಗರಿ ಮೂಡಿದಂತಾಗಿದೆ. ಜಗತ್ತಿನ ಬಿಲ್ ಗೇಟ್ಸ್, ವಾರನ್ ಬಫೆಟ್ಸ್ ಮತ್ತಿತರರು ಮಹಾನ್ ದಾನಿಗಳೆಂದು ಬಿಂಬಿಸುತ್ತಿರುವ ವೇಳೆಯಲ್ಲಿ ಮಹಾನ್ ದಾನಿ ಭಾರತದಲ್ಲೇ ಇದ್ದಾರೆ ಎಂಬ ಅಂಶ ಖೇದಾಶ್ಚರ್ಯವನ್ನುಂಟು ಮಾಡಿತ್ತು. ಇದನ್ನು ಗೌಪ್ಯವಾಗಿರಿಸುವ ಸಂಚು ನಡೆಯಿತೇನೋ ಎಂಬಷ್ಟು ಕುತೂಹಲಕಾರಿಯಾದ ಅಂಶವಾಗಿದೆ. ರತನ್ ಟಾಟ ತಮ್ಮ ಒಟ್ಟು ಸಂಪತ್ತಿನ 65% ಭಾಗದಷ್ಟನ್ನು ವಿವಿಧ ಸಂಘ ಸಂಸ್ಥೆಗಳಿಗೆ ದತ್ತಿ ದಾನದ ರೂಪದಲ್ಲಿ ಹಾಗೂ ಸಾಮಾಜಿಕ ಧ್ಯೇಯೋದ್ದೇಶಗಳಿಗೆ ವಿನಿಯೋಗಿಸುತ್ತಿದ್ದಾರೆ. ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ ನೆರವು, ವಿಪತ್ತು ಸಂದರ್ಭದಲ್ಲಿ ಸಂತ್ರಸ್ಥರಿಗೆ ಸಹಾಯಹಸ್ತ, ಅತಿವೃಷ್ಟಿ, ಅನಾವೃಷ್ಟಿಯ ಸಮಯದಲ್ಲಿ ಆರ್ಥಿಕ ನೆರವು ನೀಡುವುದರ ಮೂಲಕ ವಿಶ್ವದ ಮಹಾನ್ ದಾನಿ ಎಂದೇ ಹೆಸರಾಗಿದ್ದಾರೆ.

ಇಂಥಹ ದೇಶಪ್ರೇಮಿ, ಭಾರತದ ಹೆಮ್ಮೆಯ ಉದ್ಯಮಿ, ಸಹೃದಯಿ, ಸಮಾಜದ ಒಳಿತಿಗಾಗಿ ಸದಾ ಮಿಡಿಯುವ ರತನ್ ಟಾಟಾ ಅವರು ಶ್ರೀಮತಿ. ಸೂನಿ ಹಾಗೂ, 'ನಾವಲ್ ಹರ್ಮುಸ್ ಜೆ .ಟಾಟಾ', ಅವರ ಹಿರಿಯ ಮಗನಾಗಿ ಬೊಂಬಾಯಿನಲ್ಲಿ ಜನಿಸಿದರು. 1940ರಲ್ಲಿ ತಂದೆ-ತಾಯಿಗಳ ವಿಚ್ಛೇದನದಿಂದ ಜೀವನದಲ್ಲಿ ಬಹಳ ನೋವನ್ನು ಅನುಭವಿಸಬೇಕಾಯಿತು. ಅವರ 7ನೇ ವಯಸ್ಸಿನಿಂದಲೂ, ಅವರ ಸಹೋದರ ಮತ್ತು 5 ವರ್ಷದ 'ಜಿಮ್ಮಿ'ಯೊಂದಿಗೆ ಅಜ್ಜಿ ನವಾಜ್ ಬಾಯಿಯ ಆಸರೆಯಲ್ಲಿ ಬೆಳೆದರು. ಅವರ ಅಜ್ಜಿ ಬೊಂಬಾಯಿನಲ್ಲಿ ತೀವ್ರವಾದ, ಕಾಯಿಲೆಯಿಂದ ನರಳುತ್ತಿದ್ದಾಗ "ಜೆ.ಆರ್.ಡಿ." ಅವರು, ರತನ್ ಅವರನ್ನು ಭಾರತಕ್ಕೆ ವಾಪಸ್ ಕರೆತಂದರು. ರತನ್ ಬೊಂಬಾಯಿಯಲ್ಲಿ ಕೆಥೆಡ್ರೆಲ್, ಜಾನ್ ಕೆನನ್ ಸ್ಕೂಲ್‌ನಲ್ಲಿ ಪ್ರಥಮ ಶಿಕ್ಷಣ. ನಂತರ 1962 ರಲ್ಲಿ ಕಾರ್ನೆಲ್‌ನಲ್ಲಿ ಪದವಿ ಪಡೆದರು. ತದನಂತರ ಕನ್‌ಸ್ಟ್ರಕ್ಷನ್ ಹಾಗೂ ಸ್ಟ್ರಕ್ಚರಲ್ ಎಂಜಿನಿಯರಿಂಗ್‌ನಲ್ಲಿ ವಿಶೇಷ ಜ್ಞಾನಾರ್ಜನೆ ಪಡೆದರು. ಐ.ಬಿ.ಎಂ.ನಿಂದ ಅವರ ಸೇವೆಗಾಗಿ ಕರೆಬಂದಿತ್ತು.

ಭಾರತಕ್ಕೆ ವಾಪಸ್ಸಾಗುವ ಮೊದಲು, ಲಾಸ್ ಎಂಜಲೀಸ್, ಮತ್ತು ಕ್ಯಾಲಿಫೋರ್ನಿಯದಲ್ಲಿ 'ಮೆಸರ್ಸ್. ಜೋನ್ಸ್ ಅಂಡ್ ಎಮ್ಮನ್ಸ್ ಕಂಪನಿಯಲ್ಲಿ', ಸ್ವಲ್ಪಕಾಲ ಕೆಲಸ ಮಾಡಿದ್ದರು. ಭಾರತಕ್ಕೆ ಬಂದಾಕ್ಷಣ ಟಾಟಾ ಸಮೂಹದ ಹಲವಾರು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಕೆಲಸ ಮಾಡಿ, ಕೊನೆಯಲ್ಲಿ, 'ಎನ್. ಇ.ಎಲ್ ಕಂಪೆನಿ'ಯ ಛೇರ್ಮನ್‌ರಾದರು. 1981 ರಲ್ಲಿ, ಹೈಟೆಕ್ ವಿಭಾಗದಲ್ಲಿ ಹಲವಾರು ಹೊಸ, ತಂತ್ರಜ್ಞಾನಗಳಿಗೆ ನಾಂದಿಹಾಡಿ ಬೆಳೆಸಿದರು. ಬೃಹತ್ ಟಾಟಾ ಉದ್ಯಮದಲ್ಲಿ ಇದುವರೆಗೆ ಕಾರ್ಯನಿರ್ವಹಿಸಿದ ನಿರ್ದೇಶಕರಲ್ಲಿ, ರತನ್ ಅವರು ಮಾತ್ರ ಉನ್ನತ ವ್ಯಾಸಂಗ ಮಾಡಿದವರಾಗಿದ್ದಾರೆ. ರತನ್ ಟಾಟಾ ಅವರು ಜೆ.ಆರ್.ಡಿ ಅವರ ನೆಚ್ಚಿನ ಶಿಷ್ಯರಾಗಿದ್ದರು. ಟಾಟಾಸನ್ಸ್, ಸಂಸ್ಥೆಯ ಛೇರ್ಮನ್ ಆಗಿರುವ, ರತನ್ ಟಾಟಾ ಅವರೇ, ಟಾಟಾ ಸಮೂಹ ಸಂಸ್ಥೆಗಳ ನಿರ್ವಾಹಕರೂ ಆಗಿದ್ದಾರೆ.



ಅನೇಕ ಪ್ರಮುಖ ಟಾಟಾ ಉದ್ಯಮಗಳಾದ, ಟಾಟಾ ಸ್ಟೀಲ್, ಟಾಟಾ ಮೋಟರ್ಸ್, ಟಾಟಾ ಪವರ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಟಾಟಾ ಟೀ, ಟಾಟಾ ತಂತ್ರಜ್ಞಾನ, ಇಂಡಿಯನ್ ಹೋಟೆಲ್ಸ್ ಮತ್ತು ಟಾಟಾ ಟೆಲಿ ಸರ್ವಿಸಸ್ ಮುಂತಾದ ವಿಭಾಗಗಳಲ್ಲಿ ಅತ್ಯಾಧುನಿಕ ತಾಂತ್ರಿಕತೆ ಮತ್ತು ಮುಂದಾಲೋಚನೆ ಕ್ರಮಗಳನ್ನು ಅಳವಡಿಸಿ ಅಂತರರಾಷ್ಟ್ರೀಯ ಮಟ್ಟಕ್ಕೇರಿಸಿದರು. ಟಾಟಾ ಸಮೂಹ ಸಂಸ್ಥೆಗಳು ವಿಶ್ವದಲ್ಲಿ ಲಾಭಗಳಿಸುವ ಸಂಸ್ಥೆಗಳಲ್ಲಿ ಒಂದಾಗಿವೆ. ಟಾಟಾ ಉದ್ಯಮ ಪರಿವಾರ, ಯೂರೋಪಿನ, ಕೊರಸ್ ಸ್ಟೀಲ್, ಕಂಪೆನಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ಮೂಲಕ ವಿಕ್ರಮವನ್ನೇ ಸ್ಥಾಪಿಸಿದೆ. ರತನ್ ಟಾಟಾ ಅವರ ದೂರದರ್ಶಿತ್ವ, ಮನೋಸ್ಥೈರ್ಯ, ಮುಂದಾಳುತ್ವ, ಹಾಗೂ ಸಕಾಲಿಕ ತೀರ್ಮಾನಗಳಿಂದ, ಭಾರತದ ಆಧುನಿಕತೆ ಮತ್ತು ಕೈಗಾರೀಕರಣಕ್ಕೆ ಹೊಸ ಮುನ್ನುಡಿಯನ್ನೇ ಬರೆಯಲಾಗಿದೆ. ಟಾಟಾ ವಾಣಿಜ್ಯ ಪರಿವಾರ ಈಗಾಗಲೇ ವಿಶ್ವದ 50 ವಿದೇಶಿ ಸಂಸ್ಥೆಗಳಲ್ಲಿ, ತನ್ನ ಬಂಡವಾಳವನ್ನು ಹೂಡಿ ಯಶಸ್ವಿಯಾಗಿದೆ. ಅವುಗಳಲ್ಲಿ ಮುಖ್ಯವಾದ ಕೆಲವು ಕಂಪೆನಿಗಳಲ್ಲಿ, ದಾವೂ ಟ್ರಕ್ಸ್, ಮತ್ತು ಟೆಟ್ಲಿ ಟೀ ಕೂಡ ಸೇರಿವೆ.

ಭಾರತದಲ್ಲಿಯೇ ಸಂಪೂರ್ಣವಾಗಿ ಸಿದ್ದಗೊಳಿಸಿದ ದೇಶೀಯ ಕಾರನ್ನು ಗ್ರಾಹಕರಿಗೆ ಕಡಿಮೆದರದಲ್ಲಿ ಒದಗಿಸುವ ಮಹದಾಕಾಂಕ್ಷೆ ಅವರಿಗೆ ಬಹಳವಾಗಿತ್ತು. 'ಟಾಟಾ ಇಂಡಿಕಾ' ತಯಾರಿಕೆಯಿಂದಾಗಿ ಆ ಕನಸು ಸಾಕಾರವಾಯಿತು. ಸಿಂಗೂರ್‌ನಲ್ಲಿ ನ್ಯಾನೋ ಚಿಕ್ಕ ಕಾರನ್ನು ತಯಾರು ಮಾಡುವ ಕಾರ್ಖಾನೆಯನ್ನೂ ಸ್ಥಾಪಿಸಿದ್ದಾರೆ. ಜೆ.ಆರ್.ಡಿ. ಟಾಟಾ ಅವರು, ಛೇರ್ಮನ ಹುದ್ದೆಯನ್ನು ರತನ್ ಅವರಿಗೆ, 1991ರಲ್ಲಿ ಒಪ್ಪಿಸಿ, ಟಾಟಾ ಉದ್ಯಮದ ಸರ್ವಾಧಿಕಾರವನ್ನು ನೀಡಿದ್ದರು. ರತನ್ ಅಧಿಕಾರಕ್ಕೆ ಬಂದ ಅಲ್ಪಾವಧಿಯಲ್ಲಿಯೇ ಟಿ.ಸಿ.ಎಸ್ ಕಂಪೆನಿಯನ್ನು ಪಬ್ಲಿಕ್ ಶೇರ್ ಕಂಪೆನಿಯಾಗಿ ಪರಿವರ್ತಿಸಿದರು. ಟಾಟಾ ಮೋಟರ್ಸ್ ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಛೇಂಜ್‌ನಲ್ಲಿ, ಸೇರ್ಪಡೆಯಾಯಿತು.

ಇವರಿಗೆ ಭಾರತ ಸರ್ಕಾರದ ಮೇರುಪ್ರಶಸ್ತಿಗಳಾದ 'ಪದ್ಮ ಭೂಷಣ', 'ಡಾಕ್ಟರೇಟ್ ಇನ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್', ಅಮೆರಿಕದ 'ಒಹೈ', ವಿಶ್ವವಿದ್ಯಾಲಯದಿಂದ 'ಡಾಕ್ಟರೇಟ್ ಇನ್ ಸೈನ್ಸ್', 'ಏಶ್ಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ', 'ಬ್ಯಾಂಕಾಕ್' 'ಡಾಕ್ಟರೇಟ್ ಇನ್ ಸೈನ್ಸ್', 'ವಾರ್ವಿಕ್', ವಿಶ್ವವಿದ್ಯಾಲಯದಿಂದ 'ಲಂಡನ್ ಸ್ಕೂಲ್ ಆಫ್ ಎಕೊನೊಮಿಕ್ಸ್', ರತನ್ ರವರಿಗೆ 'ಗೌರವ ಡಾಕ್ಟರೇಟ್' ಪ್ರಧಾನ ಮಾಡಲಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಿನಿಮಾಗಳ ಪಾತ್ರ

– ರುದ್ರಪ್ಪ ಹನಗವಾಡಿ

ಭಾರತದಲ್ಲಿ ಚಲನಚಿತ್ರಗಳು 1913ರಲ್ಲಿ ಆರಂಭವಾಯಿತೆನ್ನಬಹುದು. ಹಲವು ವರ್ಷಗಳ ಕಾಲ ಚಿತ್ರರಂಗ ಪೌರಾಣಿಕ ಕತೆಗಳಿಗೇ ಜೋತು ಬಿದ್ದಿದ್ದವು. ಆದರೆ ವರ್ಷಗಳು ಸರಿದಂತೆ ಸಿನಿಮಾಗಳ ಸಂಖ್ಯೆ ಹೆಚ್ಚಾಗುತ್ತಾ ಸಾಗಿದಂತೆ ಜನರ ಪರ ದನಿಯಾಗುವತ್ತ ಹೊರಳಿದವು. 1930ರ ಬಳಿಕ ಅದಾಗ ತಾನೇ ಸಿನಿಮಾ ನಿರ್ದೇಶನಕ್ಕೆ ತೊಡಗಿದ್ದ ನಿರ್ದೇಶಕರುಗಳಾದ ದಾದಾ ಸಾಹೇಬ್ ಫಾಲ್ಕೆ, ಬಾಬುರಾವ್ ಪೇಂಟರ್, ಕಾಜಿಭಾಯ್ ರಾಥೋಡ್, ಧಿರೇಂದ್ರನಾಥ ಗಂಗೂಲಿ, ಹೋಮಿ ಮಾಸ್ಟರ್, ಚಂದುಲಾಲ್ ಶಾ, ನಾನುಬಾಯಿ ವಕೀಲ್, ಆರ್.ನಟರಾಜನ್, ಶಂಕರ್ ಸಿಂಗ್ ಇನ್ನೂ ಹಲವರು ಸಿನಿಮಾಗಳ ನಿರ್ಮಾಣ ಆರಂಭಿಸಿದ್ದರು. ಸಿನಿಮಾಗಳ ಶಕ್ತಿಯನ್ನು ಬಹುಬೇಗ ಅರಿತ ಬಾಲಗಂಗಾಧರ ತಿಲಕರು, ಭಾರತದ ಮೊತ್ತ ಮೊದಲ ಸಿನಿಮಾ ನಿರ್ಮಿಸಿದ್ದ ದಾದಾ ಸಾಹೇಬ್ ಫಾಲ್ಕೆಗೆ ಮತ್ತೊಂದು ಸಿನಿಮಾ ಮಾಡುವಂತೆ ಉತ್ತೇಜಿಸಿದರು. 1916ರಲ್ಲಿ ಹಣ ಸಂಗ್ರಹಿಸಿ ಕೊಡುವ ಅಭಿಯಾನವನ್ನೇ ಮಾಡಿದ್ದರು.

ಹೀಗೆ 1920 ರಿಂದ ಸ್ವಾತಂತ್ರ್ಯ ಬರುವವರೆಗೆ ಭಾರತೀಯ ಸಿನಿಮಾಗಳು ಸ್ವಾತಂತ್ರ್ಯ ಚಳವಳಿಯ ಭಾಗವಾಗಿಯೇ ಮುನ್ನೆಡೆದಿದ್ದವು. 1930ರ ನಂತರ ಸ್ವಾತಂತ್ರ್ಯ ಚಳವಳಿ ತೀವ್ರತೆ ಪಡೆದುಕೊಂಡಂತೆ ಭಾರತೀಯ ಸಿನಿಮಾರಂಗವೂ ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಸಾಗಿತ್ತು. ಬ್ರಿಟಿಷರ ದೃಷ್ಟಿ ಸಿನಿಮಾಗಳ ಮೇಲೆ ಇತ್ತಾದರೂ ಸಿನಿಮಾಗಳು ಸ್ವಾತಂತ್ರ್ಯ ಚಳವಳಿಯಿಂದ ದೂರ ಉಳಿಯಲಿಲ್ಲ. 1921ರ 'ಭಕ್ತ ವಿಧುರ' ಸಿನಿಮಾವನ್ನು ಬ್ರಿಟಿಷರು ನಿಷೇಧಿಸಿದ್ದರು. ಸಿನಿಮಾದಲ್ಲಿ ವಿಧುರ ಪಾತ್ರಧಾರಿ ಟೋಪಿ ಮತ್ತು ನೂಲಿನ ಮಹತ್ವ ಹೇಳುವ ದೃಶ್ಯವಿತ್ತು. ಪೌರಾಣಿಕ ಸಿನಿಮಾಗಳಲ್ಲಿಯೂ ಸ್ವಾತಂತ್ರ್ಯದ ಸಂದೇಶ ನೀಡುವ ದೃಶ್ಯಗಳನ್ನು, ಸಂಭಾಷಣೆಗಳನ್ನು ಅಳವಡಿಸಿ ಜನರಿಗೆ ತಲುಪಿಸುವ ಯತ್ನ ನಡೆಯುತ್ತಲೇ ಇತ್ತು. ಕೆಲವು ಸಿನಿಮಾ ನಿರ್ದೇಶಕರು ಬಂಧನಕ್ಕೆ ಒಳಗಾದರು. 1931ರಲ್ಲಿ ಶಾಂತಾರಾಮ್ ನಿರ್ದೇಶನದ 'ಸ್ವರಾಜ್ಯಚೇ ತೋರಣ್' ಸಿನಿಮಾ ಬಿಡುಗಡೆಗೆ ಸಿದ್ಧವಾಗಿತ್ತು. ಆ ಚಿತ್ರದ ಪೋಸ್ಟರ್‌ನಲ್ಲಿ ಶಿವಾಜಿ ಮಹಾರಾಜರು ಬಾವುಟ ಹಾರಿಸುತ್ತಿರುವ ಚಿತ್ರವೂ ಇತ್ತು. ಇದು ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿತ್ತು. ಈ ಸಿನಿಮಾಕ್ಕೂ ನಿರ್ಬಂಧ ಹೇರಿದರು. ಬ್ರಿಟೀಷರೊಂದಿಗೆ ಹಲವು ಹಂತದ ತಿಕ್ಕಾಟದ ನಂತರ ಸಿನಿಮಾದ ಹೆಸರನ್ನು 'ಉದಯಕಾಲ' ಎಂದು ಬದಲಾಯಿಸಿ ಪ್ರದರ್ಶಿಸಲಾಗಿತ್ತು.

1937ರ 'ದುನಿಯಾ ನಾ ಮಾನೆ' ಸಿನಿಮಾ ಸಹ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಯಿತು. ಈ ಸಿನಿಮಾದಲ್ಲಿ ಬಾಲ್ಯವಿವಾಹ, ಸತಿಸಹಗಮನ ಪದ್ಧತಿ ವಿರುದ್ಧ ಸಂದೇಶವಿತ್ತು. ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದ ವಲ್ಲಭಭಾಯಿ ಪಟೇಲರ ಭಾಷಣದ ತುಣುಕನ್ನು ಸಿನಿಮಾದಲ್ಲಿ ಬಳಸಲಾಗಿತ್ತು. ಆ ದೃಶ್ಯ ತೆಗೆಯುವಂತೆ ಬ್ರಿಟಿಷರು ಆದೇಶಿಸಿದ್ದರು. 1939ರಲ್ಲಿ ಬಿಡುಗಡೆ ಆದ 'ಬ್ರಾಂಡಿ ಕಿ ಬಾಟೆಲ್' ಸಿನಿಮಾವು ಮದ್ಯಪಾನ ನಿಷೇಧದ ಸಂದೇಶದೊಂದಿಗೆ ಗಾಂಧಿವಾದವನ್ನು ಜನರಿಗೆ ಸ್ಪಷ್ಟವಾಗಿ ತಲುಪಿಸಿತ್ತು. 1940ರ 'ಘರ್ ಕಿ ರಾಣಿ' ಸಿನಿಮಾವು ವಿದೇಶಿ ಸಂಸ್ಕೃತಿಯಿಂದಾಗುವ ಸಮಸ್ಯೆಗಳ ಬಗ್ಗೆ ಪಾಠ ಹೇಳಿತ್ತು. ಹೀಗೆ ಹಲವು ರೀತಿಯಲ್ಲಿ ಬ್ರಿಟಿಷರ ವಿರುದ್ಧ ಜನಾಭಿಪ್ರಾಯ ರೂಪಿಸಲು ಸಿನಿಮಾಗಳು ಯತ್ನಿಸುತ್ತಲೇ ಇದ್ದವು.

ಸ್ವಾತಂತ್ರ್ಯ ಚಳವಳಿಯ ಜೊತೆಗೆ ಸಮಾಜ ಸುಧಾರಣೆಯೂ ಅಂದಿನ ಸಿನಿಮಾಗಳ ಮುಖ್ಯ ಉದ್ದೇಶವಾಗಿತ್ತು. 1940ರ 'ಅಚೂತ್' ಸಿನಿಮಾವು ಜಾತಿ ಪದ್ಧತಿ ವಿರುದ್ಧ ಮಾತನಾಡಿತ್ತು. ಈ ಚಿತ್ರಕ್ಕೆ ಮಹಾತ್ಮಾ ಗಾಂಧಿ ಶುಭ ಹಾರೈಸಿದ್ದರಲ್ಲದೆ, ಸಿನಿಮಾ ವೀಕ್ಷಣೆ ಮಾಡಿರುವುದು ವಿಶೇಷವಾಗಿತ್ತು. ಅದೇ ಸಮಯಕ್ಕೆ ಬಿಡುಗಡೆ ಆದ 'ಮಹಾತ್ಮಾ' ಹೆಸರಿನ ಸಿನಿಮಾವನ್ನು ಬ್ರಿಟಿಷರು ತಡೆ ಹಿಡಿದರು. ನಂತರ ಅದನ್ನು 'ಧರ್ಮಾತ್ಮ' ಎಂದು ಬದಲಿ ಹೆಸರಲ್ಲಿ ಬಿಡುಗಡೆ ಮಾಡಲಾಗಿತ್ತು.

ಚಲನಚಿತ್ರ ಗೀತೆಗಳ ಮೂಲಕ ಸ್ವಾತಂತ್ರ್ಯದ ಸಂದೇಶವನ್ನು ಜನರಿಗೆ ತಲುಪಿಸುವ ಯತ್ನವನ್ನು ಸಿನಿಮಾರಂಗ ಮಾಡುತ್ತಲೇ ಬಂದಿತು. 'ಆಜ್ ಕಾ ಹಿಂದೂಸ್ಥಾನಿ' ಸಿನಿಮಾದಲ್ಲಿ 'ಚಕ್ರ ಚಲಾವೊ ಬೆಹನೊ' (ಚಕ್ರ ತಿರುಗಿಸಿ ಸೋದರಿಯರೆ) ಹಾಡು ಪರೋಕ್ಷವಾಗಿ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆ ನೀಡುತ್ತಿತ್ತು. 'ಬಂಧನ್' ಸಿನಿಮಾದ 'ಚಲ್ ರೆ ಚಲ್ ಚಲ್‌ರೇ ನವ್ ಜವಾನ್' ಹಾಡಂತೂ ಸ್ವಾತಂತ್ರ್ಯ ಚಳವಳಿಗೆ ಯುವಕರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. 1943ರಲ್ಲಿ ಬಿಡುಗಡೆ ಆದ 'ಕಿಸ್ಮತ್' ಸಿನಿಮಾದ ಹಾಡು ಹೀಗಿದೆ, 'ದೂರ್ ಹಟೊ ದುನಿಯಾ ವಾಲೊ ಹಿಂದೂಸ್ಥಾನ್ ಹಮಾರಾ ಹೈ'. ಈ ಹಾಡಂತೂ ದೊಡ್ಡ ಕ್ರಾಂತಿಯನ್ನೇ ಸೃಷ್ಟಿಸಿತ್ತು. ಹಾಡು ಬರೆದವರ ವಿರುದ್ಧ ಹಾಗೂ ನಿರ್ದೇಶಕ, ನಿರ್ಮಾಪಕರ ವಿರುದ್ಧ ಬಂಧನದ ವಾರೆಂಟ್ ಜಾರಿಯಾಯಿತು. ಈಸ್ಟ್ ಇಂಡಿಯಾ ಕಂಪೆನಿಯು 1938ರಲ್ಲಿ 'ದಿ ಡ್ರಮ್' ಸಿನಿಮಾವನ್ನು ಪ್ರದರ್ಶಿಸಿತು. ಈ ಸಿನಿಮಾದಲ್ಲಿ ಬ್ರಿಟಿಷರು ಭಾರತದಲ್ಲಿ ಜಾರಿಗೆ ತರಲು ಇಚ್ಛಿಸಿದ್ದ ಪರಿವರ್ತನೆಗೆ ಭಾರತೀಯರು ಅಡ್ಡಿಪಡಿಸುತ್ತಿದ್ದಾರೆ ಎಂಬಂತೆ ಬಿಂಬಿಸಲಾಗಿತ್ತು. 'ದಿ ಡ್ರಮ್' ಸಿನಿಮಾದ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರ ಖಾನ್ ಅಬ್ದುಲ್‌ಗಫಾರ್ ಖಾನ್ ನೇತೃತ್ವದಲ್ಲಿ ಮುಂಬೈನಲ್ಲಿ ದೊಡ್ಡ ಪ್ರತಿಭಟನೆ ನಡೆದಿತ್ತು.

1945ರ ಬಳಿಕ ಬ್ರಿಟಿಷರು ಭಾರತದಿಂದ ನಿರ್ಗಮಿಸಲು ಸಿದ್ಧರಾಗಿದ್ದರು. ಆದರೆ ಆ ವೇಳೆಗಾಗಲೇ ಪ್ರತ್ಯೇಕ ರಾಷ್ಟ್ರಗಳ ಕೂಗು ಎದ್ದಿತ್ತು. ಅದರ ವಿರುದ್ಧವಾಗಿ 'ಹಮ್ ಏಕ್ ಹೈ', ನೇತಾಜಿ ಸುಭಾಷ್ ಚಂದ್ರ ಭೋಸ್‌ರ ಚಿತ್ರಗಳಿದ್ದ 'ಏಕ್ ಕದಂ' ಸಿನಿಮಾಗಳು ಬಿಡುಗಡೆ ಆದವು. ಹೀಗೆ ಭಾರತೀಯ ಚಲನಚಿತ್ರ ರಂಗವೂ ಜನಾಭಿಪ್ರಾಯ ರೂಪಿಸಲು ಮತ್ತು ಸ್ವಾತಂತ್ರ್ಯ ಚಳವಳಿಗೆ ಬ್ರಿಟಿಷರಿಗೆ ಜನರ ಅಹವಾಲನ್ನು ತಲುಪಿಸುವ ಮಾಧ್ಯಮವಾಗಿ ಕಾರ್ಯನಿರ್ವಹಿಸಿದ್ದನ್ನು ಸ್ವಾತಂತ್ರ್ಯ 75ರ ಸಂಭ್ರಮದಲ್ಲಿ ಸ್ಮರಣೀಯವಾದುದಾಗಿದೆ.

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

1942ರಲ್ಲಿ "ಭಾರತ ಬಿಟ್ಟು ತೊಲಗಿರಿ" ಆಂದೋಲನ ಹೂಡುವ ವಿಚಾರ ನಡೆಯಿತು. ಅದು ಮಾತ್ರ ಕಸ್ತೂರ್‌ಬಾರಿಗೆ ಮೊದಲಿನಿಂದಲೂ ಸರಿ ಅನಿಸಿರಲಿಲ್ಲ. "ಈಗ ಪರಿಸ್ಥಿತಿ ಅನುಕೂಲ ಇಲ್ಲ. ಆದ್ದರಿಂದ ಈ ಆಂದೋಲನದಿಂದ ಪ್ರತಿಕೂಲ ಪ್ರಭಾವವೇ ಬೀಳಬಹುದು" ಎಂದು ಅವರಿಗೆ ಅನ್ನಿಸುತ್ತಿತ್ತು. ಆದರೆ ಅವರ ಮಾತು ಯಾರೂ ಕೇಳುವಂತಿರಲಿಲ್ಲ. "ಇಂಥ ಹೊತ್ತಿನಲ್ಲಿ ನನ್ನನ್ನು ಕೈದು ಮಾಡುವಷ್ಟು ಸರ್ಕಾರವೇನೂ ಮೂರ್ಖವಲ್ಲ" ಎಂದು ಗಾಂಧಿ ಅವರು ಚೇಷ್ಟೆ ಮಾಡುತ್ತಿದ್ದರು. ಆದರೆ ಆಗಸ್ಟ್ 9ರಂದು ಗಾಂಧಿ ಅವರ ಕಲ್ಪನೆ ತಪ್ಪು, ಮತ್ತು ಕಸ್ತೂರ್‌ಬಾ ಅವರ ಕಲ್ಪನೆಯೇ ಸರಿ ಎಂಬುದು ಸಿದ್ಧವಾಯಿತು. ಗಾಂಧಿ ಅವರನ್ನು ಅವರ ಸಂಗಡಿಗರನ್ನೂ ಕೈದು ಮಾಡುವಾಗ ಕಸ್ತೂರ್‌ಬಾರಿಗೆ ಹೇಳಲಾಯಿತು. "ನಿಮ್ಮನ್ನು ಹಿಡಿಯಬೇಕೆಂದೇನೂ ವಾರಂಟು ಇಲ್ಲ. ಆದರೆ ನೀವು ಗಾಂಧಿ ಅವರ ಜೊತೆಯಲ್ಲೇ ಬರಲು ಬಯಸುತ್ತಿದ್ದರೆ ಬರಲಿಕ್ಕೆ ಅಡ್ಡಿ ಇಲ್ಲ" ಎಂದರು ತಾನು ಬರುವುದಿಲ್ಲವೆಂದು ಕಸ್ತೂರ್‌ಬಾ ಅವರು ಹೇಳಿಬಿಟ್ಟರು. ಕಸ್ತೂರ್‌ಬಾ ಅವರಿಗೆ ಅಜೀರ್ಣತೆ, ಅನಾರೋಗ್ಯ ಇದ್ದಿದ್ದೇನೋ ನಿಜ. ಆದರೂ ಈ ಕೊನೆಯ ಗಳಿಗೆಯಲ್ಲಿ ಅವರಲ್ಲಿಯ ಸಾಹಸ ಹೇಗೆ ಕುಗ್ಗಿತು? ಎಂಬುದಾಗಿ ಗಾಂಧಿ ಅವರ ಸಂಗಡಿಗರಿಗೆ ದುಃಖವಾಯಿತು. ಅವರ ನಿರಾಶರಾಗಿ ಅವರನ್ನು ಬಿಟ್ಟೇ ಪೋಲೀಸರ ಜೊತೆಯಲ್ಲಿ ನಡೆದರು.

ಆದರೆ ಕಸ್ತೂರ್‌ಬಾ ಅವರು ಹೊರಗೆ ಉಳಿಯಲಿಕ್ಕೆ ಅವರ ಶಾರೀರಿಕ ದೌರ್ಭಲ್ಯವು ಕಾರಣವಾಗಿರಲಿಲ್ಲ. ಗಾಂಧಿ ಅವರ ಕೆಲಸವನ್ನು ಮುಂದುವರಿಸುವ ದೃಷ್ಟಿಯಿಂದಲೇ ಅವರು ಹೊರಗೆ ಉಳಿದಿದ್ದರು. ಅಂದು ಮಧ್ಯಾಹ್ನ ದಾದರನಲ್ಲಿ ಒಂದು ಮಹಾ ಸಭೆಯಲ್ಲಿ ಗಾಂಧಿ ಅವರು "ಭಾರತ ಬಿಟ್ಟು ತೊಲಗಿರಿ" ಎಂಬ ಠರಾವಿನ ಕುರಿತು ಭಾಷಣ ಮಾಡುವವರಿದ್ದರು. ಗಾಂಧಿ ಅವರ ಬದಲು ಕಸ್ತೂರ್‌ಬಾ ಅವರೇ ಅಂದಿನ ಸಭೆಯಲ್ಲಿ ಭಾಷಣ ಮಾಡಲಿಕ್ಕೆ ಮುಂದಾದರು. ಆದರೆ ಅಷ್ಟರಲ್ಲಿ ಅವರನ್ನು ಕೈದು ಮಾಡಿ ಅಗಾಖಾನ ಮಹಲಿನಲ್ಲಿ ಗಾಂಧಿ ಅವರ ಬಳಿಗೆ ಮುಟ್ಟಿಸಲಾಯಿತು. ಅದೇ ಕಸ್ತೂರ್‌ಬಾ ಅವರು ಭಾರತದ ಬಗ್ಗೆ ಮಾಡಿದ ಕೊನೆಯ ಸೇವೆಯಾಗಿತ್ತು.



ಆಗಸ್ಟ್ 15ರಂದು ಅಗಾಖಾನ್ ಮಹಲಿನಲ್ಲಿ ಕಸ್ತೂರ್‌ಬಾ ಅವರು ಪ್ರಿಯಪುತ್ರರಾದ ಮಹಾದೇವ ದೇಸಾಯಿ ಅವರು ತೀರಿಕೊಂಡರು. ಅದರಿಂದ ಕಸ್ತೂರ್‌ಬಾ ಅವರ ಆರೋಗ್ಯಕ್ಕೆ ಹೆಚ್ಚಿನ ಅಘಾತವಾಯಿತು. ಜೈಲಿನಲ್ಲಿ ಎಂಥ ಪರಿಸ್ಥಿತಿಯಲ್ಲಿಯೂ ಕಸ್ತೂರ್‌ಬಾ ಅವರು ಪ್ರಸನ್ನ ಚಿತ್ತರಾಗಿಯೇ ಇರುತ್ತಿದ್ದರು. ಆದರೆ ಈ ಸಲ ಮಾತ್ರ ಗಾಂಧಿ ಅವರ ಅವಸರ ಹಾಗೂ ಜಬರದಸ್ತಿ ಅವರಿಗೆ ಹಿಡಿಸಲಿಲ್ಲ. ಹೀಗಾಗಿ ಅವರು ಯಾವಗಲೂ ಚಿಂತಾಗ್ರಸ್ಥರೂ, ಉದಾಸೀನರು, ಶಂಕಾಶೀಲರೂ ಆಗಿರುತ್ತಿದ್ದರು. ಅವರಿಗೆ ಬ್ರಿಟಿಷ್ ಸರ್ಕಾರದ ಮೇಲೆ ಒಂದಿಷ್ಟೂ ವಿಶ್ವಾಸ ಇರಲಿಲ್ಲ. ಅಗಾಖಾನ್ ಮಹಲಿನಲ್ಲಿ ಗಾಂಧಿ ಅವರು ಕೈಗೊಂಡ ಉಪವಾಸದಿಂದಲೂ ಅವರ ಮನಸ್ಸು ಹಾಗೂ ಶರೀರದ ಮೇಲೆ ತುಂಬಾ ದುಷ್ಪರಿಣಾಮವಾಯಿತು. ದಿನದಿನಕ್ಕೆ ಅವರ ಶಕ್ತಿ ಕ್ಷೀಣವಾಗತೊಡಗಿತು. ರೋಗವು ಬೆಳೆಯುತ್ತಾ ಹೋಯಿತು. 1944ರ ಫೆಬ್ರವರಿ 22, ಶಿವರಾತ್ರಿಯಂದು ಸಾಯಂಕಾಲ 62 ವರ್ಷಗಳ ಮಧುರ ಸಹವಾಸದ ತರುವಾಯ ಕಸ್ತೂರ್‌ಬಾ ಅವರು ತಮ್ಮ ಪ್ರೀತಿಯ ಬಾಪು ಹಾಗೂ ಪುತ್ರರ ಜೊತೆಯಲ್ಲಿ ಇಡೀ ಭಾರತವನ್ನು ಮಾತೃಹೀನವಾಗಿ ಮಾಡಿ ನಮ್ಮನ್ನಗಲಿ ಹೊರಟು ಹೋದರು.

ಮುಂದುವರಿಯುವುದು....

ಸಂಗ್ರಹ : ವಿ.ಎನ್. ತಿಪ್ಪನಗೌಡ, ಉಪಾಧ್ಯಕ್ಷರು, ಗಾಂಧಿ ಭವನ

ಕರೋನಾದಿಂದ ಸಾವನ್ನಪ್ಪಿದ ಮಹಿಳೆಯರಿಗೆ ಮಯ್ಯತ್ ಸ್ನಾನ

ಕರೋನಾ ಸೋಂಕಿಗೆ ತುತ್ತಾಗಿ, ಮೃತಪಟ್ಟವರ ಶವಸಂಸ್ಕಾರಕ್ಕೆ ಸ್ವತಃ ಮನೆಯವರೇ ಅಂಜುವ ಇಂದಿನ ಪರಿಸ್ಥಿತಿಯಲ್ಲಿ ಮುಸ್ಲಿಂ ಮಹಿಳಾ ತಂಡವೊಂದು ಸದ್ದಿಲ್ಲದೆ ಶವಸಂಸ್ಕಾರ ಪ್ರಕ್ರಿಯೆಗಳಲ್ಲಿ ನೆರವಾಗುವ ಸಮಾಜಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ನ್ಯಾಷನಲ್ ವುಮನ್ ಫ್ರಂಟ್ (ಎನ್.ಡಬ್ಲ್ಯೂ.ಎಫ್) ಹೆಸರಿನ ಸಂಘಟನೆಯ ಸದಸ್ಯರು ಪಿ.ಪಿ.ಇ. ಕಿಟ್ ಧರಿಸಿ, ಸುರಕ್ಷತಾ ಕ್ರಮವನ್ನು ಪಾಲಿಸಿ ಕೋವಿಡ್‌ನಿಂದ ಸಾವಿಗೀಡಾದ ಮುಸ್ಲಿಂ ಮಹಿಳೆಯರ ಶವಕ್ಕೆ ಮಯ್ಯತ್ ಸ್ನಾನ ಮಾಡಿಸುವ ವಿಧಿವಿಧಾನ ನಡೆಸಿ ಅಂತ್ಯಕ್ರಿಯೆಗೆ ಸಿದ್ಧಗೊಳಿಸುತ್ತಾರೆ. ಈಗಾಗಲೇ ತಂಡವು ಮಂಗಳೂರಿನಲ್ಲಿ 7ಕ್ಕೂ ಅಧಿಕ ಕೋವಿಡ್ ಮೃತ ಮಹಿಳೆಯರ ಶವಗಳಿಗೆ ಮಯ್ಯತ್ ಸ್ನಾನದ ಸಂಸ್ಕಾರ ನಡೆಸಿದೆ. ಮುಸ್ಲಿಮರ ಸಂಪ್ರದಾಯದ ಪ್ರಕಾರ ಶವಕ್ಕೆ ಸ್ನಾನ ಮಾಡಿಸಿ ಬಟ್ಟೆ (ಕಫನ್) ಉಡಿಸಲಾಗುತ್ತದೆ. ಬಳಿಕವೇ ದಫನ್ ಮಾಡುವುದು ಕ್ರಮ. ಎನ್.ಡಬ್ಲೂ.ಎಫ್. ಸದಸ್ಯರು ಮಯ್ಯತ್ ಸ್ನಾನದ ಬಳಿಕ ಶವಗಳನ್ನು ಆಯಾ ಕುಟುಂಬಗಳಿಗೆ ಹಸ್ತಾಂತರಿಸುತ್ತಾರೆ, ಇಲ್ಲವೇ ಸುಪರ್ದಿಯಲ್ಲಿ ಬೇರೆಯವರಿಂದ ದಫನ್ ಮಾಡಿಸುತ್ತಾರೆ. ರಾಜ್ಯದ 19 ಜಿಲ್ಲೆಗಳಲ್ಲಿ ಈ ಸಂಘಟನೆ ಸೇವೆ ಸಲ್ಲಿಸುತ್ತಲಿದೆ.

ಸೌಜನ್ಯ : ಕನ್ನಡಪ್ರಭ – ದಿ.26.4.2021, ಸಂಗ್ರಹ : ಅಖಿಲಾ ವಿದ್ಯಾಸಂದ್ರ

ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

– ಇಂದಿರಾ ಕೃಷ್ಣಪ್ಪ

ಮಹಿಳಾ ಸಮಾನತೆಯ ರೂವಾರಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಂಬೇಡ್ಕರ್ ಅವರು ಕಟ್ಟಿದ 1927ರ ಚೌದರ್ ಕೆರೆ ಹೋರಾಟ, ಏಕಕಾಲಕ್ಕೆ ಅಸ್ಪೃಶ್ಯತೆಯ ಮತ್ತು ಲಿಂಗತಾರತಮ್ಯದ ವಿರುದ್ಧದ ಹೋರಾಟವೇ ಆಗಿತ್ತು. ಸಹಸ್ರಾರು ಮಹಿಳೆಯರು ಪಾಲ್ಗೊಂಡಿದ್ದ ಆ ಹೋರಾಟದಲ್ಲಿ ಚಾದರ್ ಕೆರೆ ನೀರನ್ನು ಬೊಗಸೆಯಲ್ಲಿ ಮೊಗೆಮೊಗೆದು ಕುಡಿಯುತ್ತಾ "ಮನುಷ್ಯರು ಜನ್ಮತಃ ಸಮಾನರು; ಅವರು ಸಾಯುವವರಿಗೂ ಸಮಾನರು" ಎಂಬ ಗೊತ್ತುವಳಿಯನ್ನು ಉದ್ಘೋಷಿಸಲಾಯಿತು. ಇದನ್ನು 'ಗಂಗೂಬಾಯಿ ಸಾವಂತ್' ಅನುಮೋದಿಸಿದರು. ಮತ್ತು ಸಮಾನತೆ, ಜಾತ್ಯಾತೀತ ತತ್ವದಿಂದ ಮಾತ್ರ ಹಿಂದೂ ಸಮಾಜ ಉಳಿಯುತ್ತದೆ. ಸಮಾನತೆಯ ಶುಭಾರಂಭದ ಸಂಕೇತ ಸ್ಥಂಭವೇ ಈ ಸಮ್ಮೇಳನ ಆಗಿದೆ". ಎಂದು ಅಂಬೇಡ್ಕರ್ ಕರೆ ನೀಡಿದರು. ಶತಮಾನಗಳಿಂದ ಇರುವ ಶಾಸ್ತ್ರಗಳು – ನೀತಿಗಳು, ಮಹಿಳಾ ಶೋಷಣೆಗೆ ಅಧಿಕೃತತೆಯ ಮುದ್ರೆಯೊತ್ತಿದೆ. ಮಹಿಳೆಯರ ಆರ್ಥಿಕ–ಸಾಮಾಜಿಕ ದಾಸ್ಯಕ್ಕೆ ಮನುಸ್ಮೃತಿಯ ಕ್ರೂರ ಪ್ರಣಾಳಿಕೆಯೇ ಕಾರಣವೆಂದು ಅದನ್ನು ಸುಡುವ ಮೂಲಕ ಪ್ರತಿಕ್ರಾಂತಿಯ ಕಹಳೆಯನ್ನೂದಿದರು. ಭಾರತೀಯ ಸಮಾಜ ಸತ್ಯದತ್ತ ಅನ್ಯಾಯದತ್ತ ಒಟ್ಟಾರೆಯಾಗಿ ಅಮಾನವೀಯತೆಯತ್ತ ಕಣ್ತೆರೆಯುವಂತೆ ಮಾಡುವುದೇ ನನ್ನ ಗುರಿಯಾಗಿತ್ತು ಎಂದಿದ್ದರು.

ಅವರು ಸಂಘಟಿಸುವ ಪ್ರತಿಯೊಂದು ಸಭೆ–ಸಮಾರಂಭ, ಸಮ್ಮೇಳನಗಳಲ್ಲಿ, ಮಹಿಳಾ ಗೋಷ್ಠಿಯನ್ನು ಪ್ರತ್ಯೇಕವಾಗಿ ಆಯೋಜಿಸಿ, ಮಹಿಳಾ ಶಿಕ್ಷಣ, ಶುಚಿತ್ವ, ಸ್ವಸಹಾಯ ಮಕ್ಕಳ ಬೆಳವಣಿಗೆ, ವಿವಾಹದ ವಯಸ್ಸು ಮುಂತಾದ ವಿಷಯಗಳಲ್ಲಿ ಅರಿವನ್ನು ನೀಡುತ್ತಾ, ಕುಡಿತ, ಮೂಢನಂಬಿಕೆ, ಅಸ್ಪೃಶ್ಯತೆ, ಜಾತಿ ಮತ್ತು ಲಿಂಗ ತಾರತಮ್ಯದ ವಿರುದ್ಧ ಜಾಗೃತಿ ಮೂಡಿಸುತ್ತಿದ್ದರು. ವತನ್ ಪದ್ಧತಿ ರದ್ಧತಿ, ಜಾತೀಯತೆ, ಜನಸಂಖ್ಯೆ ಹೆಚ್ಚಳ, ಧರ್ಮಾಂತರ ಮತ್ತು ಸಂಘಟನೆಗಳ ಬಗ್ಗೆ ಮಹಿಳೆಯರು ಚಿಂತನೆ ಮಾಡಬೇಕು ಎಂದು ಕರೆ ನೀಡಿದ್ದರು. 'ಮಹಿಳೆ ಪುರುಷನ ಸಂಗಾತಿಯಂತೆ ಬಾಳಬೇಕು, ದಾಸಿಯಂತಲ್ಲ, 'ಗಂಡು ಮಕ್ಕಳಷ್ಟೇ, ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಬೇಕು', ಸ್ವತಂತ್ರ ನಿರ್ಣಯಗಳನ್ನು ತೆಗೆದುಕೊಳ್ಳಬೇಕು ಎಂದು ಸ್ಥೈರ್ಯ ಮತ್ತು ಆತ್ಮವಿಶ್ವಾಸವನ್ನು ತುಂಬುತ್ತಿದ್ದರು.

ಬಹುಪತ್ನಿತ್ವ ನಿಷೇಧ, ಮಹಿಳಾ ಕಾರ್ಮಿಕರ ಸಮಾನವೇತನ, ಹೆರಿಗೆ ರಜೆ ಮತ್ತು ಭತ್ಯೆ ಮಂಜೂರಿ ಮಾಡಬೇಕೆಂಬ ನಿರ್ಣಯಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಇವುಗಳಿಂದ ಪ್ರಭಾವಿತಗೊಂಡ ವೇಣುತಾಯಿ ಶಿವತಾರಕ್ ಅವರು

- ದಲಿತ ಮಹಿಳಾ ಮಂಡಳಿಯನ್ನು
- ಜಾನಕಿಬಾಯಿ ಜಾಧವ್ ಮತ್ತು ದೇವಕಿ ಬಾಯಿ ಅವರು ದಲಿತ ಮಹಿಳಾ ಪರಿಷತ್ತನ್ನು
- ಕೌಸಲ್ಯ ಬೆಸಂತ್ರಿ ಅವರು ಮಹಿಳಾ ಜಾಗೃತ ಪರಿಷತ್ತನ್ನು
- ಬಾಬತಾಯಿ ಕಾಂಬಲೆ ಮತ್ತು ಶಾಂತಿಬಾಯಿ ಅವರ ದಲಿತ ಮಹಿಳಾ ಜಾಗೃತಿ ಸಂಘಟನೆಯನ್ನು



ಶ್ರೀಮತಿ ಕೌಸಲ್ಯಬೆಸೆಂತ್ರಿ ಅವರು ಪ್ರಾದೇಶಿಕ ಜಾತಿಗಳ ಒಕ್ಕೂಟದ ಜಂಟಿ ಕಾರ್ಯದರ್ಶಿಯಾಗಿ ದುಡಿದರು. ತುಳಸೀಬಾಯಿ ಬಾನಸೋಡ್ ಅವರು "ಚೊಕ್ಕಮೇಲ" ಎಂಬ ಪತ್ರಿಕೆಯನ್ನು ನಡೆಸಿದರು. ಶಾಂತಿಬಾಯಿ ಅವರು "Scheduled caste Federation of India", ಸಂಘಟನೆಯ ಕಾರ್ಯದರ್ಶಿಯಾಗಿ ದುಡಿದರು. ಕೌಸಲ್ಯ ಬೆಸಂತ್ರಿ ಅವರು ರಚಿಸಿದ 'ದೋಹ್ರಾ ಅಭಿಪಾಪ್' ಕೃತಿ ದಲಿತ ಮಹಿಳೆಯರು ಜಾತಿ ಮತ್ತು ಲಿಂಗ ತಾರತಮ್ಯದ ಇಬ್ಬಗೆಯ ಶೋಷಣಾ ಜಾಲದಿಂದ ನಲುಗುವ ಪರಿಯನ್ನು ಹರವಿ ಬಿಡುತ್ತದೆ.

ಶ್ರೀಮತಿ ಸರಸ್ವತಿ ಘರಾಡೆ ಅವರು (ಅಂಕೋಲದ ಮಿಲ್ ಮಾಲೀಕರ ಮಗಳು) ಅಂಬೇಡ್ಕರ್ ಚಿಂತನೆಗಳು ಮತ್ತು ಸಂತ ಕಬೀರರ ದೋಹೆಗಳಿಂದ ಪ್ರಭಾವಿತರಾಗಿ, ಅನೇಕ ಕವನಗಳನ್ನು ರಚಿಸಿದರು. ಇವರು ಹಳ್ಳಿಹಳ್ಳಿಗೆ ತೆರಳಿ, ಕೆರೆ ಬಾವಿ ನೀರನ್ನು ಎಲ್ಲಾ ಸಮುದಾಯದ ಜನರು ಬಳಕೆ ಮಾಡುವ ಕಾರ್ಯಾಚರಣೆ ಕೈಗೊಂಡಿದ್ದರು. "ಮಹಿಳೆಯರು, ವ್ಯಾಯಾಮಶಾಲೆಯಲ್ಲಿ, ಗರಡಿ ಮನೆಯಲ್ಲಿ ತರಬೇತಿ ಪಡೆದು ಆಕ್ರಮಣಕಾರರನ್ನು ಎದುರಿಸಲು ಸಶಕ್ತರಾಗಬೇಕೆಂದು" ಪ್ರೋತ್ಸಾಹಿಸಿದ್ದರು. ಅಂಬೇಡ್ಕರ್ ಅವರ ಚಿಂತನೆಗಳಿಂದ ಪ್ರೇರಣೆಗೊಂಡ ಲಕ್ಷಾಂತರ ಮಹಿಳೆಯರು, ನಾಸಿಕ್‌ನ ಕಾಳಾರಾಮ್ ಪ್ರವೇಶ ಚಳುವಳಿ, ಬೌದ್ಧಧರ್ಮ ಸ್ವೀಕಾರದ ಬೃಹತ್ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಈ ಎಲ್ಲಾ ಹೋರಾಟಗಳಲ್ಲಿ ಅಂಬೇಡ್ಕರ್ ಅವರು "ಸತ್ಯ, ಅಹಿಂಸೆ, ಸಹನೆ, ಸಮಾನತೆ, ತ್ಯಾಗ, ಬಲಿದಾನ, ನ್ಯಾಯ"ದ ಮಾರ್ಗಗಳನ್ನೇ ಪ್ರತಿಪಾದನೆ ಮಾಡುತ್ತಾ, ಭಾರತದ ರಾಷ್ಟ್ರೀಯ ಚಳುವಳಿಗೆ ಬಂಧುತ್ವದ ವೇದಿಕೆಯನ್ನು ನಿರ್ಮಾಣ ಮಾಡಿದರು.

ಭಾರತ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಬ್ರಿಟಿಷ್ ಸರ್ಕಾರ ರಚಿಸಿದ ಕಮೀಶನ್‌ಗಳು, ಪರಿಷತ್ತುಗಳು, ಸಮ್ಮೇಳನಗಳಲ್ಲಿ ತಳಸಮುದಾಯಗಳು ಮತ್ತು ಮಹಿಳೆಯರ ಪ್ರಶ್ನೆಗಳನ್ನು ಎತ್ತುತ್ತಾ ಅವರ ಪರವಾಗಿ ವಾದಗಳನ್ನು ಮಂಡಿಸುತ್ತಾ, ಬೇಡಿಕೆ–ಸಾಕ್ಷ್ಯಗಳನ್ನು ನೀಡುತ್ತಾ, ಬ್ರಿಟಿಷ್ ಪ್ರಭುತ್ವ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಕಾರಣರಾದರು.

ಮುಂದುವರಿಯುವುದು...

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಶಾಂತಿಯುತ ಚಳುವಳಿಯ ನೇತೃತ್ವ ವಹಿಸುವ ಮೂಲಕ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದ ಮಹಾತ್ಮಾ ಗಾಂಧೀಜಿ ಅವರು ಭಾರತದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಸುಧಾರಿಸುವ ಬಗ್ಗೆ ಯಾವಾಗಲೂ ಒತ್ತು ಕೊಟ್ಟು ಮಾತನಾಡುತ್ತಿದ್ದರು. "ರಾಜಕೀಯ ಸ್ವಾತಂತ್ರ್ಯಕ್ಕಿಂತ ನೈರ್ಮಲ್ಯೀಕರಣ ಹೆಚ್ಚು ಮಹತ್ವದ್ದು" ಎಂದು ಅವರು ಹೇಳುತ್ತಿದ್ದರು. ಉತ್ತಮ ನೈರ್ಮಲ್ಯೀಕರಣ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯ ಸೋಂಕು ನಿವಾರಣೆಯಿಂದ ಹಿಡಿದು, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ತ್ಯತ್ಥ್ಯವನ್ನು ಸುಧಾರಿಸಲು ಹಾಗು ನಿರ್ವಹಿಸಲು ನೈರ್ಮಲ್ಯೀಕರಣದ ಪಾತ್ರ ಮಹತ್ವದ್ದಾಗಿದೆ. ಸುರಕ್ಷಿತ ನೈರ್ಮಲ್ಯೀಕರಣದ ಕೊರತೆ ಅತಿಸಾರಕ್ಕೆ ಕಾರಣವಾಗಬಹುದು. ಬಡ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅತಿಸಾರವು ಬಹಳ ದೊಡ್ಡ ಸಾರ್ವಜನಿಕ ಆರೋಗ್ಯದ ಸಮಸ್ಯೆಯಾಗಿದೆ ಏಕೆಂದರೆ, ಇಂತಹ ದೇಶಗಳಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಅನಾರೋಗ್ಯಕ್ಕೆ ಮತ್ತು ಸಾವಿಗೆ ಅತಿಸಾರ ಅತಿದೊಡ್ಡ ಕಾರಣವಾಗಿದೆ.

ಸೂಕ್ತ ನೈರ್ಮಲ್ಯದ ಕೊರತೆಯು ಉಷ್ಣವಲಯದ ಹಲವು ನಿರ್ಲಕ್ಷಿತ ಕಾಯಿಲೆಗಳನ್ನು ನಮಗೆ ಕೊಡುಗೆಯಾಗಿ ನೀಡುತ್ತದೆ. ಜೊತೆಗೆ ಅಪೌಷ್ಟಿಕತೆಯಂತಹ ಗಂಭೀರ ಪರಿಣಾಮವನ್ನೂ ಉಂಟುಮಾಡಬಲ್ಲದು ಸೂಕ್ತ ನೈರ್ಮಲ್ಯದ ಸೌಲಭ್ಯಗಳ ಕೊರತೆಯು, ಮಾನಸಿಕ ಆತಂಕಕ್ಕೂ ಮುಖ್ಯ ಕಾರಣವಾಗಬಲ್ಲದು. ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳು ಹೆಚ್ಚು ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ. ಈ ಎಲ್ಲಾ ಕಾರಣಗಳಿಂದಾಗಿ ನೈರ್ಮಲ್ಯವು ಕಾಯಿಲೆಯನ್ನು ತಡೆಗಟ್ಟುವ, ಖಾಸಗಿತನವನ್ನು ಕಾಪಾಡುವ ಮತ್ತು ಗೌರವವನ್ನು ಉಳಿಸುವ ಮೂಲಭೂತ ಹಕ್ಕಾಗಿದೆ.

ನೈರ್ಮಲ್ಯವನ್ನು, "ಮಾನವನ ಮೂತ್ರ ಹಾಗು ಮಲವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ಸೇವೆ ಹಾಗೂ ಸೌಲಭ್ಯಗಳನ್ನು ಪಡೆಯುವ ವಿಧಾನ" ಎಂದು ವ್ಯಾಖ್ಯಾನಿಸಬಹುದು. ಒಂದು ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು, ಮಾನವನ ಮಲವನ್ನು ಮನುಷ್ಯ ಸಂಪರ್ಕದಿಂದ ದೂರವಿರಿಸಿ, ಅದನ್ನು ವಿಲೇವಾರಿ ಮಾಡುವ ಎಲ್ಲ ಹಂತಗಳನ್ನು ಒಳಗೊಂಡಿರುತ್ತದೆ. ಅಂದರೆ ಶೌಚಾಲಯದಿಂದ ಸಂಗ್ರಹಿಸುವುದು, ಸಾಗಿಸುವಿಕೆ, ಸಂಸ್ಕರಣೆ, ಅಂತಿಮ ವಿಲೇವಾರಿ ಅಥವಾ ಪುನರ್‌ಬಳಕೆ. ಸುರಕ್ಷಿತ ನೈರ್ಮಲ್ಯ ವ್ಯವಸ್ಥೆಯು ಈ ಎಲ್ಲಾ ಅಗತ್ಯತೆಗಳನ್ನು ಒಳಗೊಂಡಿರಬೇಕು ಹಾಗೂ ಯಾವುದೇ ರೀತಿಯಲ್ಲಿ ಮಾನವ ಹಕ್ಕುಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು.

"ನಡುವಳಿಕೆಯಲ್ಲಿ ಬದಲಾವಣೆ" ಎಲ್ಲ ನೈರ್ಮಲ್ಯ ಕಾರ್ಯಕ್ರಮಗಳಲ್ಲಿ ಅತಿ ಅಗತ್ಯತೆಯ ಅಂಶವಾಗಿದೆ. ಜೊತೆಗೆ ಸುರಕ್ಷಿತ ನೈರ್ಮಲ್ಯದ ಬಳಕೆ ಹಾಗೂ ಅಳವಡಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಗತಿಯೂ ಆಗಿದೆ. ನೈರ್ಮಲ್ಯಕ್ಕೆ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಸರ್ಕಾರಗಳ ಪಾತ್ರ ಬಹು ದೊಡ್ಡದು. ಸಮನ್ವಯ ಸಾಧಿಸುವುದು ಮತ್ತು ಎಲ್ಲರನ್ನೂ ಒಂದುಗೂಡಿಸುವುದು ಅವುಗಳ ಜವಾಬ್ದಾರಿ. ಜೊತೆಗೆ ಅವು ಸೂಕ್ತ ನಾಯಕತ್ವ ಒದಗಿಸಬೇಕು ಹಾಗೂ ಹಣ ಹೂಡಿಕೆ ಮಾಡಬೇಕು.

"ನೀವು ಎಲ್ಲಿಯವರೆಗೆ ಕಸಬರಿಗೆ ಮತ್ತು ಬುಟ್ಟಿಯನ್ನು ಕೈಯಲ್ಲಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಿಲ್ಲ" ಎಂದು ಗಾಂಧೀಜಿ ಹೇಳಿದ್ದರು.

ಮಾಡೆಲ್ ಸ್ಕೂಲ್‌ಗೆ ಒಮ್ಮೆ ಗಾಂಧೀಜಿ ಅವರು ಭೇಟಿ ಕೊಟ್ಟಿದ್ದರು. ಆ ಸಮಯದಲ್ಲಿ ಅವರು ಅಲ್ಲಿನ ಶಿಕ್ಷಕರಿಗೆ ಹೀಗೆ ಹೇಳಿದ್ದರು. "ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಮಾತ್ರ ಸಾಕಾಗುವುದಿಲ್ಲ. ಜೊತೆಗೆ ಅವರನ್ನು ಅಡುಗೆ ಮಾಡುವವರು ಹಾಗೂ ಕಸ ಗುಡಿಸುವವರನಾಗಿ ಸಹ ಮಾಡಬೇಕು."

ವಿದ್ಯಾರ್ಥಿಗಳಿಗೆ ಅವರ ಕುರಿತು "ನೀವೇ ಸ್ವಂತ ಕಸಗುಡಿಸುವವರಾದರೆ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಡಬಹುದು. ವಿಕ್ಟೋರಿಯಾ ಕ್ರಾಸ್ ಗೆಲ್ಲುವುದಕ್ಕಿಂತ ಹೆಚ್ಚು ಧೈರ್ಯ, ಒಬ್ಬ ಪರಿಣಿತ ಕಸ ಗುಡಿಸುವವನಿಗೆ ಬೇಕು."

ಭಾರತದ ನಾಲ್ಕು ನಗರಗಳಲ್ಲಿ ಸರದಿ ಪ್ರಕಾರ ನಡೆಯುವ ತ್ರೈವಾರ್ಷಿಕ ಹಬ್ಬವಾದ ಕುಂಭ ಮೇಳಕ್ಕೆ ಗಾಂಧೀಜಿ ಅವರು 1915ರಲ್ಲಿ ಭೇಟಿ ನೀಡಿದ್ದರು. ಆ ವರ್ಷ ಕುಂಭ ಮೇಳವು ಭಾರತದ ಉತ್ತರದ ಗಂಗಾನದಿಯ ದಡದಲ್ಲಿರುವ ಹಾಗೂ ಹಿಂದೂಗಳ ಪವಿತ್ರ ನಗರವಾದ ಹರಿದ್ವಾರದಲ್ಲಿ ಆಯೋಜನೆಗೊಂಡಿತ್ತು. ಅಲ್ಲಿ ಲಕ್ಷಗಟ್ಟಲೆ ಭಕ್ತರು ತಮ್ಮ ಪಾಪ ಕಳೆಯಲು ಪವಿತ್ರ ನದಿಯಲ್ಲಿ ಮುಳುಗೇಳುತ್ತಿರುವುದನ್ನು ಕಂಡ ಗಾಂಧೀಜಿ ಅವರು, ನಂತರದಲ್ಲಿ ಅವರ ಇಂಗ್ಲೀಷ್ ವಾರಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ. "ನಾನು ತುಂಬಾ ನಂಬಿಕೆ ಹಾಗೂ ಗೌರವದಿಂದ ಕುಂಭ ಮೇಳಕ್ಕೆ ಹೋಗಿದ್ದೆ, ಅಲ್ಲಿ ನನಗೆ ಗಂಗೆಯ ಪವಿತ್ರತೆ ಮತ್ತು ಹಿಮಾಲಯದ ಭವ್ಯತೆಯ ಅರಿವಾಯಿತು. ಆದರೆ ಆ ಪವಿತ್ರ ಜಾಗದಲ್ಲಿ ಮಾನವರು ಮಾಡುತ್ತಿರುವುದು ನನಗೆ ಯಾವ ದೃಷ್ಟಿಯಿಂದಲೂ ಪ್ರೇರಕವಾಗಿ ಕಾಣಲಿಲ್ಲ. ನನ್ನ ದುರಾದೃಷ್ಟಕ್ಕೆ ನನಗೆ ಅಲ್ಲಿ ದೈಹಿಕ ಅಶುಚಿತ್ವವಷ್ಟೇ ಕಂಡಿತು. ವಿಚಾರಹೀನ, ನಿರ್ಲಕ್ಷ್ಯ ಮನಸ್ಸಿನ ಸ್ತ್ರೀ ಪುರುಷರು, ನಿಶ್ಯಬ್ದದಿಂದ ಕೂತು ದೇವರನ್ನು ಕಾಣುವ ಬದಲು, ಯಾವುದೋ ಕಾರ್ಯಗಳಲ್ಲಿ ತೊಡಗಿದ್ದರು. ಅವರು ಧರ್ಮ, ವಿಜ್ಞಾನ ಮತ್ತು ನೈರ್ಮಲ್ಯದ ಕಾನೂನನ್ನು ಉಲ್ಲಂಘಿಸುತ್ತಿದ್ದರು."

ಮುಂದುವರಿಯುವುದು...

ನಾಡು ಕಟ್ಟಿದ ನಾಡಪ್ರಭು

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅಂತರರಾಷ್ಟ್ರೀಯ ಖ್ಯಾತಿಯ ಬೆಂಗಳೂರು ನಗರದ ಪೂರ್ವೇತಿಹಾಸ ನಗರ ನಿರ್ಮಾಣ, ಆಡಳಿತ ವ್ಯವಸ್ಥೆ, ಜನಜೀವನ, ಇತ್ಯಾದಿಗಳನ್ನು ತಿಳಿದುಕೊಳ್ಳಲು, ಸಾಹಿತ್ಯ ಕೃತಿಗಳು, ಶಾಸನಗಳು, ಗುಡಿಗೋಪುರಗಳು, ಸರ್ಕಾರಿ ಪತ್ರಗಳು ಮತ್ತು ವಿದೇಶಿಯರ ಬರಹಗಳು, ಜೀವನ ಚರಿತ್ರೆಗಳು ಆಕರ ಗ್ರಂಥಗಳಾಗಿ ಇಂದಿಗೂ ದೊರಕುತ್ತವೆ. ಅವುಗಳ ಕಿರು ಮಾಹಿತಿಯನ್ನು ಇಲ್ಲಿ ವಿವರಿಸಲಾಗಿದೆ.


ಯಲಹಂಕ ಪ್ರಭುಗಳ ಬಗ್ಗೆ ಇರುವ ಐತಿಹಾಸಿಕ ಗ್ರಂಥಗಳೆಂದರೆ, 1890ರಲ್ಲಿ ಬಿ.ಎಲ್. ರೈಸ್, 1924ರಲ್ಲಿ ನರಸಿಂಹಯ್ಯ, 1926ರಲ್ಲಿ ಎಂ.ಎಸ್. ಪುಟ್ಟಣ್ಣ, 1964ರಲ್ಲಿ ಎಂ.ವಿ. ಕೃಷ್ಣರಾವ್ ಅವರು ರಚಿಸಿದ ಕೃತಿಗಳಾಗಿವೆ. ನಿಕೋಲೆಸ್ ಡಿರ್ಕ್ಸ್ ಮತ್ತು ವೇಲ್‌ಚೇರು ನಾರಯಣರಾವ್, ಇನ್ನು ಮುಂತಾದವರ ಅಧ್ಯಯನದಷ್ಟು ಸ್ಪಷ್ಟವಿಲ್ಲದ, ಕೆಲವು ಮಾಹಿತಿಗಳು, ದಯಾನಂದ ಪಟೇಲ್ ಮತ್ತು ಹೆಚ್. ವೀರಪ್ಪ ಅವರ ಸಂಪಾದಕತ್ವದ ಕೆಂಪೇಗೌಡ ವಂಶದ ಪ್ರಬಂಧಗಳಲ್ಲಿಯೂ ದೊರಕುತ್ತವೆ.

ಜಾನಪದ ಪ್ರಕಾರದಲ್ಲಿ ಜನರ ಕಂಠದಲ್ಲಿ ಸದಾ ನಲಿಯುವ ಲಾವಣಿಗಳಲ್ಲಿ, ಕಥನ ಗೀತೆಗಳಲ್ಲಿ ಕೆಂಪೇಗೌಡರ ಯಶಸ್ಸನ್ನು ಹಾಡಿ ಹೊಗಳಲಾಗಿದೆ. ಡಾ. ಜೀ.ಶಂ.ಪ. ಅವರ 'ದೊಂಬಿ ದಾಸರ ಲಾವಣಿಗಳು' (1974), ಡಾ.ಪಿ.ಕೆ. ರಾಜಶೇಖರ ಅವರ 'ಮಾಗಡಿ ಕೆಂಪೇಗೌಡ' (1975), ಶ್ರೀಮತಿ ಅಂದನೂರು ಶೋಭಾ ಅವರ 'ಕೊಂಬೆರಂಬೆಲ್ಲ ಎಳಗಾಯಿ' (1978), ಮಳಲಿ ವಸಂತಕುಮಾರ್ ಅವರ 'ಕೋಲು ಪದಗಳು' (1978), ಡಾ. ಎಚ್.ಎಲ್. ನಾಗೇಗೌಡ ಅವರ 'ಹೆಳವರು ಮತ್ತು ಅವರ ಕಾವ್ಯಗಳು' (1982) ಸಂಗ್ರಹಗಳಲ್ಲಿರುವ ಕೆಂಪೇಗೌಡರ ಕಥನಗಳನ್ನು ವಿಶಿಷ್ಟವಾಗಿ ಹಾಡುವರು.


ಶಾಸನಗಳು : ಯಲಹಂಕ ಪ್ರಭುಗಳ ಇತಿಹಾಸಕ್ಕೆ ಸಂಬಂಧಪಟ್ಟ ಶಾಸನಗಳು, ಬೆಂಗಳೂರು ಉತ್ತರ, ದಕ್ಷಿಣ, ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ, ಹೊಸಕೋಟೆ, ದೇವನಹಳ್ಳಿ, ಸುಗಟೂರುಗಳಲ್ಲಿ ದೊರಕಿವೆ. ಇತಿಹಾಸಕಾರರಾದ, ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯ ಅವರು ರಚಿಸಿದ "ಗೌಡಕುಲ ವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ", ಕೃತಿಯ ಮುನ್ನುಡಿಯಲ್ಲಿ ಮೇಲ್ಕಂಡ ಸ್ಥಳಗಳಲ್ಲಿ ದೊರಕಿದ 46 ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಹಾಗೆಯೇ ಡಾ. ರಾಮೇಗೌಡರು ಪ್ರಕಟಿಸಿರುವ "ಯಲಹಂಕ ನಾಡಪ್ರಭುಗಳು ಒಂದು ಅಧ್ಯಯನ" ಕೃತಿಯಲ್ಲಿಯೂ ಅನೇಕರು, 37 ಶಾಸನಗಳ ವಿವರಣೆಯನ್ನು ಮಾಡಿರುವರು. ಅಂತೆಯೇ "ಎಪಿಗ್ರಾಫಿಯ ಕರ್ನಾಟಕ ಸಂಪುಟ-9" ರಲ್ಲಿಯೂ ಶಾಸನಗಳ ವಿವರಣೆಗಳು ದೊರಕುತ್ತವೆ. ಡಾ. ದೇವರಕೊಂಡಾ ರೆಡ್ಡಿ ಅವರ ಗುಮ್ಮಳಾಪುರ ಶಾಸನ ಶೋಧನೆ ಮತ್ತು ಅಧ್ಯಯನವನ್ನು 'ಇತಿಹಾಸ ದರ್ಶನ ಸಂಪುಟ-5ರಲ್ಲಿ' ಪ್ರಕಟಿಸಿರುತ್ತಾರೆ. ಇಂದಿನ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ 65ಕ್ಕೂ ಮಿಕ್ಕಿ ಶಾಸನಗಳು ದೊರಕಿದ್ದು ಅವುಗಳು ಕ್ರಿ.ಶ. 1200 ರಿಂದ ಬೆಂಗಳೂರು ಮತ್ತು ಯಲಹಂಕ ನಾಡಿನ ಉದಯದ ಇತಿಹಾಸವನ್ನು ಅಮೂಲಾಗ್ರವಾಗಿ ಬಿಚ್ಚಿಡುತ್ತವೆ.



ಮುಂದುವರಿಯುವುದು...



ವೀಕ್ಷಣಾ ಗೋಪುರ



ಯಲಹಂಕ ಶಿಲಾಶಾಸನ, ಯಲಹಂಕ

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಚಟಕ್ಕೆ ಚಿಕಿತ್ಸೆ

ಈಗಾಗಲೇ ಒಬ್ಬ ವ್ಯಕ್ತಿ ಅಫೀಮಿನ ಚಟಕ್ಕೆ ಬಿದ್ದಿದ್ದಾನೆ ಎಂದರೆ, ಆತನಿಗೆ ಆದಷ್ಟು ಬೇಗ ಚಿಕಿತ್ಸೆ ನೀಡಿ, ಚಟದಿಂದ ಬಿಡುಗಡೆ ಮಾಡುವುದು ಅಗತ್ಯವಾಗುತ್ತದೆ. ಯಾವುದೇ ಸುಸಜ್ಜಿತ ಜನರಲ್ ಆಸ್ಪತ್ರೆಯಲ್ಲಿ ಹಾಗೂ ಮನೋವೈದ್ಯಕೀಯ ವಿಭಾಗ ಅಥವಾ ಮಾನಸಿಕ ಆಸ್ಪತ್ರೆಯಲ್ಲಿ ಈ ಚಿಕಿತ್ಸೆಯನ್ನು ಕೊಡಬಹುದಾಗಿದೆ. ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗುತ್ತದೆ. ಅಫೀಮನ್ನು ನಿಲ್ಲಿಸಿದಾಗ ಕಾಣಿಸಿಕೊಳ್ಳಬಹುದಾದ ಹಿಂದೆಗೆತದ ಚಿಹ್ನೆಗಳನ್ನು ಶಮನಕಾರಿ ಔಷಧಗಳಿಂದ ಹತೋಟಿಯಲ್ಲಿಡಬೇಕಾಗುತ್ತದೆ. ವ್ಯಕ್ತಿಗೆ ಇರಬಹುದಾದ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ಔಷಧೋಪಚಾರ ನಡೆಯಬೇಕು. ವ್ಯಕ್ತಿಯ ಮನಃಪರಿವರ್ತನೆಗೆ ಮನೋಚಿಕಿತ್ಸೆ, ಮನೆಯವರ, ಬಂಧು-ಮಿತ್ರರ ಸಹಾಯ ಸಹಾನುಭೂತಿಯೂ ಮುಖ್ಯವಾಗುತ್ತದೆ. ಅನಂತರ ವ್ಯಕ್ತಿ ಉಪಯುಕ್ತ ಚಟುವಟಿಕೆ – ಉದ್ಯೋಗವನ್ನು ನಡೆಸಲು ಅನುಕೂಲ ಪ್ರೋತ್ಸಾಹಗಳನ್ನು ವ್ಯವಸ್ಥೆ ಮಾಡಬೇಕಾಗುತ್ತದೆ. ಚಿಕಿತ್ಸೆ ಎಷ್ಟು ಯಶಸ್ವಿಯಾಗುತ್ತದೆ ಎನ್ನುವುದು ವ್ಯಕ್ತಿ, ಆತನ ಮನೆಯವರು, ಪರಿಸರ ಹಾಗೂ ಸಾಮಾಜಿಕ ಧೋರಣೆಗಳ ಮೇಲೆ ನಿರ್ಧರಿತವಾಗುತ್ತದೆ.

ನಾಲ್ ಟ್ರಾಕ್ಸಾನ್ ಚಿಕಿತ್ಸೆ: ಅಫೀಮು ಪದಾರ್ಥಗಳನ್ನು ತಿನ್ನುವ/ಸೇವಿಸುವ ಚಟದ ತೀವ್ರತೆಯನ್ನು ತಗ್ಗಿಸಲು ನಾಲ್ ಟ್ರಾಕ್ಸಾನ್ ಮಾತ್ರೆಗಳನ್ನು, ಆಯ್ದ ಕೆಲವು ವ್ಯಕ್ತಿಗಳಿಗೆ ದೀರ್ಘಕಾಲ ಕೊಡಬೇಕಾಗುತ್ತದೆ. ಚಿಕಿತ್ಸೆಯು ದುಬಾರಿ.

ಯಾವುದೇ ಚಿಕಿತ್ಸೆ ಮತ್ತು ಪ್ರಯತ್ನಗಳಿಂದ ಶೇಕಡ 25ರಿಂದ 50 ರಷ್ಟು ಮಂದಿ ಗುಣಮುಖರಾಗುತ್ತಾರೆ. ಚಟ ಮರುಕಳಿಸುವುದು ಸಾಮಾನ್ಯ. ಹೆರಾಯಿನ್, ಬ್ರೌನ್‌ಶುಗರ್, ಅಫೀಮಿನ ಬಗ್ಗೆ ಎಚ್ಚರಿಸುವುದು, ಯುವಜನರನ್ನು ಅವುಗಳಿಂದ ದೂರವಿರಿಸುವುದು, ಚಟದ ವ್ಯಕ್ತಿಗಳಿಗೆ ಚಿಕಿತ್ಸೆ ಪುನರ್ವಸತಿ ಕಲ್ಪಿಸುವುದು ಪ್ರತಿಯೊಬ್ಬರ ಕರ್ತವ್ಯ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಸ್ಥಿರ ಆಹಾರ : ಒಂದು ಆಹಾರದ ಆಯ್ಕೆಯು ಸುಸ್ಥಿರವಾಗಿದ್ದಲ್ಲಿ ಆ ಆಹಾರದ ಉತ್ಪಾದನೆಯನ್ನು ಧೀರ್ಘಕಾಲದವರೆಗೂ ಪರಿಸರದ ಮೇಲೆ ಯಾವುದೇ ಅಡ್ಡ ಪರಿಣಾಮಗಳು ಆಗದಂತೆ ಉತ್ಪತ್ತಿ ಮಾಡಲು ಸಾಧ್ಯವಿದೆ ಎನ್ನಲಾಗುತ್ತಿದೆ. ಸುಸ್ಥಿರವಲ್ಲದ ಆಹಾರವು ಕಡಿಮೆ ಅವಧಿಯವರೆಗೆ ಮಾತ್ರ ಪರಿಸರಿಂದ ಪಡೆದುಕೊಂಡ ಬಳಿಕ ಸರ್ವನಾಶವಾಗಿ ಬಿಡುತ್ತದೆ. ಅಥವಾ ಸುಸ್ಥಿರವಲ್ಲದ ಆಹಾರ ಸೃಷ್ಟಿಯಲ್ಲಿ ಹೆಚ್ಚು ಸಂಪನ್ಮೂಲಗಳ ಬಳಕೆಯಾಗುತ್ತಿರಬಹುದಾಗಿದೆ. ಅಂದರೆ ಬಹಳಷ್ಟು ಇಂಧನಗಳ ಬಳಕೆ ಅಥವಾ ಹಸಿರು ಮನೆ ಅನಿಲಗಳ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದ್ದರೆ ಅಂತಹ ಆಹಾರ ಪದ್ಧತಿಯನ್ನು ನಾವು ಸುಸ್ಥಿರವಲ್ಲದೆ ಉತ್ಪಾದಿಸಿರುವ ಕೃಷಿ ವಿಧಾನಕ್ಕೆ ಸೇರಿಸುತ್ತೇವೆ. ಸುಸ್ಥಿರ ಆಹಾರವು ಅತಿಯಾಗಿ ಕೊರತೆ ಕಾಡುತ್ತಿರಬಹುದು. ಅಥವಾ ಧೀರ್ಘಾವಧಿಯಲ್ಲಿ ಅದೇ ಆಹಾರ ದುಬಾರಿಯಾಗಿ ಬಿಡುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಹೇಳಬೇಕೆಂದರೆ ಕೃಷಿಭೂಮಿಯಲ್ಲಿ ಬೆಳೆದ ಆಹಾರಗಳಾಗಿರುವ ಹಣ್ಣು, ತರಕಾರಿ, ಧಾನ್ಯಗಳು, ಕಡಲೆಗಳು ಮತ್ತು ಬೀಜಗಳು ಹೆಚ್ಚು ಸುಸ್ಥಿರವಾದ ಆಹಾರ ಆಯ್ಕೆಗಳಾಗಿವೆ. ಇವುಗಳನ್ನು ಅವು ಬೆಳೆಯುವ ಋತುವಿನಲ್ಲಿಯೇ ಬಳಸಿಕೊಂಡಲ್ಲಿ ಹೆಚ್ಚು ಸುಸ್ಥಿರವಾದ ಆಹಾರ ಆಯ್ಕೆಗಳಾಗುತ್ತವೆ. ಪ್ರಾಣಿಗಳ ಆಹಾರವು ಹೆಚ್ಚಾಗಿ ಸಂಪನ್ಮೂಲ ಬಳಕೆ ಅಧಿಕವಾಗಿರುವ ಆಹಾರ ಆಯ್ಕೆಗಳಾಗಿರುತ್ತವೆ. ಹಾಗೆಂದು ಎಲ್ಲಾ ಮಾಂಸಾಹಾರವೂ ಸಂಪನ್ಮೂಲ ಕೊರತೆಯನ್ನು ತರುತ್ತದೆ ಎನ್ನಲು ಸಾಧ್ಯವಿಲ್ಲ.

ಕಾರ್ಬೋಹೈಡ್ರೇಟ್ ಆಯ್ಕೆಗಳು

ಕಾರ್ಬೋಹೈಡ್ರೇಟ್‌ಗಳನ್ನು ಸೇವಿಸಲೇ ಬಾರದು ಮತ್ತು ಅದರಿಂದ ಮಾರಕ ರೋಗಗಳು ಬರುತ್ತವೆ ಎಂದು ಒಂದುಕಾಲದಲ್ಲಿ ವೈದ್ಯರು ನಮ್ಮ ಆಹಾರದಿಂದ ಸಂಪೂರ್ಣವಾಗಿ ಅವುಗಳನ್ನು ದೂರವಿರಿಸಿದ್ದರು. ಆದರೆ ಆ ತಲೆಮಾರಿನ ಆಹಾರದ ಪದ್ಧತಿ ಈಗ ಬದಲಾಗಿದೆ. ಇದೀಗ ಉತ್ತಮ ಕಾರ್ಬೋಹೈಡ್ರೇಟ್‌ಗಳು ದೇಶಕ್ಕೆ ಅಗತ್ಯ ಮತ್ತು ಅವುಗಳಿಂದ ಹಲವಾರು ರೋಗಗಳಿಂದ ದೂರವಿರಬಹುದು ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ. ಕೆಲವೊಮ್ಮೆ ನಮಗೆ ಕಾರ್ಬೋಹೈಡ್ರೇಟ್ ವಿಚಾರದಲ್ಲಿ ಬದಲಾಗುತ್ತಿರುವ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿಬಿಡುತ್ತದೆ. ಕೆಲವು ವರ್ಷಗಳ ಹಿಂದೆ ಕಡಿಮೆ ಕೊಬ್ಬು ಸೇವಿಸಬೇಕು ಮತ್ತು ಹೆಚ್ಚು ಕಾರ್ಬೋಹೈಡ್ರೇಟ್‌ಗಳನ್ನು ಸೇವಿಸಲು ಸಲಹೆ ನೀಡುತ್ತಿದ್ದೆವು. ಕಾರ್ಬೋಹೈಡ್ರೇಟ್ ಹೆಚ್ಚಿನ ಸೇವನೆಯಿಂದ ಸೊಂಟದ ಸುತ್ತ ಕೊಬ್ಬು ತುಂಬಿಕೊಳ್ಳುವುದು ಮತ್ತು ಮಧುಮೇಹ ಟೈಪ್ 2 ಬರುವ ಸಾಧ್ಯತೆ ಇದೆ ಎಂದು ಹೇಳಿ ಸಂಪೂರ್ಣವಾಗಿ ಅವುಗಳಿಂದ ಮುಕ್ತವಾಗಲು ಸಲಹೆ ನೀಡಲಾಗಿತ್ತು. ಆದರೆ ಇದೀಗ ಮತ್ತೆ ಅದೇ ಕಾರ್ಬೋಹೈಡ್ರೇಟ್ ದೇಹಕ್ಕೆ ಅಗತ್ಯ ಎನ್ನಲಾಗುತ್ತಿದೆ. ಹಾಗಿದ್ದರೆ ಒಟ್ಟಾರೆಯಾಗಿ ಈ ಕಾರ್ಬೋಹೈಡ್ರೇಟ್‌ನ ಅಗತ್ಯ ನಮಗೆ ಎಷ್ಟಿದೆ ಎನ್ನುವುದನ್ನು ಅರಿತುಕೊಳ್ಳುವುದು ಮುಖ್ಯವಲ್ಲವೆ?

ಮುಂದುವರಿಯುವುದು...

ಪಾರ್ಶ್ವವಾಯು ಹಾಗೂ ಚಿಕಿತ್ಸೆಗಳು.

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಪಾರ್ಶ್ವವಾಯು, ಅರ್ಧಾಂಗವಾಯು, ಲಕ್ವ ಮತ್ತು ಸ್ಟ್ರೋಕ್ ಇವೆಲ್ಲ ಸರ್ವೇಸಾಮಾನ್ಯವಾಗಿ ಒಂದೇ ಅರ್ಥ ಕೊಡುವ ಶಬ್ದಗಳು ಈ ರೋಗದಲ್ಲಿ ಕೆಲವು ಪ್ರಕಾರಗಳಿವೆ.

- ದೇಹದ ಎಡ ಪಾರ್ಶ್ವ ಎಡಗೈ ಎಡಕಾಲಿಗೆ ಬಲ ಇಲ್ಲದೆ ಇರುವುದು
- ದೇಹದ ಬಲ ಪಾರ್ಶ್ವ ಇಲ್ಲದಿರುವುದು
- ದೇಹದ ಕೆಳಭಾಗ, ಎರಡು ಕಾಲುಗಳಿಗೆ ಬಲ ಇಲ್ಲದಿರುವುದು
- ದೇಹದ ಮೇಲ್ಭಾಗ, ಎರಡೂ ಕೈಗಳಿಗೆ ಬಲವಿಲ್ಲದಿರುವುದು
- ಮುಖದ ಪಾರ್ಶ್ವವಾಯು ಮುಖದ ಮಾಂಸಖಂಡಗಳು ನಾಲಿಗೆ, ದೃಷ್ಟಿ, ಕಿವಿ ಕೇಳುವಿಕೆ, ಆಹಾರ ನುಂಗುವಿಕೆ ರುಚಿ ಹೀಗೆ ಬದಲಾವಣೆಗಳನ್ನು ತರುತ್ತವೆ.

ಕಾರಣಗಳು :

- ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು
- ಅನಿಯಂತ್ರಿತ ರಕ್ತದೊತ್ತಡ ಇದರಿಂದಾಗಿ ಮೆದುಳಿನಲ್ಲಿ ರಕ್ತಸ್ರಾವವಾಗಿ (blood haemorage) ಅಂಗಾಂಗಗಳು ಬಲ ಕಳೆದುಕೊಳ್ಳುವುದು
- ಕೆಲವು ಸನ್ನಿವೇಶಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದಲೂ ಪಾರ್ಶ್ವವಾಯು ಆಗಬಹುದು.
- ರಕ್ತದೊತ್ತಡ ಅತಿಯಾಗಿ ಹೆಚ್ಚಿದಲ್ಲಿ ಮೆದುಳಿನ ಭಾಗಕ್ಕೆ ರಕ್ತ ಹೆಚ್ಚಾಗಿ ಹರಿದು ಮೆದುಳಿನ ಕೆಲಭಾಗದಲ್ಲಿ ರಕ್ತಶ್ರಾವವಾಗಬಹುದು.
- ಅತಿಕಡಿಮೆ ರಕ್ತದ ಒತ್ತಡದಿಂದಾಗಿ ಮೆದುಳಿಗೆ ರಕ್ತ ಪೂರೈಕೆ ಇಲ್ಲದೆ ದೈಹಿಕವಾಗಿ ಅಂಗಾಂಗಗಳು ಬಲಹೀನವಾಗುತ್ತದೆ
- ಮೆದುಳಿನಲ್ಲಿ ಗೆಡ್ಡೆ ಅಥವಾ Tumor ಇದ್ದಲ್ಲಿ ಮೆದುಳಿನಲ್ಲಿ ಏನಾದರೂ ಕ್ರಿಮಿ ದೋಷ (infection) ಇದ್ದಲ್ಲಿ ಪ್ಯಾರಲಿಸಿಸ್ ಆಗಬಹುದು.
- ಕೆಲವು ಅಪಘಾತಗಳಲ್ಲಿ ಬೆನ್ನಿಗೆ, ಸೊಂಟಕ್ಕೆ ಪೆಟ್ಟಾದಾಗ ಸೊಂಟದಿಂದ ಕೆಳಗೆ ಹೋಗುವ ನರಗಳಿಗೆ ಚೈತನ್ಯವಿಲ್ಲದೆ ಎರಡೂ ಕಾಲುಗಳಿಗೆ ಬಲ ಇಲ್ಲದಂತಾಗಬಹದು.

ಹೀಗೆ ಮೇಲ್ಕಂಡ ಹಲವಾರು ಕಾರಣಗಳಿಂದ ದೇಹದ ಅಂಗಾಂಗಗಳು ಬಲಹೀನತೆಗೆ ಒಳಗಾಗುವುದನ್ನು ಪಾರ್ಶ್ವವಾಯು ಎಂದು ಕರೆಯುತ್ತೇವೆ.

ದೇಹದ ಮೆದುಳು (Brain) ಭಾಗವು ಅತ್ಯಂತ ಮಹತ್ವವನ್ನು ಪಡೆದ ಅತಿ ಸೂಕ್ಷ್ಮವಾದ ಅಂಗವಾಗಿದೆ. ಮೆದುಳು ದೇಹದ ಐಚ್ಛಿಕ ಮತ್ತು ಅನೈಚ್ಛಿಕ ನರಗಳಿಗೆ ಒಂದು ರಿಮೋಟ್ ಕಂಟ್ರೋಲ್ ಇದ್ದಂತೆ. ದೇಹದ ಅಂತರ್ ಕ್ರಿಯೆಗಳಾದ ಹಸಿವು, ನಿದ್ರೆ, ನೀರಡಿಕೆ, ವಾಸನೆ, ಮಲಮೂತ್ರ, ಶ್ವಾಸ ಇತ್ಯಾದಿಗಳು ಮೆದುಳಿನಿಂದ ಆದೇಶವನ್ನು ಹೊರಡಿಸುತ್ತದೆ ಹಾಗೆಯೇ ಅಂಗಗಳಾದ ಕಾಲು ಕೈ ಬೆರಳುಗಳ ಚಲನೆಗೆ ಆದೇಶ ಮೆದುಳಿನಿಂದ ಹೊರಡುತ್ತದೆ ಇದಕ್ಕೆ ವೈದ್ಯಕೀಯ ಭಾಷೆಯಲ್ಲಿ ಕೇಂದ್ರೀಯ ನರ ಮಂಡಲ (Central Nervous System) ಎಂದು ಕರೆಯುತ್ತೇವೆ. ಈ ಶಕ್ತಿಯನ್ನು ನಮ್ಮ ಇಚ್ಛೆಯಲ್ಲಿ ಇಟ್ಟುಕೊಳ್ಳುವುದು ನಮ್ಮ ಕೈಯಲ್ಲಿದೆ.

Chronology of events of personal & Public life of Mahatma Gandhi
(year wise - from 1869)

1896 November 30. Sent a telegram to the Viceroy at Calcutta, drawing attention to the Transvaal Government's decision to force Indians to live in Locations. Left Bombay for South Africa by S.S. Courland along with wife and two sons.

December 18. Ships Courland and Naderi, carrying Indian passengers, reached Durban.

December 19. The Natal Government published a notification declaring Bombay an infected port in view of plague in some parts of the Bombay Province. Ships were put under five days' quarantine, which period was extended from time to time till January 11, 1897.

December 25. Gandhi addressed ship-mates, at a Christmas Day gathering, on Western civilization. Natal newspapers charged him later with "indulging in animated condemnation of Natal Whites" and "with desire to swamp Natal with Indians".

1897 January 13. Interviewed, on board the S.S. Courland, by the Natal Advertiser. Landed at 5 p.m. and was assaulted by a section of Durban mob, but escaped serious harm through the intervention of Mrs Alexander, the Police Superintendent's wife. Besieged later in Parsi Rustomji's house; was rescued by Police Superintendent Alexander.

January 14. Natal Government reported incident to Secretary of State for the Colonies, and blamed Gandhi for having landed at an inopportune time under bad advice.

January 20. Interviewed by the Attorney-General, Gandhi declined to have his assailants prosecuted and gave written expression to his wish that the matter be dropped.

January 22. Wrote personal letter of thanks and sent gifts to Mr and Mrs Alexander for their help when attacked by the mob.

January 28. Sent cable to Dadabhai Naoroji, Hunter and Bhownaggree reporting landing incidents.

January 29. Addressed to them letters in confirmation of cable, giving details.

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.

ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ನುಡಿಗಳು

– ಡಾ. ವೂಡೇ ಪಿ. ಕೃಷ್ಣ

ಕರ್ನಾಟಕದ ಗಡಿಭಾಗವಾದ ರಾಯದುರ್ಗದಲ್ಲಿ ಆಯೋಜಿಸಿದ್ದ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ **ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ವೂಡೇ ಪಿ. ಕೃಷ್ಣ** ಅವರ ಅಧ್ಯಕ್ಷೀಯ ಭಾಷಣದ ಆಯ್ದ ಭಾಗಗಳು. ಕನ್ನಡ ಸಾಹಿತ್ಯ ಪರಿಷತ್ತು ಆರಯೋಜಿಸಿದ 4ನೇ ಕನ್ನಡ ಸಾಹಿತ್ಯ ಸಮ್ಮೇಳನವು ಫೆಬ್ರವರಿ 2014ರಲ್ಲಿ ನಡೆದಿತ್ತು.

ಬೆಂಗಳೂರು ವಿಶ್ವವಿದ್ಯಾಲಯದ ಜವಾಬ್ದಾರಿಯುತ ಹುದ್ದೆಯಲ್ಲಿದ್ದವರು, ಡಾ. ಸಂಕೇಗೌಡರು: ವಿಜ್ಞಾನ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದು ಲಂಡನ್ ಒಳಗೊಂಡಂತೆ, ಅನೇಕ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಸತ್ವಯುತ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿ ವಿದ್ವತ್ತನ್ನು ಮೆರೆದಿದ್ದಾರೆ. ಇಂತಹ ಮೇರು ವ್ಯಕ್ತಿಗಳು ಈ ಗಡಿಭಾಗದಿಂದ ಬಂದವರೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ.

ಕರ್ನಾಟಕ–ಆಂಧ್ರ ರಾಜ್ಯಗಳ ಗಡಿಭಾಗಗಳಲ್ಲಿಯೇ ಪ್ರಮುಖವಾದ ಈ ರಾಯದುರ್ಗಕ್ಕೆ ಪ್ರಾಚೀನ ಇತಿಹಾಸವಿದೆ. ಇದು ಮೌರ್ಯರು, ಕದಂಬರು, ಬಾದಾಮಿ ಚಾಲುಕ್ಯರು, ತಲಕಾಡು ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಹೀಗೆ ಆಯಾ ಕಾಲದ ಪ್ರಮುಖ ರಾಜವಂಶಗಳ ಸಾಮಂತ ಪ್ರಾಂತ್ಯವಾಗಿ ಅಸ್ತಿತ್ವದಲ್ಲಿತ್ತು. ಮುಂದೆ ಕಂಪಿಲರಾಯ, ಕುಮಾರ ರಾಮನಾಥನ ಅಧೀನದಲ್ಲಿದ್ದ ರಾಯದುರ್ಗ ಕೋಟೆ, ನಂತರ ವಿಜಯನಗರ ಸಾಮ್ರಾಟರ ಆಳ್ವಿಕೆಗೆ ಒಳಪಟ್ಟಿತು. ಶ್ರೀಕೃಷ್ಣದೇವರಾಯನ ಪ್ರಮುಖ ಸೇನಾಧಿಪತಿಯಾದ ಭೂಪತಿರಾಯನು ರಾಯದುರ್ಗದಲ್ಲಿ ಶಾಂತಿ ಭದ್ರತೆಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿದುದರಿಂದ 'ಭೂಪತಿರಾಯನ ದುರ್ಗ' ಎಂದು, ನಂತರ 'ರಾಯದುರ್ಗ' ಎಂದು ಪ್ರಖ್ಯಾತಗೊಂಡಿತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಮುಂದೆ ಟಿಪ್ಪುವಿನ ಮರಣಾ ನಂತರದಲ್ಲಿ ಈ ರಾಯದುರ್ಗ ತಾಲ್ಲೂಕು ಬ್ರಿಟಿಷರ ಅಧೀನಕ್ಕೆ ಬಂದು 1953ರವರೆಗೆ ಕರ್ನಾಟಕದ ಬಳ್ಳಾರಿ ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಒಂದಾಗಿದ್ದು, ನಂತರ ಭಾಷಾವಾರು ಪ್ರಾಂತ್ಯ ವಿಂಗಡಣೆಯಾಗಿ ಆಂಧ್ರ ರೂಪುಗೊಂಡಾಗ ಈ ತಾಲ್ಲೂಕು ಆಂಧ್ರಕ್ಕೆ ಸೇರಿತು. ಇಂತಹ ಐತಿಹಾಸಿಕ ಹಿನ್ನೆಲೆ ಹೊಂದಿರುವ, ಸಾಂಸ್ಕೃತಿಕ ಸಿರಿವಂತಿಕೆಯಿಂದ ಮೆರೆದ ರಾಯದುರ್ಗದ ಈ ನೆಲದಲ್ಲಿ ಗಡಿನಾಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು, ನಾನು ಉತ್ಸವದ ಅಧ್ಯಕ್ಷನಾಗಿರುವುದು ಗಡಿಭಾಗದವನೇ ಆದ ನನ್ನ ಪುಣ್ಯವೆಂದೇ ತಿಳಿಯುತ್ತೇನೆ. ಕನ್ನಡ ಬಂಧುಗಳೇ, ಗಡಿಭಾಗದ ಭೂಪಟ ರೇಖೆಗಳು ಈ ಭಾಗದ ಜನರ ಭಾಷಿಕ, ಸಾಂಸ್ಕೃತಿಕ ಬಾಂಧವ್ಯಗಳನ್ನು ಕಟ್ಟಿ ಹಾಕಲು ಸಾಧ್ಯವಿಲ್ಲ. 1880, 1900ರಲ್ಲಿ, ಬ್ರಿಟಿಷರ ನೇರ ಆಡಳಿತದಲ್ಲಿದ್ದ ಮುಂಬೈ ಸರ್ಕಾರವು ಪ್ರಕಟಿಸಿದ 19ನೇ ಶತಮಾನದ ಭೂಪಟವನ್ನು ಗಮನಿಸಿದರೆ, ಆ ನಕಾಶೆಯಲ್ಲಿ ಇಂದಿನ ಇಡೀ ಕರ್ನಾಟಕ ಸೇರಿದೆಯಲ್ಲದೇ, ಉತ್ತರದಲ್ಲಿ ಕೊಲ್ಲಾಪುರ, ಮೀರಜ್, ಸೊಲ್ಲಾಪುರಗಳನ್ನು, ಪಶ್ಚಿಮದಲ್ಲಿ ಇಡೀ ಗೋವಾವನ್ನು, ಅದೇ ಪಶ್ಚಿಮ ದಕ್ಷಿಣದಲ್ಲಿ ಕಾಸರಗೋಡನ್ನು ಮಾತ್ರವಲ್ಲದೇ ಇನ್ನೂ ದಕ್ಷಿಣದ ಕಣ್ಣಾನೂರು, ತಲಚೇರಿ ಮತ್ತು ಕಲ್ಲಿಕೋಟೆಗಳನ್ನು ಒಳಗೊಂಡಿದೆ. ಪೂರ್ವದಲ್ಲಿ 'ಪೆನುಗೊಂಡ' ,ತಾಡಪತ್ರಿ', 'ಆದವಾನಿ'ಯಲ್ಲದೇ ಕರ್ನೂಲ್ ನಗರದವರೆಗೆ ಕರ್ನಾಟಕದ ಗಡಿ ಚಾಚಿಕೊಂಡಿರುವುದನ್ನು ಗಮನಿಸಬಹುದು. ಹೀಗೆ ಅಂದು ಅಚ್ಚ ಕನ್ನಡ ನೆಲವಾಗಿದ್ದ ಈ ನೆಲಗಳೆಲ್ಲಾ ಭಾಷಾವಾರು ಪ್ರಾಂತ್ಯ ವಿಂಗಡಣೆಯ ಸಂದರ್ಭದಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಸೇರಿಕೊಂಡವು. ಆಡಳಿತಾತ್ಮಕವಾಗಿ ಆಯಾ ಭಾಷೆಯನ್ನು ಅನುಸರಿಸಿದರೂ ತಮ್ಮ ಮನೆಯ ಮಾತಾಗಿ ಇಂದಿಗೂ ಕನ್ನಡವನ್ನು ಬಳಸುವ, ಕರ್ನಾಟಕದೊಂದಿಗಿನ ಕೊಡುಕೊಳ್ಳುವಿಕೆಯ ಸಾಂಸ್ಕೃತಿಕ ಸಂಬಂಧಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ನಾವು ಗಮನಿಸಬಹುದು.

ಇಂದು ಗಡಿನಾಡ ಕನ್ನಡಿಗರು ಅನೇಕ ಸಂದಿಗ್ಧತೆಗಳಿಗೆ ಸಿಲುಕಿ, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಾತನಾಡುವ ಭಾಷೆ ಒಂದು, ಆಡಳಿತ ಭಾಷೆ ಮತ್ತೊಂದು ಆಗಿ ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ ಎಂಬಂತಾಗಿದೆ ಇಲ್ಲಿನ ಕನ್ನಡಿಗರ ಸ್ಥಿತಿ. ಅದರಲ್ಲೂ ಈ ಗಡಿಭಾಗದ ಕನ್ನಡಿಗರ ಮಕ್ಕಳ ಶಿಕ್ಷಣದ ವಿಷಯದಲ್ಲಂತೂ ಇದು ತುಂಬಾ ಚಿಂತಾಜನಕವಾಗಿದೆ. ಗಡಿಭಾಗದಲ್ಲಿ ಕನ್ನಡ ಕಟ್ಟಿ ಬೆಳೆಸುವ ಪಣತೊಟ್ಟು ಆಂಧ್ರದಾದ್ಯಂತ 84 ಕನ್ನಡ ಭಾಷಾ ಶಾಲೆಗಳನ್ನು ಉಳಿಸಿಕೊಂಡಿರುವ ಇಲ್ಲಿನ ಕನ್ನಡಿಗರ ಮಕ್ಕಳಿಗೆ ಪ್ರತಿವರ್ಷ ಸಕಾಲಕ್ಕೆ ಸರಿಯಾಗಿ ಕನ್ನಡ ಪಠ್ಯಪುಸ್ತಕಗಳು ದೊರಕದ ಮಕ್ಕಳು ಪರದಾಡುವಂತಾಗಿದೆ. ಈ 84 ಕನ್ನಡ ಭಾಷಾ ಶಾಲೆಗಳಲ್ಲಿ 17,400ಕ್ಕೂ ಅಧಿಕ ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. ಇವರೆಲ್ಲರೂ ಪ್ರೀತಿಯಿಂದ ಕಲಿತುಕೊಂಡು, ಉಳಿಸಿಕೊಂಡು ಬರುತ್ತಿರುವ ಈ ಶಾಲೆಗಳಿಗೆ ಕನ್ನಡ ಪಠ್ಯಪುಸ್ತಕಗಳ ವಿತರಣೆಯಲ್ಲಿ ತೊಂದರೆಯಾದರೆ ಗಡಿ ಭಾಗದಲ್ಲಿ ಕನ್ನಡ ಸಂವರ್ಧನೆ ಯಾಗುವುದಾದರೂ ಹೇಗೆ? ಹೊರರಾಜ್ಯದ ಕನ್ನಡ ವಿದ್ಯಾರ್ಥಿಗಳಿಗೆ ಆಯಾ ರಾಜ್ಯಗಳು ಪಠ್ಯಪುಸ್ತಕಗಳನ್ನು ಒದಗಿಸಬೇಕು. ಒಂದು ವೇಳೆ ಹಾಗಾಗದಿದ್ದರೆ ಕರ್ನಾಟಕ ಸರ್ಕಾರವೇ ಪಠ್ಯಪುಸ್ತಕವನ್ನು ಪೂರೈಸುವ ಜವಾಬ್ದಾರಿಯನ್ನು ಹೊರಬೇಕು.

ಕರ್ನಾಟಕದ ಗಡಿಭಾಗದ ಕನ್ನಡ ಶಾಲೆಗಳಲ್ಲಿ ಓದುತ್ತಿರುವ ಆಂಧ್ರಪ್ರದೇಶದ ಕನ್ನಡ ವಿದ್ಯಾರ್ಥಿಗಳು ಆಂಧ್ರ ಸರ್ಕಾರದ ಆದಾಯ ಪ್ರಮಾಣ ಪತ್ರವನ್ನು ಕರ್ನಾಟಕದ ಕನ್ನಡ ಶಾಲೆಗಳಿಗೆ ಸಲ್ಲಿಸಿದರೆ, ಅದನ್ನು ಕರ್ನಾಟಕದ ಶಾಲೆಗಳಲ್ಲಿ ಅಸಿಂಧುವೆಂದು ಹೇಳುತ್ತಾರೆ. ಈ ಗೊಂದಲವನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರಗಳು ಗಮನಹರಿಸಬೇಕು. ಗಡಿನಾಡ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗಳಲ್ಲಿ ಮೀಸಲಾತಿ ಇರುವುದಿಲ್ಲ. ಹಾಗಾಗಿ ಗಡಿನಾಡ ಕನ್ನಡ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಬೇಕು. ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರಿ ಸೇವೆಯಲ್ಲಿ ಮೀಸಲಾತಿ ಕಲ್ಪಿಸುವ ಮೂಲಕ ಇವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕಾಗಿದೆ.

ಮುಂದುವರಿಯುವುದು...



ಅಂತರರಾಷ್ಟ್ರೀಯ ಸುದ್ದಿ ಸಮಾಚಾರಗಳು

ಉತ್ತರ ಕೊರಿಯಾದಲ್ಲಿ ಹಸಿವಿನ ತಾಂಡವ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಬಂಧಗಳು, ಕೋವಿಡ್–19 ಸಾಂಕ್ರಾಮಿಕದ ಹಿನ್ನಲೆಯಲ್ಲಿ ಚೀನಾದ ಜೊತೆಗಿನ ಗಡಿ ಮುಚ್ಚುಗಡೆ ಹಾಗೂ ಕಳೆದ ವರ್ಷದ ಚಂಡಮಾರುತ, ಭೀಕರ ಮಳೆ ಈ ಎಲ್ಲಾ ಕಾರಣಗಳಿಂದಾಗಿ ಉತ್ತರ ಕೊರಿಯಾದಲ್ಲಿ ಭೀಕರ ಆಹಾರ ಸಮಸ್ಯೆ ತಾಂಡವವಾಡುತ್ತಿದ್ದು, ಕೊರಿಯನ್ನರು ಹಸಿವಿನಿಂದ ಬಳಲುತ್ತಿದ್ದಾರೆಂದು ವರದಿಗಳು ತಿಳಿಸಿವೆ. ಉತ್ತರ ಕೊರಿಯಾದಲ್ಲಿ 2020ರಲ್ಲಿ 50.2 ದಶಲಕ್ಷ ಟನ್ ಆಹಾರ ಧಾನ್ಯಗಳ ಅವಶ್ಯಕತೆಯಿತ್ತು. ಆದಾಗ್ಯೂ ಅದು ಕೇವಲ ನಾಲ್ಕು ದಶಲಕ್ಷ ಟನ್‌ಗಳನ್ನು ಉತ್ಪಾದಿಸಿದ್ದು, 10 ಲಕ್ಷ ಟನ್‌ಗೂ ಅಧಿಕ ಆಹಾರದ ಕೊರತೆಯುಂಟಾಗಿತ್ತು ಎಂದು ಸಿಯೋಲ್‌ನಿಂದ ಕಾರ್ಯಾಚರಿಸುತ್ತಿರುವ ಕೊರಿಯನ್ ಅಭಿವೃದ್ಧಿ ಸಂಸ್ಥೆ ತಿಳಿಸಿದೆ. 2020–21ರ ಅವಧಿಯಲ್ಲಿ ಉತ್ತರ ಕೊರಿಯ ಆಮದು ಮಾಡಿಕೊಂಡ ಆಹಾರ ಧಾನ್ಯಗಳ ಪ್ರಮಾಣದಲ್ಲಿ 7.80 ಲಕ್ಷ ಟನ್ ಕೊರತೆಯುಂಟಾಗಿದೆಯಿಂದು ಅದು ಹೇಳಿದೆ. ಸದ್ಯದ ಪರಿಸ್ಥಿತಿಯಲ್ಲಿ ಏಳು ವರ್ಷಕ್ಕಿಂತ ಕೆಳವಯಸ್ಸಿನ ಮಕ್ಕಳು, ಗರ್ಭಿಣಿಯರು ಹಾಗೂ ವಯೋವೃದ್ಧರು ತೀವ್ರವಾದ ಹಸಿವಿಗೆ ತುತ್ತಾಗುತ್ತಿದ್ದಾರೆಂದು ಉತ್ತರ ಕೊರಿಯಾದ ವಿದ್ಯಮಾನಗಳು ವಿಶೇಷ ತಜ್ಞೆಯಾದ ಹಾರ್ಖಿಲ್ ಸ್ಮಿತ್ ತಿಳಿಸಿದ್ದಾರೆ. ಹಾರ್ಖಿಲ್ ಅವರು 1998 ರಿಂದ 2001ರವರೆಗೆ ಉತ್ತರ ಕೊರಿಯಾದಲ್ಲಿ ಯುನಿಸೆಫ್ ಹಾಗೂ ವಿಶ್ವ ಆಹಾರ ಕಾರ್ಯಕ್ರಮ ಏಜೆನ್ಸಿಗಳಿಗಾಗಿ ಆ ದೇಶದ ಕೃತಿ ದತ್ತಾಂಶದ ವಿಶ್ಲೇಷಕಿಯಾಗಿ ಕೆಲಸ ಮಾಡಿದ್ದಾರೆ. ಉತ್ತರ ಕೊರಿಯಾದಲ್ಲಿ ಆಹಾರದ ಸಮಸ್ಯೆ ಬಿಗಡಾಯಿಇಸುತ್ತಿರುವುದಾಗಿ ಉತ್ತರ ಕೊರಿಯಾದ ಸರ್ವೋಚ್ಚ ನಾಕ್ ಕಿಮ್ ಜಾಂಗ್ ಉನ್ ಅವರು ಜೂನ್‌ನಲ್ಲಿ ನಡೆದ ವರ್ಕರ್ಸ್ ಪಾರ್ಟಿ ಪಕ್ಷದ ಕೇಂದ್ರೀಯ ಸಮಿತಿ ಸಭೆಯಲ್ಲಿ ಒಪ್ಪಿಕೊಂಡಿದ್ದರು. ಕಳೆದ ವರ್ಷದ ಚಂಡಮಾರುತದ ಕಾರಣದಿಂದಾಗಿ ಕೃಷಿ ವಲಯವು ನಿರೀಕ್ಷಿತ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಉತ್ಪಾದಿಸಲು ವಿಫಲವಾಗಿತ್ತು ಎಂದವರು ಹೇಳಿದ್ದರು.



ಸೌಜನ್ಯ : ವಾರ್ತಾಭಾರತಿ, 02.07.2021

ನೆಲ್ಸನ್ ಮಂಡೇಲಾ ಅಂತರರಾಷ್ಟ್ರೀಯ ದಿನ



ಸಾಮಾಜಿಕ ನ್ಯಾಯಕ್ಕಾಗಿ 67 ವರ್ಷಗಳಿಂದ ಹೋರಾಡಿದ ನೆಲ್ಸನ್ ಮಂಡೇಲಾ ಅವರ ಗೌರವಾರ್ಥ ಪ್ರತಿ ವರ್ಷ ಜುಲೈ 18 ರಂದು ನೆಲ್ಸನ್ ಮಂಡೇಲಾ ಅಂತರರಾಷ್ಟ್ರೀಯ ದಿನವನ್ನು ಅವರ ಜನ್ಮದಿನದಂದು ಆಚರಿಸಲಾಗುತ್ತದೆ. ಈ ದಿನವನ್ನು ವಿಶ್ವಸಂಸ್ಥೆಯು ಅಧಿಕೃತವಾಗಿ ನವೆಂಬರ್ 2009ರಲ್ಲಿ ಘೋಷಿಸಿತು, 18 ಜುಲೈ 2010ರಂದು ನಡೆದ ಮೊದಲ ಯುಎನ್ ಮಂಡೇಲಾ ದಿನವನ್ನು ಆಚರಿಸಲು ಪ್ರಾರಂಭಿಸಿದವು. ಮಂಡೇಲಾ ದಿನವನ್ನು ಸಾರ್ವಜನಿಕ ರಜಾದಿನವೆಂದು ಅರ್ಥೈಸಲಾಗಿಲ್ಲ, ಆದರೆ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರ ಪರಂಪರೆಯನ್ನು ಮತ್ತು ಅವರ ಮೌಲ್ಯಗಳನ್ನು ಸ್ವಯಂಸೇವಕರು ಮತ್ತು ಸಮುದಾಯ ಸೇವೆಯ ಮೂಲಕ ಗೌರವಿಸುವ ದಿನವಾಗಿ ಅರ್ಥೈಸಲಾಗಿದೆ. ಈ ದಿನವು ಜಾಗತೀಕವಾಗಿ ಪ್ರತಿಯೊಬ್ಬ ವ್ಯಕ್ತಿಯು ಜಗತ್ತನ್ನು ಪರಿವರ್ತಿಸುವ ಶಕ್ತಿಯನ್ನು, ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿದ್ದಾನೆ ಎಂಬ ಪರಿಕಲ್ಪನೆಯನ್ನು ಆಚರಿಸುತ್ತದೆ. ಈ ದಿನದ ಪರಿಕಲ್ಪನೆ "ಬಡತನದ ವಿರುದ್ಧ ಹೋರಾಡಲು ಮತ್ತು ಶಾಂತಿ, ಸಾಮರಸ್ಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಉತ್ತೇಜಿಸಲು ವಿಶ್ವದಾದ್ಯಂತ ಜನರನ್ನು ಒಟ್ಟುಗೂಡಿಸಲು ಅಂತಹ ದಿನವು ಸೇವೆ ಸಲ್ಲಿಸಲು ಸಾಧ್ಯವಾದರೆ ನಮಗೆ ಗೌರವ ನೀಡಲಾಗುವುದು" ಎಂಬುದಾಗಿದೆ. 2014 ರಲ್ಲಿ, ವಿಶ್ವಸಂಸ್ಥೆಯು ನೆಲ್ಸನ್ ಮಂಡೇಲಾ ಪ್ರಶಸ್ತಿಯನ್ನು ಸ್ಥಾಪಿಸಿತು, ಇದು ಮಾನವೀಯತೆಯ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟವರ ಸಾಧನೆಗಳನ್ನು ಗುರುತಿಸುವ ಪ್ರಶಸ್ತಿಯಾಗಿದೆ.

Roman Canal found in Netherlands



Roman canal and road near ancient military camps that were this week listed on Unesco's list of World Heritage sites, AFP reports from The Hague.

The canal more than 10 meters wide and road were uncovered near the eastern city of Nijmegen, a major Roman era settlement with permanent military bases that were awarded the Unesco status. They are believed to have been built and used by the Roman military, according to RAAP, the country's largest consultancy for archeology and cultural history. Nijmegen is on the Rhine, hte border of the roman Empire at the time, it said in a statement.

Courtacy : Deccan Herald - 30.07.2021

ಸಂಗ್ರಹ : ಡಾ. ವಿ. ಪ್ರಶಾಂತ

ಪರಿಸರದೊಂದಿಗೆ ನಾವು


ಸಂಗ್ರಹ : ಡಾ. ಮುನಿಯಪ್ಪ

ಜೀವವೈವಿಧ್ಯ ವನ



ಜ್ಞಾನಭಾರತಿ ಆವರಣದ ಜೀವವೈವಿಧ್ಯವನ ಹಲವು ಪಕ್ಷಿಗಳಿಗೆ ಆಸರೆಯಾಗಿದೆ. ಪಕ್ಷಿ ಪ್ರಿಯರು ಇಲ್ಲಿ ಬಂದು ಪಕ್ಷಿ ವೀಕ್ಷಣೆಯಲ್ಲಿ ತೊಡಗುತ್ತಾರೆ. ಪಕ್ಷಿಗಳ ಫೋಟೊ ಕ್ಲಿಕ್ಕಿಸುತ್ತಾರೆ. ಅವರು ಕಾಣುವ ವಿಶೇಷಣಗಳನ್ನು ದಾಖಲಿಸುತ್ತಾರೆ. ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಬಂದು 'ವನಸಿರಿ'ಯನ್ನು ಕಣ್ತುಂಬಿಕೊಂಡು ಹೋಗುತ್ತಾರೆ, ಕಲಿಯುತ್ತಾರೆ, ಕಲಿಸುತ್ತಾರೆ. ಈಗಾಗಲೇ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿಗೆ ಬಂದು ಹೋಗಿರುವುದನ್ನು ಸ್ಮರಿಸಬಹುದು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಜ್ಞಾನಭಾರತಿ ಆವರಣದಲ್ಲಿ ಜೀವವೈವಿಧ್ಯ ವನ ನಿರ್ಮಾಣ ಕಾರ್ಯ ಆರಂಭವಾಗಿದೆ. ಹಲವು ಜಾತಿಯ ಗಿಡ ಮರಗಳನ್ನು ಬೆಳೆಸುವ ಕೆಲಸ ನಡೆಯಿತು. ಕಲ್ಯಾಣಿ, ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ. ಇದರಿಂದ ಸಹಜ ಕಾಡಿನ ವಾತಾವರಣ ಜ್ಞಾನಭಾರತಿ ಆವರಣಕ್ಕೆ ಪ್ರಾಪ್ತವಾಯಿತು. ಹಲವು ಜಾತಿಯ ಪಕ್ಷಿಗಳು ಇಲ್ಲಿ ನೆಲೆ ಕಂಡುಕೊಂಡವು. **Bird Man of Inida** ಸಲೀಂ ಅಲಿ ಹೇಳುವಂತೆ "ಜನರು ಪಕ್ಷಿಧಾಮವೆಂದರೆ ಅದೊಂದು **Glorified zoo** ಎಂದು ಭಾವಿಸಿದ್ದಾರೆ. ಆದರೆ ಅವರಿಗೆ ಅರ್ಥವಾಗದ ವಿಷಯವೇನೆಂದರೆ, ಸಂರಕ್ಷಿತ ಪರಿಸರವಿದ್ದಾಗ ಹಕ್ಕಿ ಪಕ್ಷಿಗಳು ತಂತಾನೆ ಬರುತ್ತವೆ. ಅಲ್ಲಿ ಅವುಗಳಿಗೆ ಆಹಾರ ನೀರು ಸಿಕ್ಕರೆ, ಆ ಪ್ರದೇಶ ಗೂಡು ಕಟ್ಟಲು ಸುರಕ್ಷಿತ ಸ್ಥಳವೆನಿಸಿದರೆ ಅಲ್ಲಿಯೇ ಬದುಕುತ್ತವೆ". ಇದೀಗ ಜ್ಞಾನ ಭಾರತಿ ಆವರಣವು ಹೀಗಾಗಿದೆ. ಇಲ್ಲಿನ ಕಾಡು ಹಕ್ಕಿ ಪಕ್ಷಿಗಳಿಗೆ ಸುರಕ್ಷಿತ ಪ್ರದೇಶವಾಗಿದೆ. ಅವುಗಳಿಗೆ ಆಹಾರವಿದೆ, ನೀರಿದೆ. ಸಲೀಂ ಅಲಿ ಹೇಳಿದಂತೆ ನೈಸರ್ಗಿಕ ಪಕ್ಷಿಧಾಮ ಪಕ್ಷಿತಜ್ಞರಿಗೆ ಪ್ರಿಯವಾದ ತಾಣ, ಇಲ್ಲಿಗೆ ಬಂದು ಹೋಗುವ ಅನೇಕ ಪಕ್ಷಿ ತಜ್ಞರು ಅಳಿವಿನಂಚಿನಲ್ಲಿರುವ ಪಕ್ಷಿಗಳನ್ನೂ ಗುರುತಿಸಿ ಸಂಭ್ರಮಿಸಿದ್ದಾರೆ.

ಅಕ್ವೆಟಿಕ್, ರೊಬೊಟಿಕ್ಸ್ ಹಾಗೂ ನೇಚರ್ ಪಾರ್ಕ್




ಗುಜರಾತ್‌ನ ಗಾಂಧಿನಗರದಲ್ಲಿನ ಅಕ್ವೆಟಿಕ್ ಗ್ಯಾಲರಿ, ರೊಬೊಟಿಕ್ಸ್ ಗ್ಯಾಲರಿ ಹಾಗೂ ನೇಚರ್ ಪಾರ್ಕ್‌ಗಳಿವೆ. ಅಕ್ವೆಟಿಕ್ ಗ್ಯಾಲರಿ ಅಥವಾ ಜಲಚರ ಪಾರ್ಕ್‌ನಲ್ಲಿ ಪ್ರಪಂಚದಾದ್ಯಂತವಿರುವ ವಿವಿಧ ಪ್ರಭೇದಗಳ ಜಲಚರಗಳನ್ನು ಕಾಣಬಹುದು. ಜಗತ್ತಿನಾದ್ಯಂತವಿರುವ ಪ್ರಮುಖ ಶಾರ್ಕ್ ಮೀನು ಒಳಗೊಂಡಿರುವ ಮುಖ್ಯ ಟ್ಯಾಂಕ್, ವಿಶಿಷ್ಠ ಅನುಭವವನ್ನು ನೀಡಲು 28 ಮೀಟರ್ ವಾಕ್ ವೇ ಗ್ಲಾಸ್ ಸುರಂಗ ಸೇರಿದಂತೆ ಹಲವು ವಿಶೇಷತೆಗಳು ಈ ಅಕ್ವೆಟಿಕ್ ಗ್ಯಾಲರಿಯಲ್ಲಿದೆ. ವಿವಿಧ ಮೀನುಗಳು ಅವುಗಳ ವೈಜ್ಞಾನಿಕ ಮಾಹಿತಿ ಸೇರಿದಂತೆ ಹಲವು ವಿಶೇಷತೆಗಳು ಈ ಜಲಚರ ಗ್ಯಾಲರಿಯಲ್ಲಿದೆ. ತಂತ್ರಜ್ಞಾನಗಳನ್ನು ಪ್ರದರ್ಶಿಸುವ ರೊಬೊಟಿಕ್ಸ್ ಗ್ಯಾಲರಿ ಮತ್ತೊಂದು ಪ್ರಮುಖ ಆಕರ್ಷಣೆಯಾಗಿದೆ. ಪ್ರವೇಶದ್ವಾರದಲ್ಲಿ, ಟ್ರಾನ್ಸ್‌ಫಾರ್ಮರ್ ರೋಬೋಟ್‌ನ ದೈತ್ಯಾಕಾರದ ಪ್ರತಿಕೃತಿಯನ್ನು ಇರಿಸಲಾಗಿದೆ. ವಿಶೇಷ ಅಂದರೆ ಗ್ಯಾಲರಿಯ ಮುಂಭಾಗದಲ್ಲಿ ಸ್ವಾಗತ ಕೋರಲು ಹ್ಯೂಮನಾಯ್ಡ್ ರೋಬೋಟ್ ಇಡಲಾಗಿದೆ. ಈ ರೋಬೋಟ್ ಸಂತೋಷ, ಆಶ್ಚರ್ಯ ಮತ್ತು ಉತ್ಸಾಹದಂತಹ ಭಾವನೆಗಳನ್ನು ಸಹ ವ್ಯಕ್ತಪಡಿಸುತ್ತದೆ. ಗ್ಯಾಲರಿಯ ವಿವಿಧ ಮಹಡಿಗಳಲ್ಲಿ, ವಿವಿಧ ಕ್ಷೇತ್ರಗಳ ರೋಬೋಟ್‌ಗಳನ್ನು ಇರಿಸಲಾಗಿದೆ. ಔಷಧಿ, ರಕ್ಷಣೆ, ಕೃಷಿ ಮತ್ತು ದೈನಂದಿನ ಜೀವನದಲ್ಲಿ ಬಳಕೆಯಾಗುವ ಹಾಗೂ ಪ್ರತಿನಿಧಿಸುವ ರೋಬೋಟ್‌ಗಳನ್ನು ಇರಿಸಲಾಗಿದೆ. ರೊಬೊಟಿಕ್ ಗ್ಯಾಲರಿಯಲ್ಲಿ ಮಾನವರನ್ನೇ ಚಕಿತಗೊಳಿಸಬಲ್ಲ ರೋಬೋಟಿಕ್‌ಗಳು ಇವೆ. ನೇಚರ್ ಪಾರ್ಕ್‌ನಲ್ಲಿ ಚೆಸ್ ಗಾರ್ಡನ್, ಮಿಸ್ಟ್ ಗಾರ್ಡನ್, ಸೆಲ್ಫಿ ಪಾಯಿಂಟ್ಸ್ ಸೇರಿದಂತೆ ಅನೇಕ ಆಕರ್ಷಕಗಳಿವೆ. ವಿಶೇಷವಾಗಿ ಮಕ್ಕಳಿಗಾಗಿ ವಿನ್ಯಾಸಗೊಳಿಸಲಾದ ಹಲವು ವಿಭಾಗಗಳಿವೆ. ಆಸಕ್ತಿದಾಯಕ ಚಕ್ರವ್ಯೂಹಗಳನ್ನು ಒಳಗೊಂಡಿದೆ. ನೇಚರ್ ಪಾರ್ಕ್ ವೈಜ್ಞಾನಿಕ ಮಾಹಿತಿಯೊಂದಿಗೆ ತುಂಬಿರುವ ಟೆರರ್ ಬರ್ಡ್, ಮ್ಯಾಮತ್, ಸಬೆರ್‌ಟೂತ್ ಸಿಂಹ ಮುಂತಾದ ಅಳಿವಿನಂಚಿನಲ್ಲಿರುವ ಪ್ರಾಣಿಗಳ ವಿವಿಧ ಶಿಲ್ಪಗಳನ್ನು ಒಳಗೊಂಡಿದೆ. ಅಕ್ವೆಟಿಕ್, ರೋಬೋಟಿಕ್ ಹಾಗೂ ನೇಚರ್ ಪಾರ್ಕ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ. ಕಟ್ಟಡದ ವಿನ್ಯಾಸದಲ್ಲೂ ವಿಶೇಷತೆಗಳಿವೆ.

ಸಂಗ್ರಹ : ಡಾ. ರಾಮಲಿಂಗೇಶ್ವರ (ಸಿಸಿರಾ)


ಶ್ರದ್ಧಾಂಜಲಿ

ಸುಂದರ್ ಲಾಲ್ ಬಹುಗುಣ (09.01.1927-21.05.2021)



ಸುಂದರ್‌ಲಾಲ್ ಬಹುಗುಣ ಅವರು ಉತ್ತರಖಂಡದ ಪರಿಸರವಾದಿ ಮತ್ತು ಚಿಪ್ಕೊ ಚಳುವಳಿಯ ನೇತಾರರಾಗಿದ್ದಾರೆ. ಹಿಮಾಲಯ ಕಾಡುಗಳ ಸಂರಕ್ಷಣೆಗಾಗಿ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದರು. 1980ರ ದಶಕದಿಂದ 2004ರ ಆರಂಭದವರೆಗೆ ತೆಹ್ರಿ ಅಣೆಕಟ್ಟು ವಿರೋಧಿ ಆಂದೋಲನವನ್ನು ಮುನ್ನಡೆಸಿದರು. ಸುಂದರ್ ಲಾಲ್ ಬಹುಗುಣರವರು ಉತ್ತರಖಂಡದ ಮರೊಡ ಎಂಬಲ್ಲಿ ಜನಿಸಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ವಸಾಹತು ಆಡಳಿತದ ವಿರುದ್ಧ ಹೋರಾಟಕ್ಕೆ ಜನರನ್ನು ಸಜ್ಜುಗೊಳಿಸಿದ್ದರು. ಅವರು ಗಾಂಧಿಯವರ ಪ್ರೇರಣೆಯಿಂದ ಸುಮಾರು 4700 ಕಿ.ಮೀ. ನಷ್ಟು ಹಿಮಾಲಯದ ಕಾಡು ಹಾಗೂ ಬೆಟ್ಟಗಳ ನಡುವೆ ಪಾದಯಾತ್ರೆ ಮಾಡಿ ಮೆಗಾ ಅಭಿವೃದ್ಧಿ ಯೋಜನೆಯಿಂದ ವಿಶ್ವವಿಖ್ಯಾತ ಹಿಮಾಲಯದ ಪ್ರಾಕೃತಿಕತೆಗೆ ಮತ್ತು ಪರಿಸರಕ್ಕೆ ಆಗಿರುವ ಹಾನಿಯ ಬಗ್ಗೆ ಜನ ಜಾಗೃತಿಗೊಳಿಸಿದರು. ಚಿಪ್ಕೊ ಚಳುವಳಿ ಮೂಲಕ ವನಸಂಪತ್ತನ್ನು, ಪ್ರಕೃತಿಯನ್ನು ರಕ್ಷಿಸಲು ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಬೆಂಬಲವನ್ನು ಪಡೆದರು. ಚಿಪ್ಕೊ ಚಳುವಳಿಯು, ಕರ್ನಾಟಕದಲ್ಲಿ ಅಪ್ಪಿಕೊ ಚಳುವಳಿಗೆ ಸ್ಫೂರ್ತಿ ನೀಡಿತು. ಬಹುಗುಣರು 'ಪರಿಸರವು ಶಾಶ್ವತ ಆರ್ಥಿಕತೆ' ಎಂಬ ಚಿಪ್ಕೊ ಸಿದ್ಧಾಂತದ ಅರಿವನ್ನು ಮೂಡಿಸಿದ್ದಾರೆ.

ಕೃಷ್ಣ (01.071941 – 21.05.2021)




ಇವರು ಸಜ್ಜನ, ಸರಳ, ನೇರನುಡಿಗಳ ರಾಜಕಾರಣಿಯಾಗಿದ್ದವರು ಮತ್ತು ಕರ್ನಾಟಕ ವಿಧಾನಸಭೆಯ ಸ್ಪೀಕರ್ ಸಹ ಆಗಿದ್ದರು. ಇವರು ಕೃಷ್ಣರಾಜಪೇಟೆ ತಾಲ್ಲೂಕಿನ ಕೋತಮಾರನಹಳ್ಳಿ ಗ್ರಾಮದಲ್ಲಿ ಜನಿಸಿದವರಾಗಿದ್ದಾರೆ. ಅವರು 1978 ರಿಂದ 1983 ರವರೆಗೆ ಕೆ.ಆರ್.ಪೇಟೆ ತಾಲ್ಲೂಕು, ನಂತರ 1980 ರಿಂದ 1985 ರವರೆಗೆ ಮಂಡ್ಯ ಜಿಲ್ಲೆಯ ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರು 1985ರಲ್ಲಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿ 1988 ರಲ್ಲಿ ರೇಷ್ಮೆ ಕೃಷಿ ಮತ್ತು ಪಶು ಸಂಗೋಪನಾ ಸಚಿವರಾಗಿದ್ದರು. ಅವರು 1994ರಲ್ಲಿ ಕೆ.ಆರ್.ಪೇಟೆಯಿಂದ ಮರು ಆಯ್ಕೆಯಾಗಿದ್ದರು ಹಾಗೂ ಮಂಡ್ಯ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. 2004ರ ಚುನಾವಣೆಯಲ್ಲಿ ವಿಜಯಿಯಾದ ನಂತರ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಆಗಿ, ಅನುಕರಣೀಯ ಸೇವೆಸಲ್ಲಿಸಿದ್ದಾರೆ.

ಜಿ. ಮಾದೇಗೌಡ (17.07.2021)



ಹಿರಿಯ ಗಾಂಧಿವಾದಿ, ಜಿ. ಮಾದೇಗೌಡರು ಗಾಂಧಿ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸಾಮಾನ್ಯ ಕಾರ್ಯಕರ್ತರಂತೆ ಬಾಳಿದವರು. 1980ರ ದಶಕದಲ್ಲಿ ಆರ್ ಗುಂಡೂರಾವ್ ಅವರ ಮಂತ್ರಿ ಮಂಡಲದಲ್ಲಿ ಅರಣ್ಯ ಸಚಿವರಾಗಿ ಸೇವೆಸಲ್ಲಿಸಿದ್ದ ಮಾದೇಗೌಡರು ಮಂಡ್ಯದ ಅಂದಿನ ಕಿರುಗಾವಲು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಮಂಡ್ಯ ಲೋಕಸಭಾ ಕ್ಷೇತ್ರದಿಂದ 1989 ಮತ್ತು 1991ರಲ್ಲಿ ಆಯ್ಕೆಯಾಗಿದ್ದರು. ಇವರು ಕಾವೇರಿ ನದಿ ನೀರು ಹಂಚಿಕೆ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಶಿಕ್ಷಣ, ಸಮಾಜಸೇವೆ ಮತ್ತು ರೈತ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಮಾದೇಗೌಡರು ಅರಸೀಕೆರೆಯ ರಾಜ ಘಾಟ್ ಮಾದರಿಯ ಮಹಾತ್ಮ ಗಾಂಧೀಜಿ ಅವರ ಸ್ಮಾರಕ ಮಂಡ್ಯ ಜಿಲ್ಲೆಯಲ್ಲಿ ಮಾಡಬೇಕೆಂಬ ಮಹದಾಸೆ ಹೊಂದಿದ್ದರು. ಅದರ ಪೂರ್ವ ಸಿದ್ಧತೆ ಮತ್ತು ಕಾರ್ಯ ಯೋಜನೆಯನ್ನು ತಯಾರಿಸಲು ಸ್ವತಃ ಅವರೇ ಖುದ್ದಾಗಿ ತಂಡದೊಂದಿಗೆ ಅರಸೀಕೆರೆಯ ಕಸ್ತೂರ ಬಾ ಗಾಂಧೀ ಆಶ್ರಮಕ್ಕೆ ಭೇಟಿ ನೀಡಿದ್ದರು. ಅವರು ಮಂಡ್ಯದ ಭಾರತೀ ಎಜುಕೇಷನ್ ಸೊಸೈಟಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಗಾಂಧಿ ಭವನ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಸಹಕಾರ ಸಂಘಗಳನ್ನು ಸ್ಥಾಪಿಸಿದವರಾಗಿದ್ದಾರೆ.

ವಿಠ್ಠಪ್ಪ ಗೋರಂಟ್ಲಿ (23.07.2021)



ಕೊಪ್ಪಳ ಜಿಲ್ಲೆಯ ಹಿರಿಯ ಸಾಹಿತಿ, ಪತ್ರಕರ್ತರಾಗಿ ನೇರ ಹಾಗೂ ನಿಷ್ಠುರ ಬರವಣಿಗೆಯಿಂದ ಗಮನ ಸೆಳೆದಿದ್ದರು. ಜಿಲ್ಲಾ ಸಂಕಷ್ಟಗಳು, ತುಂಗಭದ್ರಾ ಜಲಾಶಯದ ಹೂಳು ಎತ್ತುವ ಕಾರ್ಮಿಕರ ಶೋಷಣೆ, ನೊಂದವರ ಪರ ಧ್ವನಿ ಎತ್ತಿ ಸರ್ಕಾರದ ಗಮನ ಸೆಳೆಯುತ್ತಿದ್ದರು. ಪ್ರಾಥಮಿಕ ಶಿಕ್ಷಣ ಪಡೆದರೂ 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡಮಿ ಪ್ರಶಸ್ತಿ ಹಾಗೂ ಹಲವಾರು ಗೌರವ ಪುರಸ್ಕಾರಗಳು ಸಂದಿವೆ. ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಮಂಡಲ ಪ್ರಧಾನರಾಗಿ ಸೇವೆ ಸಲ್ಲಿಸಿದ್ದಾರೆ.

ಜಯಂತಿ (25.07.2021)



ಕನ್ನಡ ಚಿತ್ರರಂಗದಲ್ಲಿ "ಅಭಿನಯ ಶಾರದೆ" ಎಂದೇ ಪ್ರಸಿದ್ಧರಾದ ಜಯಂತಿ ಬಹುಭಾಷಾ ಕಲಾವಿದೆ. ಜಯಂತಿ ಅವರು ಒಟ್ಟು 500 ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 1968ರಲ್ಲಿ ತೆರೆಕಂಡ ವೈಆರ್. ಸ್ವಾಮಿ ನಿರ್ದೇಶನದ "ಜೇನು ಗೂಡು " ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಜಯಂತಿ ಅವರು 1965ರ 'ಮಿಸ್ ಲೀಲಾವತಿ' ಚಿತ್ರದ ಅಭಿನಯಕ್ಕಾಗಿ ರಾಷ್ಟ್ರಪ್ರಶಸ್ತಿ. 'ಎರಡು ಮುಖ'(1969), 'ಮನಸ್ಸಿನಂತೆ ಮಾಂಗಲ್ಯ' (1976), 'ಧರ್ಮ ದಾರಿ ತಪ್ಪಿತು'(1981), 'ಮಸಣದ ಹೂವು' (1985),'ಆನಂದ್'(1986) ಚಿತ್ರಗಳ ಅಭಿನಯಕ್ಕಾಗಿ ಆರು ಬಾರಿ ರಾಜ್ಯ ಪ್ರಶಸ್ತಿ, ಫಿಲಂಫೇರ್ ಪ್ರಶಸ್ತಿ, ನಾಗರಹಾವು ಸಿನಿಮಾದಲ್ಲಿ ದುರ್ಗದ 'ಒನಕೆ ಓಬವ್ವ' ಪಾತ್ರದ ಅಭಿನಯ ಅವರನ್ನು ಕನ್ನಡಿಗರ ಮನದಲ್ಲಿ ಅಚ್ಚಳಿಯದೆ ನಿಲ್ಲಿಸಿದೆ.

Historic Hutridurga

Uttari Betta also known as Hutridurga in the Kunigal taluk of Tumakuru District. The villagers in the many villages srrrounding the hill go about their daily lives in the shadow of the hill which bears silent testimony to the passage of time and history. A history that dates back to the stone age. The Uttari Betta that rises to a height of about 3,708 feet has resonated to the echoes of the footsteps of the Neolithic man more than 3,000 years ago as well as to those of Nadaprabhu Kempegowda and the foreces of Tippu Sultan and the British. The connection with Kempegowda, the founder of Bengaluru is established by a stone inscription found near the ruins of the Hutridurga Fort. The inscription says that the Hutridurga Fort was constructed by one Chennamma Nayaka in 1534 under the orders of Kempegowda. The Hutridurga Fort predates construction of the Bangalore Fort and the Bangalore pete which were the precursors to the Bengaluru we now know. It is also one of the Navadrugas which are the nine forts found around Bengaluru. This is a spring that has a perennial water supply from an unknown source. The ruins of Hutridurga Fort and the ecosystem of the hill cry for attention to emerge from the shadows of oblivion.

Collection by : Dr. V. Prashant, NYK




Fall of this serene splendour

Chunchanakatte Falls and the nearby Kodanda Rama Temple in Krishnarajanagar taluk near Mysure. The ancient temple amidst thousands of acres of greenery which is home to some rare flora and fauna, is sacred to the Hindus. The ancient temple is part of folklore today as numerous fascinating stories, myths to some amd mysteries. At this temple in Chunchanakatte, Goddess Sita is to the right of Lord Rame, brother Laxman to his left and there is no sigh of Lord Hanuman. Here River Cauvery is in full splendour as the water cascades from about 20 meters, splits into two tributaries before flowing as one into the KRS Dam. The sight is one to behold as the colour of water turns yellowish as time and the milkwhite foam lends its own texture to the picture.

Collection by : Dr. Sathyamangala Mahadeva





ಶ್ರದ್ಧಾಂಜಲಿ

ಡ್ಯಾನಿಶ್ ಸಿದ್ದಿಕಿ (19 ಮೇ 1983 – 15 ಜುಲೈ 2021



ಮುಂಬೈ ಮೂಲದ ಭಾರತೀಯ ಫೋಟೋ–ಪತ್ರಕರ್ತ, ರಾಷ್ಟ್ರೀಯ ರಾಯಿಟರ್ಸ್ ಮಲ್ಟಿಮೀಡಿಯಾ ತಂಡದ ಮುಖ್ಯಸ್ಥರಾಗಿದ್ದ ಡ್ಯಾನಿಶ್ ಸಿದ್ದಿಕಿ ಅವರ ಭೀಕರ ಹತ್ಯೆಯಾಗಿದೆ. ರೋಹಿಂಗ್ಯಾ ನಿರಾಶ್ರಿತರ ಬಿಕ್ಕಟ್ಟನ್ನು ದಾಖಲಿಸಿದ್ದಕ್ಕಾಗಿ ರಾಯಿಟರ್ಸ್ ತಂಡದ ಭಾಗವಾಗಿ, ವಿಶಿಷ್ಟ ಛಾಯಾಗ್ರಹಣಕ್ಕಾಗಿ 2018ರ ಪುಲಿಟ್ಜರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. 2021ರಲ್ಲಿ ಪಾಕಿಸ್ತಾನದ ಗಡಿ ದಾಟುವ ವೇಳೆ ಆಫ್ಘನ್ ಭದ್ರತಾ ಪಡೆಗಳು ಮತ್ತು ತಾಲಿಬಾನ್ ಪಡೆಗಳ ನಡುವಿನ ಘರ್ಷಣೆಯನ್ನು ಚಿತ್ರೀಕರಿಸುವ ಸಂದರ್ಭದಲ್ಲಿ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. 2007 ರಲ್ಲಿ ಜಾಮಿಯಾದಲ್ಲಿನ ಎ.ಜೆ.ಕೆ. ಸಮೂಹ ಸಂವಹನ ಸಂಶೋಧನಾ ಕೇಂದ್ರದಿಂದ ಸಮೂಹ ಸಂವಹನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು. ಟಿವಿ ಟುಡೇ ನೆಟ್ ವರ್ಕ್‌ಗೆ ಸೇರುವ ಮೊದಲು



ಸಿದ್ದಿಕಿ ಹಿಂದೂಸ್ತಾನ್ ಟೈಮ್ಸ್‌ನ ವರದಿಗಾರರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ ಫೋಟೋ ಪತ್ರಕರ್ತರಾಗಿ 2010ರಲ್ಲಿ ರೈಟರ್ಸ್ ಇಂಟರ್ನ್ ಆಗಿ ಸೇರಿದ್ದರು. ಸಿದ್ದಿಕಿ ಅಂದಿನಿಂದ ಮೊಸುಲ್ ಯುದ್ಧ, ನೇಪಾಳ ಭೂಕಂಪ, ರೋಹಿಂಗ್ಯಾ ನಿರಾಶ್ರಿತರ ಬಿಕ್ಕಟ್ಟು, ಹಾಂಗ್ ಕಾಂಗ್ ಪ್ರತಿಭಟನೆಗಳು, ದೆಹಲಿ ಗಲಭೆಗಳು ಮತ್ತು ದಕ್ಷಿಣ ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್‌ನ ಕೋವಿಡ್–19 ಸಾಂಕ್ರಾಮಿಕದ ಕುರಿತಾದ ಛಾಯಾಚಿತ್ರಗಳನ್ನು ಸೆರೆಹಿಡಿದಿದ್ದರು. ಜುಲೈ 2021ರಿಂದ ಅವರು ತಾಲಿಬಾನ್ ದಾಳಿಯನ್ನು ದಾಖಲಿಸಲು ಆಫ್ಘನ್ ವಿಶೇಷ ಪಡೆಗಳೊಂದಿಗೆ ಎಂಬೆಡೆಡ್ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದರು.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

The scalpel moved down through his chest, exposing the rib cage, then down to the abdomen to get at the viscera. Carefully, Dr Jeanette reached in with the scalpel to free one of the ribs, but as she did so the scalpel slipped. It sliced cleanly through the rubber glove on her other hand and into her finger. Blood spurted from the wound. Quickly she jerked her hand out of the bloody chest cavity, went to the scrub sink and took her slashed rubber glove off. She ran water freely over the cut. Then she scrubbed it with surgical soap, flooded it with antiseptic and bound it carefully with gauze. She put on a new rubber glove and went back to the autopsy.

After completing his rounds, Hal White visited the operating room to see if he could help with the autopsy. But the job was finished, and Dr Jeanette was alone. "Hal," she said, "I've been in Africa for 16 years. I've made an awful lot of stupid mistakes in that time. The Lord has had to cover them up for me. And I have just made another one." She held up her bandaged finger and asked him not to alarm the staff by saying anything about it. The next morning, Dr Jeanette sent a letter and a large vacuum container of iced specimens to Don Carey, director of the University of Ibadan's Virus Research Laboratory. The letter was matter-of-fact, but Carey knew Dr Jeanette too well to be taken in by its under statement. Alarmed, he immediately cabled news of the outbreak to Yale, asking if it was possible to get a shipment of two units of Jordi Casals' serum with its antibodies as quickly as possible. Then, with Graham Kemp, one of his best virologists, he started setting up tissue cultures. New cases continued to arrive at the Jos hospital, all with the same ominous symptoms. The list had now grown to 19. Ten had died. There were no facilities for real isolation. Even if there had been, the staff was too small and overburdened to follow complex isolation procedures.

In Jos, there was mounting terror. Meetings were cancelled. Social engagements dwindled. Air traffic into the city thinned to a trickle. Travellers would speed through the town, windows closed regardless of the heat. Water was boiled for an hour, rather than the usual 20 minutes, then filtered twice. Great caution was taken to avoid mice or other rodents. Anyone coming down with flu or a sore throat was convinced he had Lassa. Jos was a besieged city.

On the evening of February 3, Dr Jeanette went to bed with a severe chill. Her muscles ached, and her back was particularly painful. The next morning, feeling feverish, she got up, dressed, and made the rounds of the wards, checking her charts. She avoided going near any of her patients and colleagues. Then she went home and rested. A week after her first symptoms appeared, her temperature rose to nearly 40 degrees centigrade (nearly 104 F). Hal white insisted that she go to the hospital. He put her in a private room, and ordered that no one was to enter without cap, gown and mask. It was the closest thing to an isolation unit that could be improvised.


To be continued...

ಪುಸ್ತಕ ಪರಿಚಯ

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ),

ಇದು ಭಾರತ, ಇದು ಹಿಂದೂಸ್ಥಾನ, ಇದು ಇಂಡಿಯಾ

ಕೃತಿಕಾರರು : ಆಗುಂಬೆ ಎಸ್. ನಟರಾಜ್



ಭಾರತವನ್ನು ಆಕ್ರಮಿಸಿಕೊಂಡು ಆಳ್ವಿಕೆ ಮಾಡಲು ಗ್ರೀಕರು, ಮುಸಲ್ಮಾನರು, ಯೂರೋಪಿಯನ್ನರು ಅದೆಷ್ಟೇ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ ಎನ್ನುವ ಇತಿಹಾಸದ ಅನೇಕ ದಾಖಲೆಗಳನ್ನು ಪ್ರಸ್ತಾಪ ಮಾಡುವ **ಇದು ಭಾರತ, ಇದು ಹಿಂದುಸ್ತಾನ, ಇದು ಇಂಡಿಯಾ** ಎಂಬ (302 ಪುಟಗಳ) ಸುಧೀರ್ಘ ವಿವಿಧ ಲೇಖನಗಳ ಗ್ರಂಥವನ್ನು ಆಗುಂಬೆ ನಟರಾಜು ಅವರು ಬರೆದಿದ್ದಾರೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನಧರ್ಮಗಳು ದಾನ ಧರ್ಮಗಳ ಹೆಸರಿನಲ್ಲಿ ಮಾನವ ತನ್ನ ಅಂತ್ಯವನ್ನು ಕಾಣುತ್ತಿರುವ ಅನೇಕ ಸನ್ನಿವೇಶಗಳನ್ನು ಕೃತಿಯಲ್ಲಿ ಎಳೆಎಳೆಯಾಗಿ ಬಿಡಿಸಿಟ್ಟಿರುವುದನ್ನು ಕಾಣಬಹುದು. ಬಾಂಗ್ಲಾ–ಪಾಕಿಸ್ತಾನ ದೇಶಗಳು ವಿಭಜನೆಗೊಳ್ಳಲು ಆದ ಕಾರಣಗಳನ್ನು ತಿಳಿಸುವ ಈ ಕೃತಿಯು ಪಂಜಾಬ್ ಪ್ರಾಂತ್ಯದ 'ವಾಘಾ' ಗಡಿಯ ವಿಷಯವನ್ನು ಮತ್ತು ಇಸ್ಲಾಂ ಧರ್ಮದ ರಾಜರು, ಸಾಮಂತರುಗಳ ಅಧಿಕಾರದ ಹಪಾಹಪಿತನವನ್ನೂ, ಹಾಗೂ ಭಾರತೀಯರಲ್ಲಿನ ಒಡಕುಗಳನ್ನು ಉಪಯೋಗಿಸಿಕೊಂಡು ಪರಧರ್ಮೀಯರು ಭಾರತವನ್ನು ಹೇಗೆ ಆಕ್ರಮಿಸಿಕೊಳ್ಳಲೆತ್ನಿಸುತ್ತಾರೆ ಎಂಬುದನ್ನು ಇತಿಹಾಸದ ಆಳ–ಅಗಲವನ್ನು ಸುಧೀರ್ಘವಾಗಿ ಅಧ್ಯಯನ ಮಾಡಿರುವುದರ ದ್ಯೋತಕವೇ ಈ ಕೃತಿ ಆಗಿದೆ. ಭಾರತ ಮತ್ತು ಇತರ ರಾಷ್ಟ್ರಗಳ ನಡುವೆ ನಡೆದ ಮೊದಲ ಮತ್ತು ಎರಡನೇ ಮಹಾಯುದ್ಧಗಳ ಚಿತ್ರಣವನ್ನೂ ಗಾಂಧೀಜಿ ಅವರು ಸ್ವಾತಂತ್ರ್ಯ ಚಳುವಳಿಗೆ ಪದಾರ್ಪಣೆ ಮಾಡುವುದು ಸೇರಿದಂತೆ, ಸ್ವಾತಂತ್ರ್ಯ ಪೂರ್ವ–ಸ್ವಾತಂತ್ರ್ಯಾ ನಂತರದ ಹತ್ತಾರು ವಿದ್ಯಮಾನಗಳನ್ನು, ವೈಚಾರಿಕ ಚಿಂತನೆಗಳನ್ನು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರ ಸಾತ್ವಿಕ ವಿಚಾರಧಾರೆಗಳನ್ನು ತಮ್ಮ ಬದುಕಿನಲ್ಲಿ ಆಳವಡಿಸಿಕೊಳ್ಳುವರಾಗಿದ್ದರೂ ಎಂದಿಗೂ ಹಿಂದೂ ಧರ್ಮ ನಾಶವಾಗುವಿಕೆಗೆ ಕಾರಣವಾಗುವವರ ಆಕ್ರೋಶವ್ಯಕ್ತ ಪಡಿಸುತ್ತಲೇ ಮಾನವೀಯ ಧರ್ಮದ ಕಡೆಗೆ ಒಲವುಳ್ಳವರಾಗಿದ್ದಾರೆ. ಇತಿಹಾಸ, ಧರ್ಮ, ವೈಚಾರಿಕತೆ, ಜೀವನ ಚರಿತ್ರೆ, ಪ್ರವಾಸ ಕಥನ ಇತರ ಸರಿಸುಮಾರು 33ಕ್ಕೂ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ನೀಡಿರುವ ಹಿರಿಯರಾದ ಶ್ರೀ ಆಗುಂಬೆ ಎಸ್. ನಟರಾಜ್ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ.

Chronology of events of personal & Public life of Kasturba Gandhi

(year wise - from 1869)

1922- March 23 : Kasturba dictates an appeal published in Young India to give up foreign cloth, to spin and produce yarn and stop trading in foreign goods.

1930 : Kasturba involves actively in civil disobedience campaigns.

1931 : Indian women in South Africa donate money to Kasturba in support of her work against foreign goods.

1932 : Kasturba Gandhi is arrested in a new civil disobedience campaign and sentenced six weeks in prison (Over the next two years, she was arrested and taken to jail for another five times Kasturba Gandhi represents her husband at the opening of an anti Untouchability conference in Madras. From there, she went on a tour of the region to plead for Harijan rights.

1933 : Kasturba Gandhi was arrested and sent back to jail presumably for disregarding a government warning to refrain from civil disobedience.

1933 - July : Disbanding of the Sabarmati Ashram.

1934 - June : Kasturba and M.K. Gandhi was riding in a car to municipal hall in Poona, when someone threw a homemade bomb at the car.

1936 : A new Ashram was founded and named Sevagram.

1939 : January, Kasturba leaves for Rajkot to support women, protesting against the rule of Thakur,

February 3 : Kasturba is arrested, and kept in solitary confinement.

February 6 : M.K. Gandhi praised to his wife's courage by publishing "Why Kasturba Gandhi?" an article in Harijan newspaper.

1942 - August : M.K. Gandhi and Kasturba left for Bombay for All-India Congress Committee.

August 9 : Kasturba Gandhi went to Shivaji Park to address a mass meeting instead of her husband and she was arrested.

1944 - January : Kasturba suffers from two times heart attacks.

February 22 : Kasturba dies in detention at Aga Khan Palace at the age of seventy-four.

Collection by : Akila Vidyasandra

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಮೇ. ಜೂನ್, ಜುಲೈ ಬಾಪು ಪ್ರಪಂಚ ಸಂಚಿಕೆ ವಿಶೇಷವಾಗಿದ್ದು, ಪ್ರತಿಯೊಂದು ಲೇಖನವು ಆಸಕ್ತಿದಾಯಕವಾಗಿದೆ. ಡಾ. ಎಚ್.ಎಸ್. ದೊರೆಸ್ವಾಮಿ ಅವರ ಶ್ರದ್ಧಾಂಜಲಿ ಕುರಿತು ಲೇಖನ ಸಕಾಲಿಕವಾಗಿದೆ. ಇಂತಹ ಅತ್ಯಪೂರ್ವ ಸಂಚಿಕೆಯನ್ನು ಹೊರತಂದ ಸಂಪಾದಕ ಬಳಗಕ್ಕೆ, ಅದರಲ್ಲೂ ಶ್ರಮಿಸಿದ ಗೌ. ಕಾರ್ಯದರ್ಶಿಗಳವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಕೆ. ವನಜಾಕ್ಷಿ, ಬೆಂಗಳೂರು

ಗಾಂಧೀ ಭವನದಿಂದ ಪ್ರಕಟವಾದ ಬಾಪು ಪ್ರಪಂಚ ವಿಶೇಷ ಸಂಚಿಕೆಯು ಇತಿಹಾಸದಲ್ಲಿ ನಡೆದ ಅನೇಕ ಮುಖ್ಯ ಘಟನೆಗಳು, ಮಹಾಪುರುಷರ ಪರಿಚಯ, ಸಾಧನೆ, ಗಾಂಧೀಜಿ ಅವರ ಕುರಿತಾದ ಲೇಖನಗಳು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ, ಆರೋಗ್ಯದ ಪಾಲನೆ ಕುರಿತಾದ ಲೇಖನಗಳು ಓದುಗನಲ್ಲಿ ಆಸಕ್ತಿ ಮೂಡಿಸುವುದರ ಜೊತೆಗೆ, ಬರವಣಿಗೆಗೂ ಪ್ರೇರೇಪಿಸುತ್ತದೆ.

ಮಹೇಶ್, ಬೆಂಗಳೂರು

ಬಾಪು ಪ್ರಪಂಚ ಮೇ, ಜೂನ್, ಜುಲೈ ವಿಶೇಷ ಸಂಚಿಕೆಯಲ್ಲಿ ಡಾ. ಹೆಚ್. ಎಸ್. ದೊರೆಸ್ವಾಮಿ ಅವರ ಬಗ್ಗೆ ಗಾಂಧಿ ಭವನದ ಕಾರ್ಯದರ್ಶಿಗಳು ಬರೆದ ಲೇಖನ ಅತ್ಯುತ್ತಮವಾಗಿದೆ ಮತ್ತು ವಿಶ್ಲೇಷಣಾತ್ಮಕವಾಗಿದೆ.

ವಿ.ಎನ್. ತಿಪ್ಪನಗೌಡ, ಹಾವೇರಿ

ಜುಲೈ ತಿಂಗಳ ವಿಶೇಷ ಸಂಚಿಕೆಯ ಮುಖಪುಟದಲ್ಲಿ ಡಾ. ಎಚ್.ಎಸ್. ದೊರೆಸ್ವಾಮಿಗಳವರ ಅಪರೂಪದ ಚಿತ್ರವನ್ನು ಹಾಕಿದ್ದಾರೆ. ಅವರೇ ಕಣ್ ಮುಂದೆ ನಿಂತಿರುವಂತಿರುವ ಕಲಾತ್ಮದ ಚಿತ್ರಕ್ಕಾಗಿ ಸಂಪಾದಕ ಮಂಡಳಿ ಅವರಿಗೆ ವಂದನೆಗಳು.

ಅಖಿಲಾ ವಿದ್ಯಾಸಂದ್ರ, ಚನ್ನಪಟ್ಟಣ

ಕೇವಲ ಒಂದೇ ಒಂದು ಪುಟದಲ್ಲಿ ಕಾಣದ ಕ್ರಿಮಿಯ ವಿವಿಧ ರೂಪಾಂತರಗಳ ಹಿಡಿತಕ್ಕೆ ನಲುಗಿ ಹೋಗಿರುವ ವಿಶ್ವದ ವಿವಿಧ ಕ್ಷೇತ್ರಗಳಲ್ಲಿ ತಲೆದೂರಿರುವ ಕಷ್ಟ-ನಷ್ಟಗಳು, ಸಾವು-ನೋವುಗಳು, ಜನಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದ ಗುರುತರ ಜವಾಬ್ದಾರಿ ಹೊತ್ತ ಹಾಗೂ ನಾವೇ ಆರಿಸಿರುವ ಸರ್ಕಾರದ ನಿರ್ಲಕ್ಷತೆ, ನಿರ್ಧಯತೆ, ಮೋಸ, ವಂಚನೆಯ ಪರದೆಯನ್ನು ಪಕ್ಕಕ್ಕೆ ಸರಿರಿ, ಹಾಗೂ ನಮ್ಮೆಲ್ಲರ ಧ್ವನಿಯನ್ನು 'ಅಕ್ಷರ'ಗಳಲ್ಲಿ ಹೊರಹಾಕಿರುವ ನಿಮ್ಮ ಧೈರ್ಯ ನಿರ್ಭಿಕಿಗೆ ನನ್ನ ಅಬಿನಂದನೆಗಳು. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ನಿಸರ್ಗವನ್ನು ನಾಶ ಮಾಡಿ ತನ್ನ ಅವನತಿಗೆ ಕಾರಣವಾಗಿದ್ದಾನೆ. ಪರಿಸರಪ್ರಜ್ಞೆಯಿಂದ ಇನ್ನಾದರೂ ಪ್ರಕೃತಿಯನ್ನು ಉಳಿಸುವ ಪ್ರಯತ್ನದಿಂದಾಗಿ ಸಕಲ ಜೀವರಾಶಿಗಳು ಬದುಕಲು ಪ್ರಯತ್ನಿಸಬೇಕಿದೆ. ಕರೋನಾ ಸಮಯದಲ್ಲಿ ಹಗಲಿರುಳೆನ್ನದೆ ದುಡಿದ ವೈದ್ಯರು, ದಾದಿಯರು, ಸಂಘ ಸಂಸ್ಥೆಗಳವರಿಗೆ ನನ್ನ ಅಭಿನಂದನೆಗಳು

ಕೆ. ವನಜಾಕ್ಷಿ, ಬೆಂಗಳೂರು

ಗಾಂಧಿ ಭವನದ ಕಾರ್ಯಕ್ರಮಗಳು



ಹಿರಿಯ ಗಾಂಧಿವಾದಿ ಜಿ. ಮಾದೇಗೌಡರು ಅನಾರೋಗ್ಯದಿಂದ ಮಂಡ್ಯದ ಜಿ. ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿದ್ದಾಗ ದಿ. 12.07.2021 ರಂದು ಗಾಂಧಿ ಭವನದ ಕಾರ್ಯದರ್ಶಿ, ಇಂದಿರಾ ಕೃಷ್ಣಪ್ಪ ಅವರು ಭೇಟಿ ಮಾಡಿದ ಸಂದರ್ಭದ ಚಿತ್ರ.



ಮಂಡ್ಯದ ಗಾಂಧಿಭವನದಲ್ಲಿ ದಿ. 28.7.2021ರಂದು ಗಾಂಧೀವಾದಿ ಜಿ. ಮಾದೇಗೌಡರ 11ನೇ ದಿನದ ಶ್ರದ್ಧಾಂಜಲಿ ಕಾರ್ಯದಲ್ಲಿ ಬೆಂಗಳೂರು ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ. ಪಿ. ಕೃಷ್ಣ ಅವರು ಪುಷ್ಪ ನಮನ ಸಲ್ಲಿಸಿದ ಚಿತ್ರ.



ಬಾಗಲಕೋಟೆ ಜಿಲ್ಲೆಯ ಚುಂಡಕಂಡಿಯಲ್ಲಿ ಹಿರಿಯ ಗಾಂಧಿವಾದಿಗಳಾದ ತಮ್ಮಣ್ಣಪ್ಪ ಬುದ್ನಿ ದಂಪತಿಗಳನ್ನು ದಿ. 24/07/2021 ರಂದು ಸನ್ಮಾನಿಸಲಾಯಿತು. ಚಿತ್ರದಲ್ಲಿ ಕ.ಗಾಂ.ಸ್ಮಾ. ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ,ಹಿರಿಯ ಸಾಹಿತಿ ಬಿ.ಆರ್.ಪೊಲೀಸ್ ಪಾಟೀಲ್, ರಾಷ್ಟ್ರೀಯ ಯುವ ಯೋಜನೆಯ ಡಾ.ವಿ. ಪ್ರಶಾಂತ ಹಾಗೂ ಮಹಬೂಬ್ ಅವರಿದ್ದಾರೆ.



ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿರುವ ಮಾತಾ ರುಕ್ಮಿಣಿದೇವಿ ವಾತ್ಸಲ್ಯಧಾಮದಲ್ಲಿರುವ ಹಿರಿಯ ಗಾಂಧಿವಾದಿ ಡಾ. ಮೀರಾ ತಾಯಿ ಕೊಪ್ಪಿಕರ ಅವರನ್ನು ದಿ. 24/07/2021 ರಂದು ಕ.ಗಾಂ.ಸ್ಮಾ. ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರು ಸನ್ಮಾನಿಸಿದರು. ಸಾಹಿತಿ ಬಿ.ಆರ್. ಪೊಲೀಸ್ ಪಾಟೀಲ್, ರಾ.ಯು.ಯೋ. ಡಾ. ಪ್ರಶಾಂತ, ನರಸನಗೌಡ, ಸಂಗಮೇಶ ಮತ್ತಿತರರು ಭಾಗವಹಿಸಿದ್ದರು.

ಗಾಂಧಿ ಭವನದ ಕಾರ್ಯಕ್ರಮಗಳು





ಗಾಂಧಿ ಭವನದಲ್ಲಿ ದಿ.05.08.201ರಂದು ಆಯೋಜಿಸಲಾಗಿದ್ದ ಒಂದು ದಿನದ ಶ್ರಮದಾನ ಶಿಬಿರದಲ್ಲಿ ಯಲಹಂಕ ಶೇಷಾದ್ರಿಪುರಂ ಪದವಿ ಕಾಲೇಜಿನ ರಾ.ಸೇ.ಯೋ.ಯ ಸ್ವಯಂ ಸೇವಕರು ಭಾಗವಹಿಸಿದ್ದರು. ಮತ್ತು ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ನವೀನ್ ಅವರಿಗೆ ಗೌರವಿಸಿದ ಸಂದರ್ಭದಲ್ಲಿ ಗಾಂಧಿ ಭವನದ ಅಧ್ಯಕ್ಷರಾದ ಡಾ. ವೂಡೇ. ಪಿ. ಕೃಷ್ಣ, ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಎನ್.ವೈ.ಪಿಯ ಡಾ. ಪ್ರಶಾಂತ ಹಾಗೂ ವಿದ್ಯಾರ್ಥಿಗಳು.



ಗಾಂಧಿ ಭವನದಲ್ಲಿ ದಿ. 5.8.2021ರಂದು ನಡೆದ ಒಂದು ದಿನದ ಶ್ರಮದಾನದ ಅಂತಿಮಘಟ್ಟದಲ್ಲಿ ಅನಿಸಿಕೆ, ಅಭಿಪ್ರಾಯ ಮಂಡನೆ, ವಿಚಾರ ವಿನಿಮಯದಲ್ಲಿ ಎನ್.ವೈ.ಕೆಯ ವಿನಯ್‌ಕುಮಾರ್, ಕಾರ್ಯದರ್ಶಿ, ಇಂದಿರಾ ಕೃಷ್ಣಪ್ಪ, ಬೆಂ.ನ. ಜಿಲ್ಲೆಯ ಅಧಿಕಾರಿ, ಡಿಂಪಲ್ – ಕಾರ್ಯಕ್ರಮಾಧಿಕಾರಿ, ಎನ್‌ಎಸ್‌ಎಸ್ ಅಧಿಕಾರಿ ನವೀನ್, ಡಾ. ರಾಮಲಿಂಗೇಶ್ವರ, ಡಾ. ಮುನಿಯಪ್ಪ, ಡಾ. ಪ್ರಶಾಂತ್ ಹಾಗೂ [illegible]



ನೆಹರು ಯುವ ಕೇಂದ್ರ ಹಾಗೂ ಕ.ಗಾ.ಸ್ಮಾರಕ ನಿಧಿ ಇವರು ಸಂಯುಕ್ತವಾಗಿ ದಿ. 05/08/2021 ರಂದು ಆಯೋಜಿಸಲಾದ 15 ದಿನಗಳ ಸ್ವಚ್ಛತಾ ಅರಿವು ಪಾಕ್ಷಿಕ ಕಾರ್ಯಕ್ರಮದಲ್ಲಿ ನೆಹರು ಯುವ ಕೇಂದ್ರದ ಬೆಂ. ನಗರ ಜಿಲ್ಲೆಯ ಅಧಿಕಾರಿಯಾದ ವಿನಯ್ ಕುಮಾರ್ ಅವರನ್ನು ಇಂದಿರಾ ಕೃಷ್ಣಪ್ಪ ಅವರು ಗೌರವಿಸಿದರು.



ದಿ. 08.08.2021ರಂದು ಗಾಂಧಿಭವನದಲ್ಲಿ ಆಯೋಜಿಸಲಾಗಿದ್ದ ಹಿರಿಯ ಗಾಂಧೀವಾದಿ ಎಚ್.ಎಸ್. ದೊರೆಸ್ವಾಮಿ ಅವರ ಶ್ರದ್ಧಾಂಜಲಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೈ.ಎಸ್.ವಿ. ದತ್ತ ಅವರು ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ವೂಡೇ ಪಿ. ಕೃಷ್ಣ ಅವರು ಚಿತ್ರದಲ್ಲಿದ್ದಾರೆ.



"ಕ್ವಿಟ್ ಇಂಡಿಯಾ ಚಳುವಳಿ" ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವು ನೀಡಿದ ದಿನದ ಸ್ಮರಣೆಗಾಗಿ ದಿ. 09/08/2021 ರಂದು 75 ಸಸಿಗಳನ್ನು ನೆಹರು ಯುವ ಕೇಂದ್ರ ಬೆಂಗಳೂರು ಜಿಲ್ಲೆ ಹಾಗೂ ಕ.ಗಾಂ.ಸ್ಮಾ.ನಿಧಿ ವತಿಯಿಂದ ದೇವನಹಳ್ಳಿಯ ಗುಡುವನಹಳ್ಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ 75 ಸಸಿಗಳನ್ನು ನೆಡಲಾಯಿತು.



ಗಾಂಧಿ ಭವನದಲ್ಲಿ ದಿ. 10/08/2021 ರಂದು ಸಿಬ್ಬಂದಿ ವರ್ಗದವರಿಗೆ ರಾಷ್ಟ್ರ ಧ್ವಜದ ಬಗ್ಗೆ ಮಾಹಿತಿ, ಧ್ವಜಾರೋಹಣದ ತರಬೇತಿಯನ್ನು ನೀಡಲಾಯಿತು. ಎಸ್.ಪ್ಯಾರಿಜಾನ್, ಮುಖ್ಯಸ್ಥರು, ಸೇವಾದಳ ಇವರು ತರಬೇತುದಾರರಾಗಿದ್ದರು. ಇಂದಿರಾ ಕೃಷ್ಣಪ್ಪ ಹಾಗೂ ಗಾಂಧಿ ಭವನದ ಸಿಬ್ಬಂದಿ ವರ್ಗದವರು ಚಿತ್ರದಲ್ಲಿದ್ದಾರೆ.

ಪತ್ರಿಕಾ ವರದಿಗಳು



ಅಮೃತ ಮಹೋತ್ಸವ ಮತ್ತು ಫಿಟ್ ಇಂಡಿಯಾ ಫ್ರೀಡಂ ರನ್ ಕಾರ್ಯಕ್ರಮಕ್ಕೆ ಚಾಲನೆ

ಸಂಜೆ ಸಮಯ ಸುದ್ದಿ

ಆನೇಕಲ್: ಗಾಂಧಿ ಭವನದಲ್ಲಿ ನೆಹರು ಯುವ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಆಜಾದಿಕ ಅಮೃತ ಮಹೋತ್ಸವ ಮತ್ತು ಫಿಟ್ ಇಂಡಿಯಾ ಫ್ರೀಡಂ ರನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಷ್ಟ್ರೀಯ ಯುವ ಪ್ರಾಜೆಕ್ಟ್ ನ ಫೌಂಡರ್ ಡಾ|| ಎಸ್. ಎನ್. ಸುಬ್ಬಾರಾವ್ ರವರು. ... ಯುವಜನರಲ್ಲಿ ದೇಶಾಭಿಮಾನ ಬೆಳೆಸುವ ... ಜೊತೆಗೆ ಯುವಕರಲ್ಲಿ ತಮ್ಮ ದೈಹಿಕ ... ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇನ್ನು ಇದೇ ಸಂಧರ್ಭದಲ್ಲಿ ... ಗಾಂಧಿ ಭವನದಿಂದ ಆನಂದ್ ರಾವ್ ಸರ್ಕಲ್ ವರೆಗೂ ... ಜನ ಯುವಕರು ಘೋಷಣೆ ಕೂಗುತ್ತಾ ಕಾಲ್ನಡಿಗೆ ... ನಡೆಸಿದರು.

... ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ... ರಾಷ್ಟ್ರೀಯ ಅಧ್ಯಕ್ಷರಾದ ಎಸ್.ಆರ್. ... , ಗಾಂಧಿ ಪ್ರತಿಷ್ಠಾನ ಅಧ್ಯಕ್ಷ ಡಾ|| ಕೃಷ್ಣ, ಗಾಂಧಿ ...

ಖರ್ಗೆ ಪಕ್ಷನಿಷ್ಠೆ, ಬದ್ಧತೆ ಅಚಲ

ನಾಡೋಜ ಪ್ರೊ. ಹಂಪನಾ ಅಭಿಮತ | ಬಾಬಾಸಾಹೇಬರೆಡೆಗೆ ಕೃತಿ ಬಿಡುಗಡೆ

ಬಾಬಾ ಸಾಹೇಬರೆಡೆಗೆ ಕೃತಿ ನಾಳೆ ಲೋಕಾರ್ಪಣೆ

ಬೆಂಗಳೂರು: ಗಾಂಧಿ ಭವನದಲ್ಲಿ ಬುಧವಾರ (ಜು. 21) ಹಮ್ಮಿಕೊಂ... ಕಾರ್ಯಕ್ರಮದಲ್ಲಿ ಗುಲ್ಬರ್ಗಾ ವಿವಿ ಕನ್ನಡ ಅಧ್ಯಯನ ಕೇಂದ್ರದ ನಿ... ಪ್ರೊ. ಎಚ್.ಟಿ.ಪೋತೆ ಅವರ 'ಬಾಬಾಸಾಹೇಬರೆಡೆಗೆ' ಶ್ರೀ ಮಲ್ಲಿಕಾ... ಖರ್ಗೆ ಅವರ ಜೀವನಕಥನದ ಕೃತಿ ಬಿಡುಗಡೆ ಮತ್ತು ವಿಶೇಷ ಉಪ... ಆಯೋಜಿಸಲಾಗಿದೆ.

ಬೆಳಗ್ಗೆ 10.30ಕ್ಕೆ ನಡೆಯಲಿ... ಸಮಾರಂಭದಲ್ಲಿ ಗಾಂಧಿ ಸ್ಮಾರಕ ನಿಧಿ ಅ... ಡಾ. ವೂಡೇ ಪಿ. ಕೃಷ್ಣ ಕೃತಿ ಲೋಕಾರ್ಪ... ಮಾಡುವರು. ಪ್ರೊ. ಹಂಪ ನಾಗರಾಜ... ಅಧ್ಯಕ್ಷತೆ ವಹಿಸಲಿದ್ದು, ಸಂಸ್ಕೃತ ವಿವಿ ವಿಶ್ರಾಂ... ...ಪುರಂ ಜಿ. ವೆಂಕಟೇಶ... ...ಷ್ಠಾನದ ಅಧ್ಯಕ್ಷ ಜೀರಿ... ...ಲಿದ್ದಾರೆ. ಕವಿ ಹಾಗು... ಡಾ.ಮೂಡ್ನಾಕೂಡು... ಬಿ.ಆರ್.ಅಂಬೇಡ್ಕರ್... ...ಅಧ್ಯಯನಗಳನ್ನು ...ಟಿಸಿದೆ. ಖರ್ಗೆ ಅವರ ...ರ್ಮಿಕ, ಸಾಮಾಜಿಕ ...ನಾಗಿ ಮಾಡಿರುವ ... ವರವಟ್ಟಿಯಿಂದ

ಮಲ್ಲಿಕಾರ್ಜುನ

ಗುರುವಾರ • ಜುಲೈ 22, 2021

ಪ್ರಜಾವಾಣಿ

ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ 'ಬಾಬಾ ಸಾಹೇಬರೆಡೆಗೆ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಕೃತಿಯನ್ನು ಹಂಪ ನಾಗರಾಜಯ್ಯ ಬಿಡುಗಡೆ ಮಾಡಿದರು. ಮಲ್ಲೇಪುರಂ ಜಿ. ವೆಂಕಟೇಶ್, ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ 'ಬಾಬಾ ಸಾಹೇಬರೆಡೆಗೆ' (ಲೇಖಕ ಪ್ರೊ.ಎಚ್.ಟಿ. ಪೋತೆ) ಕೃತಿಯನ್ನು ಗಾಂಧಿ ಭವನದಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕಲಬುರಗಿಯ ... ಪ್ರಕಾಶನದ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ... ಮಲ್ಲಿಕಾರ್ಜುನ ಖರ್ಗೆ ಅವರ ... ಚರಿತ್ರೆ ಮಾತ್ರವಲ್ಲದೇ, ಅವರ ... ಸಮಗ್ರ ಮಾಹಿತಿ ಒಳಗೊಂಡ ... ಎಂದು ಅಭಿಪ್ರಾಯ ...

ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು. ಗಾಂಧಿ ಶಾಂತಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ...

ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು 'ಪ್ರಸ್ತುತ ಭಾರತ: ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್' ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದೊರೆಸ್ವಾಮಿಗೆ ಶ್ರದ್ಧಾಂಜಲಿ



ಗಾಂಧಿ ಭವನದಲ್ಲಿ ದಿ. 21.07.2021ರಂದು ನಡೆದ "ಬಾಬಾ ಸಾಹೇಬರೆಡೆಗೆ" ಕೃತಿ (ರಾಜ್ಯಸಭಾ ಸದಸ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ) ಬಿಡುಗಡೆ ಸಮಾರಂಭದಲ್ಲಿ ಹಂಪನಾ ಲೇಖಕರು, ಪ್ರೊ. ಎಚ್.ಟಿ. ಪೋತೆ, ಡಾ. ವೂಡೇ ಪಿ. ಕೃಷ್ಣ, ಮೂಡ್ನಾಕೂಡು ಚಿನ್ನಸ್ವಾಮಿ, ರಾಹುಲ್ ಖರ್ಗೆ, ಮಲ್ಲೇಪುರಂ ವೆಂಕಟೇಶ್, ಜೀರಿಗೆ ಲೋಕೇಶ್, ಇಂದಿರಾ ಕೃಷ್ಣಪ್ಪ, ಡಾ. ರಾಮಲಿಂಗೇಶ್ವರ ಚಿತ್ರದಲ್ಲಿದ್ದಾರೆ.



ಪುಸ್ತಕ ವಿಭಾಗ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

The next summer there was more excitement when Luther returned from the county seat with the news that "all the white folks are jes' carry in' on, hollerin' an' laughlin'. Some thin' 'bout some Declaration of Independence." The old gardener shook his head. "Ain't nothin' neither way for niggers to holler 'bout. England or here, dey's white folks."

In 1778 Bell brought the news that slaves were being promised their freedom if they would join the army as fiefs or pioneers. Someone asked what pioneers meant. The fiddler replied, "It means get stuck up front and git kilt. And when Bell reported later that two states-South Carolina and Georgia-would not let slaves enlist, the fiddler had a quick retort: "Dat's the only thing good I ever heard 'bout neither one of dem!"

In May 1781 came the astounding story that redcoats on horses had ruined Massa Thomas Jefferson's plantation. Then Luther reportedthat Massa George Washington's army was coming to save Virginia "an' niggers aplenty is in it!" That October, the army attacked England's General Cornwallis at Yorktown, and soon came the news. that set Slave Row shouting: Cornwallis had surrendered. "War am ober! The freedom am won!" Bell told everybody. "Massa say gon' be peace now." "Ain't gon' be no peace!" the fiddler said in his sour way. "Jes' watch what I tell you-it's gon' be worse'n it was for niggers.'

Slave Talk

SHORTLY after the war ended, Luther helped a slave girl run away. He was found out and sold at auction. Kunta took Luther's place as buggy driver, and the new job vastly broadened his world. Taking Dr. Waller on his rounds, he visited plantations all over the countryside, he saw poor whites, he went into the near-by towns. In the garden of one big house he saw a very black woman, who appeared to be of the Wolof tribe. Both her large breasts were hanging out, a toubob infant sucking at one, a black infant sucking at the other. When Kunta later described the sight, the old gardener said, "Ain't hardly a massa in Virginia ain't sucked a black mammy, or at least was raised by one."

To be continued...

ಎಂ.ಎನ್. ರಾಯ್ ಎಂಬ ಅನನ್ಯ ಸ್ವಾತಂತ್ರ್ಯ ಹೋರಾಟಗಾರ

ಸನತ್ ಕುಮಾರ್ ಬೆಳಗಲಿ

ಮಾನವೇಂದ್ರನಾಥ ರಾಯ್ ಅವರ ಮೊದಲ ಹೆಸರು ನರೇಂದ್ರನಾಥ ಭಟ್ಟಾಚಾರ್ಯ. ಜನಿಸಿದ್ದು ಅವಿಭಜಿತ ಬಂಗಾಳದ 24 ಪರಗಣ ಜಿಲ್ಲೆಯ ಅರಬೇಲಿಯ ಎಂಬ ಹಳ್ಳಿಯಲ್ಲಿ. 1887, ಮಾರ್ಚ್ 23ರಂದು ಜನಿಸಿದ ಮಾನವೇಂದ್ರನಾಥ ರಾಯ್ ಅವರ ತಂದೆ ದೀನಬಂಧು ಭಟ್ಟಾಚಾರ್ಯ ಸಂಸ್ಕೃತ ಶಿಕ್ಷಕರು. ಜೊತೆಗೆ ಅವರ ತಾಯಿಯ ಕಕ್ಕ ಶಿವನಾಥಶಾಸ್ತ್ರಿ ಯಜ್ಞೋಪನಿಷತ್ ಹರಿದೆಸೆದು ಅಂದಿನ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು.



ಭಾರತದ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಮಾನವೇಂದ್ರನಾಥ ರಾಯ್ ಅಸಾಮಾನ್ಯ ಬುದ್ಧಿವಂತ, ತತ್ವಶಾಸ್ತ್ರ ಪರಿಣಿತ, ಉತ್ತಮ ಬರಹಗಾರ, ಹೆಸರಾಂತ ವಾಕ್ಪಟು. ಇಷ್ಟೇ ಅಲ್ಲ ಮಹಾನ್ ಕ್ರಾಂತಿಕಾರಿ. ಇಂತಹ ರಾಯ್ ಅವರು ಆರಂಭದ ವರ್ಷಗಳಲ್ಲಿ ಮೆಕ್ಸಿಕೊ ನಂತರ ಸೋವಿಯತ್ ರಷ್ಯಾದಲ್ಲಿ ನೆಲೆಸಿದ್ದರು. ಲೆನಿನ್ ನಿಧನ ನಂತರ ಸ್ವದೇಶಕ್ಕೆ ಬಂದ ರಾಯ್ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಪಂಡಿತ್ ಜವಹರಲಾಲ್ ನೆಹರೂ, ಚಿತ್ತರಂಜನದಾಸ್ ಮುಂತಾದವರ ಸಂಪರ್ಕ ಹೊಂದಿದ್ದ ರಾಯ್ ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಶೌಕತ್ ಉಸ್ಮಾನಿ, ಎಸ್.ಎ.ಡಾಂ.ಗೆ ಗುಲಾಮ್ ಹುಸೇನ್, ನಲೀನಿ ಗುಪ್ತಾ ಅವರೊಂದಿಗೆ ಪಾಲ್ಗೊಂಡರು. ಬ್ರಿಟಿಷ್ ಸರ್ಕಾರ ಕಮ್ಯುನಿಸ್ಟ್ ಚಳುವಳಿಯನ್ನು ಹತ್ತಿಕ್ಕಲು ಕಾನಪುರ ಪಿತೂರಿ ಖಟ್ಲೆಯನ್ನು ಇವರ ಮೇಲೆ ಹಾಕಿ ಜೈಲಿಗೆ ಕಳಿಸಿತು. ಪ್ರಾಥಮಿಕ ವ್ಯಾಸಂಗ ಮಾಡುವಾಗಲೇ ಬಂಗಾಳದ ಕ್ರಾಂತಿಕಾರಿ ನಾಯಕ ಜತಿನ್ ಮುಖರ್ಜಿ ಜೊತೆ ಸೇರಿ ಉಗ್ರ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಮುಳುಗಿದ ರಾಯ್ ಚಿಕ್ಕ ವಯಸ್ಸಿನಲ್ಲೇ ಕ್ರಾಂತಿಕಾರಿ ಹೋರಾಟಕ್ಕೆ ವಿದೇಶಿ ಬೆಂಬಲ ಪಡೆಯಲು ಜಪಾನ್ ಮತ್ತು ಚೀನಾಗಳಿಗೆ ಪ್ರಯಾಣ ಬೆಳೆಸಿದರು. ಸಶಸ್ತ್ರ ಹೋರಾಟದ ಮೂಲಕ ಮಾತ್ರ ಬ್ರಿಟಿಷ್ ಆಡಳಿತದಿಂದ ಭಾರತವನ್ನು ಮುಕ್ತ ಮಾಡಲು ಸಾಧ್ಯ ಎಂದು ನಂಬಿದ ರಾಯ್ ಅವರು ಅಮೆರಿಕಾಕ್ಕೆ ಹೋದಾಗ ಸ್ಟಾನ್ಫರ್ಡ್ ಯೂನಿವರ್ಸಿಟಿಯಲ್ಲಿ ಓದುತ್ತಿದ್ದ ಕಮ್ಯುನಿಸ್ಟ್ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರ ಸಂಪರ್ಕದಿಂದಾಗಿ ಸಮತಾವಾದಿಯಾಗಿ ಬದಲಾದರು. ಅಲ್ಲೇ ಈವಲಿನ್ ಟ್ರೆಂಟ್ ಎಂಬ ಉಗ್ರ ಕ್ರಾಂತಿಕಾರಿ ಯುವತಿಯ ಪರಿಚಯವಾಗಿ ಮದುವೆಯಾದರು.

ಯಾವುದೇ ದೇಶದಲ್ಲಿ ಸಮಾಜವಾದಿ ಕ್ರಾಂತಿ ಬರೀ ಕಾರ್ಮಿಕ ವರ್ಗದಿಂದ ಸಾಧ್ಯವಿಲ್ಲ ವಿದ್ಯಾವಂತ ಮಧ್ಯಮವರ್ಗವೂ ಕ್ರಿಯಾಶೀಲವಾದರೆ ಮಾತ್ರ ಕ್ರಾಂತಿ ಯಶಸ್ವಿಯಾಗುತ್ತದೆ ಎಂದು, ವಿನೂತನ ರಾಜಕೀಯ ನಿಲುವನ್ನು ಪ್ರತಿಪಾದಿಸಿದ ರಾಯ್ ಹಲವಾರು ಭಾಷೆಗಳಲ್ಲಿ ಮತ್ತು ವಿಷಯಗಳಲ್ಲಿ ಪಾಂಡಿತ್ಯ ಪಡೆದಿದ್ದರು. ಆಗ ಮುಂಬೈಯಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ ಒಡನಾಟ ಹೊಂದಿದ್ದ ಮಾನವೇಂದ್ರನಾಥ ರಾಯ್ ಲೆನಿನ್ ಮತ್ತು ಸ್ಟಾಲಿನ್ ಜೊತೆಗಿನ ಕೆಲ ತಾತ್ವಿಕ ಭಿನ್ನಾಬಿಪ್ರಾಯಗಳ ಕಾರಣದಿಂದ ಕಮ್ಯುನಿಸ್ಟ್ ಪಕ್ಷದಿಂದ ದೂರ ಸರಿದು ತಮ್ಮದೇ ಆದ ರಾಡಿಕಲ್ ಡೆಮಾಕ್ರಟಿಕ್ ಪಾರ್ಟಿಯನ್ನು ಸ್ಥಾಪಿಸಿದರು. ಭಾರತಕ್ಕೆ ಬಂದ ಮಾನವೇಂದ್ರನಾಥ ರಾಯ್ ದೇಶದ ತುಂಬಾ ಸಂಘಟನೆ ಕಟ್ಟಲು ಪ್ರವಾಸ ಕೈಗೊಂಡರು. ಆಗ ಕರ್ನಾಟಕದ ಹುಬ್ಬಳ್ಳಿ, ದಾರವಾಢ, ಬೆಳಗಾವಿ ಮುಂತಾದ ನಗರಗಳಲ್ಲಿ ಅವರ ಉಪನ್ಯಾಸ ಏರ್ಪಡಿಸಲಾಗಿತ್ತು. ಆಗ ಧಾರವಾಡದಲ್ಲಿ ವ್ಯಾಸಂಗ ಮಾಡುತ್ತಿದ್ದ ಕನ್ನಡದ ಹಿರಿಯ ಸಾಹಿತಿ ಶಾಂತಿನಾಥ ದೇಸಾಯಿ, ವಿಮರ್ಶಕ ಜಿ.ಎಸ್. ಅಮೂರ, ಎಸ್.ಆರ್. ಬೊಮ್ಮಾಯಿ ಹಾಗೂ ಹುಬ್ಬಳ್ಳಿಯ ಬೇವೂರ ಅವರು ರಾಯ್ ವಿಚಾರ ಧಾರೆಯಿಂದ ಪ್ರಭಾವಿತರಾಗಿ ಅವರ ಸಂಘಟನೆ ಕಟ್ಟಲು ಶ್ರಮಿಸಿದ್ದರು. ಎಸ್.ಆರ್. ಬೊಮ್ಮಾಯಿ, ಶಾಂತಿನಾಥ ದೇಸಾಯಿ ಮತ್ತು ಜಿ.ಎಸ್. ಅಮೂರ ಈ ಮೂವರು ಸಹಪಾಠಿಗಳಾಗಿದ್ದರು ಎಂಬುದು ಗಮನಾರ್ಹ.

ಎಸ್.ಆರ್. ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಮಾನವೇಂದ್ರನಾಥ ರಾಯ್ ಅವರ ನವ ಮಾನವತಾವಾದ ಪುಸ್ತಕವನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಿದ್ದರು ಹಾಗೂ ರಾಯ್ ಜನ್ಮದಿನದಂದು ವಿಶೇಷ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಏರ್ಪಡಿಸಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ವಿಭಿನ್ನವಾಗಿ ಚಳವಳಿಯ ಆರಂಭದ ದಿನಗಳಲ್ಲಿ ಅಪಾರ ಕೊಡುಗೆ ನೀಡಿದ ಮಾನವೇಂದ್ರನಾಥ ರಾಯ್ 1954 ಜನವರಿ 25ರಂದು ಕೊನೆಯುಸಿರೆಳೆದರು.

ದೇಶದ ಹೆಸರಾಂತ ನ್ಯಾಯವಾದಿ, ಮಾನವ ಹಕ್ಕುಪರ ಹೋರಾಟಗಾರ ವಿ.ಎಂ. ತಾರ್ಕುಂಡೆ, ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಮುಂತಾದ ಚಿಂತಕರು ಮಾನವೇಂದ್ರನಾಥ ರಾಯ್ ಅವರ ಚಿಂತನೆಗಳಿಂದ ಪ್ರಭಾವಿತರಾಗಿದ್ದರು. ಈಗಲೂ ರಾಡಿಕಲ್ ಹ್ಯುಮಾನಿಸಟ್ ಎಂಬ ಮಾಸಿಕ ಪತ್ರಿಕೆ ಬರುತ್ತಿದೆ. ಮಾನವೇಂದ್ರನಾಥ ರಾಯ್ ಅವರ ಅನೇಕ ವೈಚಾರಿಕ ಗ್ರಂಥಗಳು ಇಂದಿಗೂ ಪ್ರಸ್ತುತವಾಗಿವೆ. ಸಮಾನತೆ, ವ್ಯಕ್ತಿ ಸ್ವಾತಂತ್ರ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕರಾಗಿದ್ದ ಮಾನವೇಂದ್ರನಾಥ್ ರಾಯ್ ಸ್ಟಾಲಿನ ಕಾಲದಲ್ಲಿ ರಷ್ಯಾದಲ್ಲಿ ನಡೆದ ಅತಿರೇಕಗಳ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಅರವಿಂದ ಘೋಷ್ (1872-1950)

ಸ್ವಾತಂತ್ರ್ಯ ಹೋರಾಟಗಾರರಾದ ಅರವಿಂದ ಘೋಷ್ ಅವರು. ಕವಿ, ನಾಟಕಕಾರ, ವಿಮರ್ಶಕ. ಸಾಹಿತಿ, ತತ್ವಜ್ಞಾನಿಯಾಗಿದ್ದರು. ಇವರು ಕೃಷ್ಣಧನ ಘೋಷ್ ಮತ್ತು ಸ್ವರ್ಣಲತಾದೇವಿ ದಂಪತಿಗಳಿಗೆ ಪುತ್ರರಾಗಿ ಜನಿಸಿದರು. 1879-92ವರೆಗೆ, ಹದಿನಾಲ್ಕು ವರ್ಷಗಳ ಕಾಲ ಮ್ಯಾಂಚೆಸ್ಟರ್, ಲಂಡನ್, ಕೇಂಬ್ರಿಡ್ಜ್‌ಗಳಲ್ಲಿ ಅಧ್ಯಯನಮಾಡಿ ಲ್ಯಾಟಿನ್, ಗ್ರೀಕ್ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದಿದ್ದ ಅರವಿಂದರು ಮಹಾತ್ಮರೆಲ್ಲರ ವಿಚಾರಧಾರೆಗಳನ್ನು ವಿಮರ್ಶಿಸಿ, ಮಹತ್ವಪೂರ್ಣ ಪೂರ್ಣಯೋಗಮಾರ್ಗವನ್ನು ಜನತೆಯ ಮುಂದೆ ಇರಿಸಿದ್ದಾರೆ. ಯೋಗಸಾಧನೆ ಕೇವಲ ಆತ್ಮಸಾಕ್ಷಾತ್ಕಾರಕ್ಕಾಗಿಯಲ್ಲ, ಅದು ಸಮಷ್ಟಿಯ ಉದ್ಧಾರಕ್ಕೆಂಬುದನ್ನು ಅರವಿಂದರು ಸ್ಪಷ್ಟಡಿಸಿದ್ದಾರೆ. ಅರವಿಂದರು ಆಧ್ಯಾತ್ಮಿಕ ಮಾರ್ಗದರ್ಶಕರಾಗಿ, ವಂದೇಮಾತರಂ ಮತ್ತು ಕರ್ಮಯೋಗಿ ಪತ್ರಿಕೆಗಳಲ್ಲಿ ಬರೆದ ವಿಪುಲ ಲೇಖನಗಳಿಂದ, ಪ್ರಕಟಿಸಿದ ಗ್ರಂಥಗಳಿಂದ, ಉಪದೇಶ ಪ್ರವಚನಗಳಿಂದ ಖ್ಯಾತರಾಗಿದ್ದಾರೆ. ತಮ್ಮ ವೈಚಾರಿಕತೆಯಿಂದ ಅರವಿಂದರು ಬೇಂದ್ರೆ, ಪುಟ್ಟಪ್ಪ, ಗೋಕಾಕರಂಥ ಹಲವಾರು ಸುಪ್ರಸಿದ್ಧ ಸಾಹಿತಿಗಳ ಮೇಲೆ ಗಣನೀಯ ಪ್ರಭಾವ ಬೀರಿದ್ದಾರೆ. ಬಂಕಿಮಚಂದ್ರ, ಮಧುಸೂದನದತ್, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಕೂರ್ ಕೃತಿಗಳನ್ನು ಅಧ್ಯಯನ ಮಾಡಿದರು. ಸ್ವಾಮಿ ವಿವೇಕಾನಂದರ ಕೃತಿಗಳ ಭಾಷೆಯ ಶಕ್ತಿ, ಗಾಂಭೀರ್ಯ, ಅವುಗಳ ರಸಾಸ್ವಾದನೆ ಅವರನ್ನು ಆಕರ್ಷಿಸಿತು. ಶ್ರೀ ರಾಮಕೃಷ್ಣ ಪರಮಹಂಸರ ವಚನಾಮೃತ, ಭರ್ತೃಹರಿಯ ನೀತಿಶತಕ, ಕಾಳಿದಾಸನ ವಿಕ್ರಮೋರ್ವಶೀಯ ಸಂಸ್ಕೃತ ಕೃತಿಗಳನ್ನೂ, ವಾಲ್ಮೀಕಿ ರಾಮಾಯಣ ಮತ್ತು ವ್ಯಾಸ ಭಾರತದ ಕೆಲವು ಭಾಗಗಳನ್ನೂ ಇಂಗ್ಲೀಷಿಗೆ ಭಾಷಾಂತರ ಮಾಡಿದ್ದಾರೆ.



ಗಂಗೂಬಾಯಿ ಹಾನಗಲ್ (05.03.1913-21.07.2009)

ಚಿಕ್ಕೂರಾವ್ ನಾಡಗೀರ ಮತ್ತು ಅಂಬಾಬಾಯಿ ದಂಪತಿಗಳಿಗೆ ಜನಿಸಿದ ಗಂಗೂಬಾಯಿ ಅವರ ಪ್ರಾಥಮಿಕ ಶಿಕ್ಷಣ ಧಾರವಾಡದ ಆಲೂರು ವೆಂಕಟರಾಯರು ಸ್ಥಾಪಿಸಿದ ರಾಷ್ಟ್ರೀಯ ಶಾಲೆಯಲ್ಲಿ ಆಯಿತು. 1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ, ಗಂಗೂಬಾಯಿ ಅವರು ಮಹಾತ್ಮಾ ಗಾಂಧೀಜಿ ಅವರೆದುರಿಗೆ "ಸ್ವಾಗತವು ಸ್ವಾಗತವು ಸಕಲ ಜನ ಸಂಕುಲಕೆ" ಎಂದು ಸ್ವಾಗತಗೀತೆಯನ್ನು ಹಾಡಿ ಗಾಂಧೀಜಿ ಅವರ ಹಾಗೂ ಸಭಿಕರ ಮೆಚ್ಚುಗೆ ಗಳಿಸಿದ್ದರು. ದತ್ತೋಪಂತ ದೇಸಾಯಿ, ಕೃಷ್ಣಾಚಾರ್ಯ ಹುಲಗೂರ ಇವರಿಂದ ಸಂಗೀತ ಶಿಕ್ಷಣ ಪಡೆದ ಗಂಗೂಬಾಯಿ, ಬಳಿಕ ಸುಪ್ರಸಿದ್ಧ ಕಿರಾನಾ ಘರಾನಾ ಗಾಯಕರಾದ ಸವಾಯಿ ಗಂಧರ್ವ ಯಾನೆ ರಾಮಭಾವು ಕುಂದಗೋಳಕರ ಅವರ ಶಿಷ್ಯೆಯಾಗಿದ್ದರು. ಎಚ್.ಎಮ್.ವಿ. ಗ್ರಾಮಾಫೋನ ಕಂಪನಿ ಅವರ ಆಹ್ವಾನದ ಮೇರೆಗೆ ಗಂಗೂಬಾಯಿ ಅವರು ಮುಂಬಯಿಗೆ ತೆರಳಿದರು. ಅಲ್ಲಿಂದ ಗಂಗೂಬಾಯಿ ಅವರ ಸಂಗೀತ ದಿಗ್ವಿಜಯ ಆರಂಭವಾಯಿತು. ಅವರು ಸಂಗೀತ ಕಚೇರಿಗಳಿಗಾಗಿ ಭಾರತದ ಉದ್ದಗಲಕ್ಕೂ ಸಂಚರಿಸಿದ್ದಾರೆ. ನೇಪಾಳ, ಪಾಕಿಸ್ತಾನ, ಅಮೇರಿಕಾ ಮತ್ತು ಕೆನಡಾ ಹಾಗು ಜರ್ಮನಿ ಮತ್ತು ಫ್ರಾನ್ಸ್ ದೇಶಗಳಿಗೂ ತೆರಳಿ ಭಾರತೀಯ ಸಂಗೀತದ ಸವಿಯನ್ನು ಉಣಬಡಿಸಿದ್ದಾರೆ. ಅವರು ಗುರುಗಳಾದ ಸವಾಯಿ ಗಂಧರ್ವರ ಹೆಸರಿನಲ್ಲಿ ಕುಂದಗೋಳದಲ್ಲಿ ಪ್ರತಿವರ್ಷ "ಸಂಗೀತೋತ್ಸವ" ನಡೆಸುವ ಪರಂಪರೆ ಆರಂಭಿಸಿದ್ದರು. ಇವರ ಸಂಗೀತ ಸೇವೆಗೆ ಪದ್ಮಭೂಷಣ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿ ಗೌರವಗಳು ಸಂದಾಯವಾಗಿವೆ.



ರೋಸಾಲಿಂಡ್ ಎಲ್ಸೀ ಫ್ರಾಂಕ್ಲಿನ್ (25 ಜುಲೈ 1920-16 ಎಪ್ರಿಲ್ 1968)

ರೋಸಾಲಿಂಡ್ ಫ್ರಾಂಕ್ಲಿನ್ ಲಂಡನ್ ನಗರದಲ್ಲಿ ಬ್ರಿಟಿಷ್ ಯೆಹೂದಿ ಕುಟುಂಬದಲ್ಲಿ ಜನಿಸಿದ್ದರು. ಪ್ರಖ್ಯಾತ ರಸಾಯನತಜ್ಞೆ ಮತ್ತು ಕ್ಷ-ಕಿರಣ ಸ್ಫಟಿಕ ವಿಜ್ಞಾನಿ, ಡಿ.ಎನ್.ಎ (ಡಿ ಆಕ್ಸಿ ರೈಬೊನ್ಯುಕ್ಲಿಕ್ ಆಸಿಡ್), ಆರ್.ಎನ್.ಎ (ರೈಬೊನ್ಯುಕ್ಲಿಕ್ ಆಸಿಡ್), ವೈರಾಣು, ಕಲ್ಲಿದ್ದಲು ಮತ್ತು ಗ್ರ್ಯಾಫೈಟ್‌ಗಳ ಆನ್ವಯಕ ರಚನೆಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ಇವರ ಕೊಡುಗೆಗಳು ಅಪಾರ. ಫ್ರಾಂಕ್ಲಿನ್ ಅಸಾಧಾರಣ ತಾರ್ಕಿಕ ಸಾಮರ್ಥ್ಯ ಹೊಂದಿದ್ದು 15 ವರ್ಷದವರಾಗಿದ್ದಾಗ ವಿಜ್ಞಾನಿಯಾಗಲು ನಿರ್ಧರಿಸಿದ್ದರು. ಫ್ರಾಂಕ್ಲಿನ್ ತಮ್ಮ ಭೌತರಸಾಯನ ವಿಜ್ಞಾನದ ಜ್ಞಾನವನ್ನು ಉಪಯೋಗಿಸಿ, ಕ್ಷ-ಕಿರಣ ಸ್ವರೂಪಗಳನ್ನು ಸುಲಭವಾಗಿ ಮತ್ತು ನಿಖರವಾಗಿ ವಿವರಿಸುವ ಸಲುವಾಗಿ ಅತ್ಯಂತ ತೆಳುವಾದ ಫೈಬರ್‌ಗಳನ್ನು ತಯಾರಿಸಿದರು. ಇವರು ಡಿ.ಎನ್.ಎ.ಯ 'ಎ' ಮತ್ತು 'ಬಿ' ರೂಪಗಳನ್ನು ಆವಿಷ್ಕರಿಸಿದರು. ಫ್ರಾಂಕ್ಲಿನ್ ಅವರು 'ನೇಚರ್' ಸಂಚಿಕೆಯಲ್ಲಿನ ಡಿ.ಎನ್.ಎ.ಯ ಕ್ಷ-ಕಿರಣ ಚಿತ್ರದ ಬಗ್ಗೆ ಹೆಚ್ಚು ಸ್ಪಷ್ಟಪಡಿಸಿದ ಮೊದಲ ಪ್ರಕಟಣೆಯಾಗಿತ್ತು. 'ಡಬಲ್ ಹೆಲಿಕ್ಸ್' ಡಿ.ಎನ್.ಎ ಇತಿಹಾಸವನ್ನು ತನಿಖೆ ಮಾಡಲು ಹಲವರಿಗೆ ಸ್ಫೂರ್ತಿಯಾಯಿತು ಮತ್ತು ಫ್ರಾಂಕ್ಲಿನ್‌ರ ಕೊಡುಗೆ ಅಲ್ಲಿಂದಾಚೆಗೆ ಡಬಲ್ ಹೆಲಿಕ್ಸ್ ಮಾರ್ಗವನ್ನು ಅನುಸರಿಸಿದವರಿಗೆ ಮೂಲ ವಸ್ತುಗಳ ಬಗ್ಗೆ ಮಾಹಿತಿಯನ್ನು ಒದಗಿಸಿತ್ತು. ಫ್ರಾಂಕ್ಲಿನ್ ತಮ್ಮ ಉಪನ್ಯಾಸದಲ್ಲಿ ಡಿ.ಎನ್.ಎ ಅಣುವಿನ ಎರಡು ರೂಪಗಳನ್ನು ಮಂಡಿಸಿದರು ಮತ್ತು ಫಾಸ್ಫೇಟ್ ಘಟಕಗಳು ಅಣುವಿನ ಬಾಹ್ಯ ಭಾಗದಲ್ಲಿ ಇದೆ ಮತ್ತು ಅಣುವಿನ ಸ್ಥಿರತೆ ವಿಷಯದಲ್ಲಿ ಗಮನಾರ್ಹ ಪ್ರಾಮುಖ್ಯತೆಯನ್ನು ಹೊಂದಿರುವ ನೀರು ಅಣುವಿನಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿದೆ ಎಂಬ ವಿಷಯಗಳನ್ನು ತಿಳಿಸಿದರು. ವೈಜ್ಞಾನಿಕ ಕ್ಷೇತ್ರದಲ್ಲಿನ ಸಾಧನೆಗಾಗಿ ಹಲವಾರು ಗೌರವ ಪುರಸ್ಕಾರಗಳು ಅರಸಿ ಬಂದಿವೆ.

ಇವರಿಗೆ,



Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049